ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೮-೦೯ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ

ನಿಬಂಧಕಾರರು

ಅರುಣಕುಮಾರ ಹೆಚ್.ಎಸ್.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಪಿ. ಬೆಟ್ಟೇಗೌಡ

ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಕಾಲೇಜು
ವಿಜಯನಗರ, ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೮-೦೯

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೦–೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ

ನಿಬಂಧಕಾರರು

ಅರುಣಕುಮಾರ ಹೆಚ್.ಎಸ್.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಪಿ.ಬೆಟ್ಟೇಗೌಡ

ಸಹ ಪ್ರಾಧ್ಯಾಪಕರು

ಸರ್ಕಾರಿ ಮಹಿಳಾ ಕಾಲೇಜು

ವಿಜಯನಗರ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೦–೧೧

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS/00486**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ಅರುಣಕುಮಾರ ಹೆಚ್.ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ **"ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೧೫-೦೬-೨೦೧೧

(ಡಾ. ಪಿ. ಬೆಟ್ಟೇಗೌಡ)
ಮಾರ್ಗದರ್ಶಕರು
ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಕಾಲೇಜು
ವಿಜಯನಗರ, ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS/00486**ರ ವಿದ್ಯಾರ್ಥಿಯಾದ ನಾನು ೨೦೧೦-೧೧ನೇ ಸಾಲಿನ ಪರೀಕ್ಷೆಗಾಗಿ **ಡಾ. ಪಿ.ಬೆಟ್ಟೇಗೌಡ,** ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಕಾಲೇಜು, ವಿಜಯನಗರ, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೧೫-೦೬-೨೦೧೧

(ಅರುಣಕುಮಾರ ಹೆಚ್.ಎಸ್.)
೨೦೧೦-೧೧ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ

ಪರಿವಿಡಿ

*****

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಸಾಹಿತ್ಯವು ನಿಂತ ನೀರಿನ ಮಡುವಿನಂತಲ್ಲ, ಅದು ಸದಾ ಸರಾಗವಾಗಿ ಹರಿಯುವ ಜೀವಸೆಲೆಯ ನದಿಯಿದ್ದಂತೆ. ಸಾಹಿತ್ಯದಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡಿವೆ. ಕಥೆ, ಕಾದಂಬರಿ, ನಾಟಕ, ವಿಮರ್ಶೆ ಇತ್ಯಾದಿ ಹೊಸ ಹೊಸ ರೂಪಗಳು ತಳೆದಂತೆ ಸಾಹಿತ್ಯದ ಸೊಬಗು ವಿಸ್ತೃತವಾಗುತ್ತಾ ಹೋಗುತ್ತದೆ. ಸಾಹಿತ್ಯ ಮನುಷ್ಯನ ಬುದಕನ್ನು ಪ್ರತಿಬಿಂಬಿಸುವ ನಿಲುವುಗನ್ನಡಿಯಿದ್ದಂತೆ. ಆ ಕಾರಣಕ್ಕಾಗಿ ಅದನ್ನು ಡಾ. ಜಿ.ಎಸ್.ಶಿವರುದ್ರಪ್ಪ ಅವರು "ಮಾನವನ ಜೀವನದ ಪ್ರತಿಬಿಂಬವು ಹೌದು! ಗತಿ ಬಿಂಬವೂ ಹೌದು" ಎಂದಿದ್ದಾರೆ. ನಮ್ಮ ಅರಿವಿಗೆ ಬಂದಿರುವಂತೆ ಮಾನವನ ಜೀವನದ ಪ್ರತಿಬಿಂಬವಾದ ಸಾಹಿತ್ಯದಲ್ಲಿಯೂ ಇಂತಹ ಸ್ಥಿತ್ಯಂತರಗಳು ನಿರಂತರವಾಗಿರುತ್ತವೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಸರಿಸುಮಾರು ೧೫೦೦ಕ್ಕೂ ಅಧಿಕ ವರ್ಷಗಳ ಇತಿಹಾಸವಿದೆ. ಅದರ ನಡುವೆಯೂ ಸಾಕಷ್ಟು ಏರಿಳಿತಗಳನ್ನು ಅದು ಕಂಡಿದೆ. ಇಷ್ಟು ದೀರ್ಘವಾದ ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತ ಹಾಗೆ ಸಾಕಷ್ಟು ಪ್ರಮಾಣದಲ್ಲಿ ಅಧ್ಯಯನಗಳು, ಸಂಶೋಧನೆಗಳು ನಡೆದಿವೆ. ನಡೆಯುತ್ತಲೂ ಇವೆ. ಆದರೆ ಇಂಥ ಸಮೃದ್ಧ ಕನ್ನಡ ಸಾಹಿತ್ಯ ಚರಿತ್ರೆಯ ಒಳಹೊಕ್ಕು ನೋಡಿದಾಗ ಮಹಿಳೆಯರ ಗೈರುಹಾಜರಿ ನಮಗೆ ಎದ್ದು ಕಾಣುತ್ತದೆ. ಹನ್ನರಡನೆಯ ಶತಮಾನದ ವಚನ ಸಾಹಿತ್ಯ ಚಳವಳಿಯ ಸಂದರ್ಭವನ್ನು ಬಿಟ್ಟರೆ ಮಹಿಳೆಯರ ಸಾಹಿತ್ಯವನ್ನು ಕಾಣಲು ನಾವು ಆಧುನಿಕ ಕಾಲಕ್ಕೆ ಬರಬೇಕಾಗುವುದು ವಚನ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರ ಸಾಹಿತ್ಯಾಭಿವ್ಯಕ್ತಿಗೆ ಪ್ರೋತ್ಸಾಹ ದೊರಕಿತು. ಹಾಗಾಗಿ ನಾವು ಮೊದಲ ಬಾರಿಗೆ ಮಹಿಳಾಧನಿಯನ್ನು ಗುರುತಿಸಲು ಸಾಧ್ಯವಾಗುವುದು ಅಕ್ಕ ಮಹಾದೇವಿಯ ವಚನಗಳಲ್ಲಿ. ಅಕ್ಕ ಅಲ್ಲಿ ಲೌಕಿಕ ಜಗತ್ತನ್ನು ನಿರಾಕರಿಸುತ್ತಲೇ ಅದನ್ನು ಎದುರಿಸುವ ನಿಟ್ಟಿನಲ್ಲಿ ಸಾಗುತ್ತಾಳೆ. ಗಂಡಿಗೆ ಹೆಣ್ಣು ಅಡ್ಡಿಯಾದಲ್ಲಿ ಹೆಣ್ಣಿಗೂ ಗಂಡು ಅಡ್ಡಿ ಎನ್ನುವ ಸ್ತ್ರೀಪರ ನಿಲುವನ್ನು ಶಿವಶರಣೆಯರು ತಳೆದರು.

ಆಧುನಿಕ ಕನ್ನಡ ಸಾಹಿತ್ಯ ಆರಂಭದಲ್ಲಿ ವಸಾಹತುಶಾಹಿ ಭಾರತದಲ್ಲಿ ಆಡಳಿತಾತ್ಮಕ ಪ್ರಕ್ರಿಯೆಗೆ ಸಹಾಯಕವಾಗಲೆನ್ನುವ ದೃಷ್ಟಿಯಿಂದ ಬ್ರಿಟಿಷರು ತೆರೆದ

ಶಿಕ್ಷಣದ ಅವಕಾಶವು ಪುರುಷರಲ್ಲಿ ಮಹಿಳೆಯ ದಯನೀಯ ಸ್ಥಿತಿಯ ಬಗೆಗೆ ವಿಚಾರ ಮಾಡಲು ಪ್ರೇರೇಪಿಸಿತು. ಇದರ ಮುಂದಿನ ಹಂತದಲ್ಲಿ ಮಹಿಳೆಗೆ ದೊರೆತ ಶಿಕ್ಷಣವು ಅವಳು ತನ್ನ ಸ್ಥಿತಿಯನ್ನು ಅರಿಯಲು ಅನುವು ಮಾಡಿಕೊಟ್ಟಿತು. ಜೊತೆಗೆ ದೇಶದ ಬಿಡುಗಡೆಯಾಗಿ ಮೊದಲ ಬಾರಿಗೆ ಮನೆಯಿಂದ ಹೊರ ಬಂದ ಮಹಿಳೆಯರು ನಿಧಾನವಾಗಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ದಿಸೆಯಲ್ಲಿ ಕ್ರಿಯಾಶೀಲರಾಗ–ತೊಡಗಿದರು. ಇದರ ಮುಂದುವರಿಕೆಯಾಗಿ ಮಹಿಳೆ ವರ್ತಮಾನದಲ್ಲಿ ಅಸ್ತಿತ್ವವನ್ನು ಅನಾವರಣಗೊಳಿಸುತ್ತ ತನ್ನ ಬೇಕು ಬೇಡಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸುವ ಆಲೋಚನಾ ಕ್ರಮವನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತಳಾದಳು. ಇದರಿಂದಾಗಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾಧನಿ ಕೇಳಲು ಸಾಧ್ಯವಾಯಿತು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ತಿರುಮಲಾಂಬ, ಕಲ್ಯಾಣಮ್ಮ ಮುಂತಾದವರು ತಮ್ಮ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯನ್ನು ಮುಖ್ಯವಾಗಿಟ್ಟು–ಕೊಂಡು ಬರವಣಿಗೆ ಮಾಡಿದರು. ಬಾಲ್ಯವಿವಾಹ, ವರದಕ್ಷಿಣೆ, ವಿಧವೆಯರ ಸಂಕಷ್ಟ, ದಾಂಪತ್ಯ ಬದುಕು ಮುಂತಾದವುಗಳನ್ನು ಕುರಿತು ಸಾಹಿತ್ಯದಲ್ಲಿ ಅನಾವರಣ–ಗೊಳಿಸಿದರು. ಅಲ್ಲದೆ ಗಿರಿಬಾಲೆ, ಶ್ಯಾಮಲಾದೇವಿ, ಕೊಡಗಿನ ಗೌರಮ್ಮ, ಬೆಳಕೆರೆ ಜಾನಕಮ್ಮ, ಲೀಲಾ ಕಾಮತ್ ಮುಂತಾದವರು ಮಹಿಳಾ ಸಂವೇದನೆಯನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ನಂತರ ತ್ರಿವೇಣಿ, ಎಂ.ಕೆ.ಇಂದಿರಾ, ವೈದೇಹಿ, ಸಾ.ರಾ.ಅಬೂಬಕ್ಕರ್ ಮುಂತಾದವರು ತಮ್ಮ ಕಥೆ, ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆಯನ್ನು ಸಾಂದ್ರವಾಗಿ ತಂದಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಸ್ಥಿತ್ಯಂತರಗಳನ್ನು ಕುರಿತು ಮಹಿಳಾ ಸಾಹಿತಿಗಳಿಗಿಂತ ಪುರುಷರೇ ಹೆಚ್ಚು ಬರೆದಿದ್ದಾರೆ. ನಮ್ಮಲ್ಲಿ ಮಹಿಳಾ ಸಂವೇದನೆ–ಯನ್ನು ಮಹಿಳೆಯರೆ ಬರೆದ ಸಾಹಿತ್ಯದಲ್ಲಿ ಮಾತ್ರ ಗುರುತಿಸುವ, ಹುಡುಕುವ ಪ್ರಕ್ರಿಯೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ. ಮಹಿಳೆಯರ ಬದುಕು ಅವರ ಇಷ್ಟ ಕಷ್ಟಗಳ ಕುರಿತು ಹಲವಾರು ಲೇಖಕರು ತಮ್ಮ ಸಾಹಿತ್ಯದಲ್ಲಿ ಅದರಲ್ಲೂ ವಿಶೇಷವಾಗಿ ಕಥಾ ಸಾಹಿತ್ಯದಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಮಹಿಳಾ ಸಂವೇದನೆಯನ್ನು ಕುರಿತ ಅಧ್ಯಯನಗಳ ಬೆಳವಣಿಗೆ ಕನ್ನಡದ ಸಂದರ್ಭದಲ್ಲಿ ನಡೆದಿದ್ದರೂ ಸಾಕಷ್ಟು ಪ್ರಮಾಣದಲ್ಲಿ ವಿಸ್ತಾರವಾಗಿ ನಡೆದಿಲ್ಲ. ಇಂತಹ ಅಧ್ಯಯನಗಳು ಮಹಿಳಾ ಬದುಕಿನ ಸೂಕ್ಷ್ಮಗಳನ್ನು ಅವಳ ಅಸ್ತಿತ್ವವನ್ನು ಆಕೆಯ ಸಾಮಾಜಿಕ ವ್ಯಕ್ತಿತ್ವ ಬದುಕು ಬವಣೆಗಳನ್ನು ವಿವರಿಸುವ ನಿಟ್ಟಿನಲ್ಲಿ ಪ್ರಮುಖ ಸಲಕರಣೆಗಳಾಗಿವೆ.

ಇಂಗ್ಲಿಷ್‌ನ 'ಸೆನ್ಸಿಬಿಲಿಟಿ' ಎಂಬ ಪದ ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ಸಂವೇದನೆ' ಎಂಬ ರೂಪದಲ್ಲಿ ಬಳಕೆಯಾಗುತ್ತಾ ಬರುತ್ತಿದೆ. "ಯಾವುದೇ ಅನುಭವಕ್ಕೆ ವ್ಯಕ್ತಿಯೊಬ್ಬನ ವಿಶಿಷ್ಟವಾದ ಭಾವನಾತ್ಮಕ ಮತ್ತು ಬೌದ್ಧಿಕ ಪ್ರತಿಕ್ರಿಯೆ" ಎಂಬ ಅರ್ಥದಲ್ಲಿ ಅದೊಂದು ತಾತ್ವಿಕ ಪರಿಭಾಷೆಯಾಗಿ ಹೊಸ ಹೊಸ ರೂಪ ಪಡೆದುಕೊಂಡು ಸ್ತ್ರೀ ಸಂವೇದನೆ, ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಎನ್ನುವ ಸೈದ್ಧಾಂತಿಕ ನೆಲೆಗಳಲ್ಲಿ ಬಳಕೆಯಲ್ಲಿದೆ.

'ಸ್ತ್ರೀ' ಸಂವೇದನೆ ಎನ್ನುವ ಮಾತು ಇತ್ತೀಚನದಾದರೂ ಸಂವೇದನೆ ಇತ್ತೀಚಿನದಲ್ಲ. ಅದರ ಸ್ವರೂಪ ಕಾಲಕಾಲಕ್ಕೆ ಬೇರೆ ಬೇರೆ ರೀತಿಯದಾಗಿರಬಹುದು. ಸಂಪ್ರದಾಯಬದ್ಧ ಸಾಮಾಜಿಕ ರಚನೆಯಲ್ಲಿ ಜಾತಿ, ವರ್ಗ, ವರ್ಣಗಳ ಅಸಮಾನತೆಯಂತೆ ಲಿಂಗ ಸಂಬಂಧಿ ಅಸಮಾನತೆಯೂ ಇದೆ. ಪುರುಷ ಕೇಂದ್ರಿತ ಸಮಾಜದಲ್ಲಿ ಹೆಣ್ಣನ್ನು ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಕಡೆಗಣಿಸಲಾಗಿದೆ. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ಪುರುಷನ ನೆರಳಿನಲ್ಲಿ ಅವನನ್ನು ಅನುಸರಿಸುತ್ತಾ ಬಂದಿದ್ದಾಳೆ. ಅವಳನ್ನು ದೇಶದ ದ್ವಿತೀಯ ದರ್ಜೆಯ ಪ್ರಜೆ ಎಂದು ಪರಿಗಣಿಸಲಾಗಿದೆ. ಆದರೆ ಇಂದಿನ ವೈಚಾರಿಕ ಸಂದರ್ಭದಲ್ಲಿ ಮಹಿಳೆಯರ ಸ್ಥಾನಮಾನಗಳಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಕಾಣುತ್ತಿದ್ದೇವೆ.

ಸಮಾನತೆಯನ್ನು ಬಿತ್ತಿ, ನ್ಯಾಯಪರತೆಯನ್ನು ಎತ್ತಿಹಿಡಿದು ಉತ್ತಮ ಸಮಾಜ-ವನ್ನು ಕಟ್ಟುವಲ್ಲಿ ಚಳವಳಿ ಪ್ರಮುಖ ಪಾತ್ರ ವಹಿಸುತ್ತದೆ. ಮಹಿಳಾ ಚಳವಳಿಯ ಮೊದಲ ಅಲೆ ಉಗಮವಾದದ್ದು ಪಾಶ್ಚಾತ್ಯರಲ್ಲಿ. ಅದು ಅಮೇರಿಕಾದಲ್ಲಿ ೧೯ನೇ ಶತಮಾನದ ಮಧ್ಯಭಾಗದಲ್ಲಿ. ಇದಕ್ಕೆ ಮೂಲ ಆ ಸಮಯದಲ್ಲಿ ಹುಟ್ಟಿಕೊಂಡ ಸಮಾನತೆ ಹಾಗೂ ಸ್ವಾತಂತ್ರ್ಯದ ತತ್ವಗಳು. ಈ ತತ್ವಗಳನ್ನು ಮಹಿಳೆಯರಿಗೂ ಅನ್ವಯಿಸಿಕೊಂಡು ಸ್ತ್ರೀವಾದಿ ಚಿಂತನೆಗಳು ಹುಟ್ಟಿಕೊಂಡವು. ಕನ್ನಡ ಸಾಹಿತ್ಯದ

ಸಂದರ್ಭದಲ್ಲಿ ೯೦ರ ದಶಕದ ಆರಂಭದಲ್ಲಿ ಸ್ತ್ರೀವಾದಿ ಚಳವಳಿ ಆರಂಭಗೊಂಡಿತು. ಪಾಶ್ಚಾತ್ಯ ಮೇರಿ ವುಲ್ಫ್‌ಸ್ಟನ್ ಕ್ರಾಫ್ಟ್, ವರ್ಜೀನಿಯಾವುಲ್ಫ್, ಸಿಮೋನ್‌ದ ಬೋವಾ, ಕೇಟ್‌ಮಿಲೆಟ್ ಮುಂತಾದ ಚಿಂತಕಿಯರ ಚಿಂತನೆಗಳ ಪ್ರೇರಣೆ ಪ್ರಭಾವಳನ್ನು ಪಡೆದು ಕನ್ನಡ ಸಾಹಿತ್ಯದಲ್ಲಿ ಮಹಿಳಾ ಚಳವಳಿ ಆರಂಭವಾಯಿತು. ಇದರ ಫಲವಾಗಿ ಸ್ತ್ರೀಪರ ಕಾಳಜಿಯುಳ್ಳ ಅಧ್ಯಯನಗಳು ಕನ್ನಡದಲ್ಲಿ ನಡೆದವು. ಹಾಗೂ ನಡೆಯುತ್ತಿವೆ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸ್ತ್ರೀ ಸಂವೇದನೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಹಲವು ಅಧ್ಯಯನಗಳು ಸೈದ್ಧಾಂತಿಕವಾಗಿ ನಡೆಯುತ್ತಿವೆ.

ಮಹಿಳೆಯರ ಬದುಕು, ಬವಣೆ, ಇಷ್ಟ ಕಷ್ಟಗಳು ಅವರ ಅಸ್ತಿತ್ವವನ್ನು ಕುರಿತ ಹಾಗೆ ತಮ್ಮ ಸಾಹಿತ್ಯ ಕೃತಿಗಳಲ್ಲಿ ಹಲವಾರು ಲೇಖಕಿಯರು ಅಭಿವ್ಯಕ್ತಿಸಿರುವಂತೆ ಸಾಕಷ್ಟು ಪ್ರಮಾಣದ ಲೇಖಕರು ಕೂಡ ಚಿತ್ರಿಸಿರುವುದನ್ನು ನಾವು ಕಾಣಬಹುದು. ಕನ್ನಡದ ಹಲವಾರು ಲೇಖಕರು ಈ ತರಹದ ಸಂವೇದನೆಗಳಿಗೆ ತಮ್ಮ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಿ ನೀಡಿದ್ದಾರೆ. ಈ ನಿಟ್ಟಿನಲ್ಲಿ ಕನ್ನಡದ ಬಹುಮುಖ್ಯ ಲೇಖಕರಾದ ಕೆ.ಪಿ.ಪೂರ್ಣಚಂದ್ರತೇಜಸ್ವಿ ಅವರು ಪ್ರಮುಖರೆನಿಸುತ್ತಾರೆ. ಇವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯು ಒಂದು ಪ್ರಬಲ ಲಕ್ಷಣವಾಗಿ ಕಂಡು ಬರುತ್ತದೆ.

'ತೇಜಸ್ವಿಯವರ ಕಥೆಗಳು ಮತ್ತು ಅವರ ಇತರೆ ಸಾಹಿತ್ಯ ಪ್ರಕಾರಗಳ ಮೇಲೆ ಬೇರೆ ಬೇರೆ ಆಯಾಮಗಳಲ್ಲಿ ಅಧ್ಯಯನಗಳು ನಡೆದಿವೆ. ಆದರೂ 'ಸ್ತ್ರೀ ಸಂವೇದನೆ' ಒಂದು ಪ್ರಬಲ ಆಶಯವಾಗಿ ಕಂಡುಬರುವ ಅವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯನ್ನು ಗುರುತಿಸಿ ಚಿಂತಿಸುವ, ಚರ್ಚಿಸಿ ವಿಶ್ಲೇಷಿಸುವ ಅಧ್ಯಯನಗಳು ನಡೆದಿರುವುದಿಲ್ಲ. ಈ ನಿಟ್ಟಿನಲ್ಲಿ ತೇಜಸ್ವಿ ಅವರ ಕಥೆಗಳ ಸ್ತ್ರೀ ಸಂವೇದನೆಯನ್ನು ಕುರಿತ ಪ್ರಸ್ತುತದ ಈ ಅಧ್ಯಯನವು ಅವರ ಸಾಹಿತ್ಯಕ್ಕೆ ಮತ್ತಷ್ಟು ನ್ಯಾಯ ದೊರಕಿಸಿಕೊಡಬೇಕೆಂಬ ಉದ್ದೇಶ-ವನ್ನು ಹೊಂದಿದೆ.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಮಹತ್ವದ ಲೇಖಕರಲ್ಲೊಬ್ಬರು. ಮಹಾಕವಿ ಕುವೆಂಪು ಅವರ ಮಗನಾಗಿದ್ದರೂ ಅವರ ಚಿಂತನೆ, ದರ್ಶನ, ಪ್ರಭಾವದಿಂದ ಹೊರಬಂದು ತಮ್ಮದೇ ಭಿನ್ನ ಚಿಂತನೆ, ಆದರ್ಶ, ಅನುಭವಗಳ ಅಭಿವ್ಯಕ್ತಿ ಮಾರ್ಗವನ್ನು ಕಂಡುಕೊಂಡು ಪ್ರಸಿದ್ಧರಾದರು. "ತೇಜಸ್ವಿ ಬರೆದಿರುವುದು ಕೆಲವೇ ಕೃತಿಗಳನ್ನಾದರೂ ಅವರ ರಚನೆಗಳು ಆಳ ಮತ್ತು

ಸಂಕೀರ್ಣತೆಯನ್ನು ಒಳಗೊಂಡಿವೆ. ಆದ್ದರಿಂದ ವೈವಿಧ್ಯ ಎನ್ನುವುದು ಮೇಲು ಮೇಲಿನ ಸಮಸ್ಯೆಗಳಿಗಿಂತ ಹೆಚ್ಚಾಗಿ ನಿಸರ್ಗ ಮತ್ತು ಬದುಕಿನ ಅನಂತ ಮಗ್ಗಲುಗಳ ಅನ್ವೇಷಣೆಯಲ್ಲಿ ಕಂಡುಬರುತ್ತವೆ. ವಿದ್ಯಾರ್ಥಿ ದೆಸೆಯಲ್ಲಿ 'ಲಿಂಗಬಂಧ'ದಂತಹ ಮುಗ್ಧ ಕಣ್ಣುಗಳ ಮೂಲಕ ನಂಬಿಕೆಗಳ ಸ್ತರಗಳನ್ನು ಸುಲಿಯುತ್ತ ಮನಸ್ಸಿನ ಮೇಲಾಗುವ ಪರಿಣಾಮಗಳನ್ನು ಚಿತ್ರಿಸುವ ಕಥೆಯಿಂದ ತೊಡಗಿ ಹಲವು ಆಯಾಮಗಳನ್ನು ಒಳಗೊಂಡು ಅತ್ಯಂತ ಕಲಾತ್ಮಕವಾಗಿ ರಚಿತವಾಗಿರುವ 'ಚಿದಂಬರ ರಹಸ್ಯ'ದವರೆಗೂ ಅವರ ಮನೋಧರ್ಮದ ಅನನ್ಯತೆಯನ್ನು ವೈಶಿಷ್ಟ್ಯವನ್ನು ಗುರುತಿಸಬಹುದಾಗಿದೆ. ಮೂಢ ನಂಬಿಕೆಗಳು, ಆಷಾಡಭೂತಿತನ, ಶೋಷಣೆಗಳು, ಸಭ್ಯತೆಯ ಸೋಗಿನ ಬಗೆಗೆ ಬಂಡಾಯ- ಪ್ರತಿಭಟನೆಯ ಚಿಂತನಾ ಪ್ರವೃತ್ತಿ ಅವರು ಬರೆದ ಒಂದೇ ನಾಟಕದಲ್ಲಿ ತಿರುವನ್ನು ಪಡೆದು ನಿಸರ್ಗ- ನಾಗರಿಕತೆಯ ವಿಸ್ತಾರ ಭಿತ್ತಿಯ ಕಡೆ ಹೊರಳುತ್ತದೆ. ನವೋದಯದ ಭಾವುಕತನವನ್ನು ಕಳಚಿಕೊಂಡು ನವ್ಯರ ವ್ಯಕ್ತಿ ಪ್ರಜ್ಞಾಕೇಂದ್ರಿತ ಕಣ್ಣುಪಟ್ಟಿಯಿಂದಾಚೆಗೂ ದೃಷ್ಟಿ ಹೊರಳುತ್ತದೆ. ನಿಸರ್ಗ ಹಾಗೂ ನಾಗರಿಕತೆಗಳ ಸಹಜ ವಿಕಾಸಕ್ಕೆ ಭಂಗ ತಂದ ಲಯಭಂಗದಿಂದಾದ ಕಲಕಿದ ವಾತಾವರಣ ವಿಶ್ವ ಹಾಗೂ ಮಾನವ ಅಂತರಂಗಗಳ ನಿಗೂಢ ರಹಸ್ಯಗಳಿಂದ ಸಾಂಸ್ಕೃತಿಕ, ಸಾಮಾಜಿಕ ಮೌಲ್ಯಚ್ಛೇದಗಳಿಂದ ನಿಸರ್ಗ ಸಮಾಜ ಸಂಬಂಧ, ಸಮಾಜ ವ್ಯಕ್ತಿಗಳ ಸಂಬಂಧ, ಜೀವ ಸ್ವಭಾವಜನ್ಯ ಅಂತರ್ಭೋಧನೆಗೂ ವಿದ್ಯೆ ಜ್ಞಾನಗಳಿಗೂ ಇರುವ ಸಂಬಂಧ, ಮೌಢ್ಯ, ವಿಜ್ಞಾನ, ತತ್ವ ಜ್ಞಾನಗಳ ಸಂಬಂಧಗಳವರೆಗೆ ಅವರ ಚಿಂತನೆ ವ್ಯಾಪಕವಾಗಿ ಹರಿದಿದೆ."[೧] ಹೀಗಾಗಿ ನವೋದಯ ನವ್ಯ, ನವ್ಯೋತ್ತರ ಸಾಹಿತ್ಯಗಳ ಅವಧಿಯಲ್ಲಿ ಬರೆದರೂ ಸಂಪೂರ್ಣ ಭಿನ್ನವಾದ ಮೌಲ್ಯಗಳ ದೃಷ್ಟಿ ಮತ್ತು ಅಭಿವ್ಯಕ್ತಿಯ ಮಾರ್ಗವನ್ನು ಕಂಡುಕೊಂಡು ಪ್ರತ್ಯೇಕವಾಗಿ ನಿಲ್ಲುವ ವ್ಯಕ್ತಿಯಾಗುತ್ತಾರೆ ತೇಜಸ್ವಿ.

ತೇಜಸ್ವಿ ಕಾದಂಬರಿ, ಸಣ್ಣಕಥೆ, ಕಾವ್ಯ, ನಾಟಕ, ವಿಮರ್ಶೆ, ಅನುವಾದ ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲೂ ಕೃಷಿ ಮಾಡಿದವರು. ಇವರ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಬಹಳ ವಿಶಿಷ್ಟವಾದ ಪ್ರಕಾರ ಎಂದರೆ ಕಥಾ ಸಾಹಿತ್ಯ. ತೇಜಸ್ವಿ ಅವರು ೧೯೫೭ರಿಂದ ಕಥೆಗಳನ್ನು ಬರೆಯಲು ಆರಂಭಿಸಿ 'ಹುಲಿಯೂರಿನ ಸರಹದ್ದು (೧೯೬೩), ಅಬಚೂರಿನ ಪೋಸ್ಟಾಫೀಸು' (೧೯೭೧) ಮತ್ತು ಕಿರಗೂರಿನ

---

೧. ಜಿ.ಎಸ್.ಸಿದ್ಧಲಿಂಗಯ್ಯ, ಸಾಲು ದೀಪಗಳು, ಎಂ.ಎಚ್.ಕೃಷ್ಣಯ್ಯ(ಸಂ.), ೨೦೦೧, ಪು. ೫೦೩

ಗಯ್ಯಾಳಿಗಳು' (೧೯೯೧) ಎಂಬ ಮೂರು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ನವ್ಯ ಸಾಹಿತ್ಯದ ಕಾಲದಲ್ಲಿ ಕಥೆಗಳನ್ನು ಬರೆಯಲು ಪ್ರಾರಂಭಿಸಿದ ತೇಜಸ್ವಿ ಮೂರು ದಶಕಗಳ ಅವಧಿಯಲ್ಲಿ ಅನೇಕ ಮಹತ್ವದ ಕಥೆಗಳನ್ನು ಬರೆದಿದ್ದಾರೆ. ಮಲೆನಾಡಿನ ಗ್ರಾಮೀಣ ಪರಿಸರ ಇವರ ಕಥೆಗಳಲ್ಲಿ ಸ್ಥಾಯಿಯಾಗಿದೆ. ತೇಜಸ್ವಿಯವರ ಎಲ್ಲ ಕಥೆಗಳಲ್ಲಿ ಸ್ತ್ರೀ ಪಾತ್ರಗಳ ಚಿತ್ರಣದಲ್ಲಿ ಕೊರತೆ ಇದೆ. ಬೆರಳೆಣಿಕೆಯಷ್ಟು ಮಾತ್ರ ಸ್ತ್ರೀ ಪಾತ್ರಗಳು ಬಂದರೂ, ಅಲ್ಲಿನ ಅನುಭವ ಲೋಕ ಬಹಳ ವಿಶಾಲವಾದುದು. ಪಾತ್ರ ಸೃಷ್ಟಿಯ ಸಂಖ್ಯೆಯಲ್ಲಿ ಕೊರತೆ ಕಂಡುಬಂದರೂ ಇರುವ ಪಾತ್ರಗಳ ನಿರ್ವಹಣೆ ಬಹಳ ವಿಶಿಷ್ಟವಾದುದು. ಅವರ ಸಮಕಾಲೀನ ಲೇಖಕರಿಗಿಂತ ತೇಜಸ್ವಿಯವರಲ್ಲಿ 'ವಾಸ್ತವವಾದಿ ಪ್ರಜ್ಞೆ' ನಿಚ್ಚಳವಾಗಿದ್ದು ವಾಸ್ತವತೆಯ ಆಧಾರದ ಮೇಲೆ ಸ್ತ್ರೀಯರ ಸಂವೇದನೆಗಳನ್ನು ಚಿತ್ರಿಸುತ್ತಾರೆ. ಈ ವಿಶಿಷ್ಟಾನುಭವ ಅವರ ಸಮಗ್ರ ಕಥೆಗಳ ಅರಿವಿನಿಂದ ಸಾಧ್ಯ ವಾಗುತ್ತದೆ.

ಪ್ರಸ್ತುತ ಅಧ್ಯಯನಕ್ಕೆ 'ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ನನಗೆ ಮೇಲಿನ ಸಂಗತಿಯೇ ಕಾರಣವಾಗಿದೆ. ಆದ್ದರಿಂದ ತೇಜಸ್ವಿಯವರ ಕಥೆಗಳ ಚೌಕಟ್ಟಿನಲ್ಲಿ ಅಭಿವ್ಯಕ್ತವಾಗಿರುವ ಹೆಣ್ಣಿನ ಅನುಭವ ಲೋಕವನ್ನು ಗುರುತಿಸಿ, ಚರ್ಚಿಸಿ ವಿಶ್ಲೇಷಿಸುವ ವಸ್ತು ವಿಷಯವನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುತ್ತೇನೆ. ಈ ಅಧ್ಯಯನದಲ್ಲಿ ತೇಜಸ್ವಿ ಅವರ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ಹೆಣ್ಣಿನ ಅನುಭವ ಲೋಕವನ್ನು ದರ್ಶಿಸುವುದೇ ಮುಖ್ಯ ಉದ್ದೇಶವಾಗಿದೆ.

ಪ್ರಸ್ತುತ ನಿಬಂಧದ ವ್ಯಾಪ್ತಿಯಲ್ಲಿ ತೇಜಸ್ವಿ ಅವರ ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು', 'ಕಿರಗೂರಿನ ಗಯ್ಯಾಳಿಗಳು' ಈ ಮೂರು ಕಥಾ ಸಂಕಲನಗಳು ಸೇರುತ್ತವೆ. ಇವುಗಳನ್ನು ಒಟ್ಟಾಗಿಸಿ ಅವುಗಳಲ್ಲಿ ವ್ಯಕ್ತವಾಗಿರುವ ಸ್ತ್ರೀಯರ ಬದುಕು, ಬವಣೆ, ನೋವು, ನಲಿವುಗಳು ಅವರ ಬದುಕಿನ ಸೂಕ್ಷ್ಮಗಳನ್ನು ಚರ್ಚಿಸಲಾಗಿದೆ.

ಸ್ತ್ರೀವಾದ, ಸ್ತ್ರೀ ಸಂವೇದನೆಯ ಅರ್ಥವ್ಯಾಪ್ತಿ ಮತ್ತು ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ತೇಜಸ್ವಿ ಕಥೆಗಳಲ್ಲಿನ ಸ್ತ್ರೀ ಸಂವೇದನಾ ನೆಲೆಗಳು ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ ಎಂಬ ಅಧ್ಯಾಯಗಳನ್ನು ಈ ಪ್ರಬಂಧ ಒಳಗೊಂಡಿದೆ.

'ಸ್ತ್ರೀವಾದ' ಎಂಬ ಅಧ್ಯಾಯದಲ್ಲಿ ಸ್ತ್ರೀವಾದವನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಸ್ತ್ರೀವಾದದ ಸ್ವರೂಪ, ಲಕ್ಷಣಗಳು, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸ್ತ್ರೀವಾದ ಬೆಳೆದು ಬಂದ ಬಗೆ ಅದರ ಇತಿಹಾಸ, ಪ್ರಮುಖ ಪಾಶ್ಚಾತ್ಯ ಸ್ತ್ರೀವಾದಿಗಳ ಚಿಂತನೆಗಳನ್ನು ಕುರಿತು ಚರ್ಚಿಸಲಾಗಿದೆ.

ಸ್ತ್ರೀ ಸಂವೇದನೆಯ ಅರ್ಥವ್ಯಾಪ್ತಿ ಮತ್ತು ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ಬೆಳೆದು ಬಂದಿರುವುದನ್ನು ಚರ್ಚಿಸಲಾಗಿದೆ. ಸ್ತ್ರೀ ಸಂವೇದನೆಯ ಅರ್ಥವ್ಯಾಪ್ತಿಯನ್ನು ವಿವರಿಸುವುದರ ಮೂಲಕ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಸ್ತ್ರೀ ಸಂವೇದನೆ ಯಾವ ನೆಲೆಗಳಲ್ಲಿ ಅಭಿವ್ಯಕ್ತವಾಗಿದೆ. ಅವುಗಳಿಗೆ ಸ್ತ್ರೀ ನಿಲುವು ಹೇಗೆ ಭಿನ್ನ ಎಂಬುದನ್ನು ಚರ್ಚಿಸಲಾಗಿದೆ.

'ತೇಜಸ್ವಿ ಕಥೆಗಳಲ್ಲಿನ ಸ್ತ್ರೀ ಸಂವೇದನಾ ನೆಲೆಗಳು' ಎಂಬ ಅಧ್ಯಾಯದಲ್ಲಿ ತೇಜಸ್ವಿ ಅವರ ಕಥೆಗಳಲ್ಲಿನ ಸ್ತ್ರೀ ಸಂವೇದನಾ ನೆಲೆಗಳನ್ನೂ ವಿಶ್ಲೇಷಿಸುತ್ತಾ ಸ್ತ್ರೀ ಬಗ್ಗೆ ತೇಜಸ್ವಿ ಯಾವ ನಿಲುವನ್ನು ತಳೆದಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ.

'ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ' ಎಂಬ ಅಧ್ಯಾಯದಲ್ಲಿ ತೇಜಸ್ವಿ ಅವರ ಕಥೆಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀ ಸಂವೇದನೆಯನ್ನು ಪ್ರಾಯೋಗಿಕವಾಗಿ ವಿಶ್ಲೇಷಿಸ-ಲಾಗಿದೆ. ಹೆಣ್ಣಿನ ಅನುಭವಲೋಕ ಅವರ ಕಥೆಗಳಲ್ಲಿ ಹೇಗೆ ಅನಾವರಣ ಗೊಂಡಿದೆ ಎಂಬುದನ್ನು ಚರ್ಚಿಸಲಾಗಿದೆ.

'ಸ್ತ್ರೀ ವಾದ' ಎಂಬ ಅಧ್ಯಾಯದಲ್ಲಿ ಕನ್ನಡದ ಹೆಸರಾಂತ ಸ್ತ್ರೀವಾದಿ ಚಿಂತಕಿಯರಾದ ಡಾ. ಬಿ.ಎನ್.ಸುಮಿತ್ರಾಬಾಯಿ, ವಿಜಯಾದಬ್ಬೆ ಅವರ ಚಿಂತನೆಗಳನ್ನು ಸ್ವೀಕರಿಸಲಾಗಿದೆ. ಈ ರೂಪುರೇಷೆಗಳನ್ನೊಳಗೊಂಡ ನನ್ನ ಈ ಸಂಶೋಧನಾ ನಿಬಂಧವು ತೇಜಸ್ವಿಯವರ ಕಥೆಗಳಲ್ಲಿರುವ ಸ್ತ್ರೀ ಸಂವೇದನೆಯ ಬಗ್ಗೆ ವೈಚಾರಿಕ ಹಿನ್ನೆಲೆಯಲ್ಲಿ ಬೆಳಕು ಚೆಲ್ಲುತ್ತದೆ ಎಂದು ಭಾವಿಸಲಾಗಿದೆ.

ಅಧ್ಯಾಯ - ೨

ಸ್ತ್ರೀವಾದ

'ಫೆಮಿನಿಸಂ' ಎನ್ನುವ ಸಿದ್ಧಾಂತ ಕನ್ನಡದ ಸಂದರ್ಭದಲ್ಲಿ 'ಸ್ತ್ರೀವಾದ' ಎನ್ನುವ ಹೆಸರಿನಲ್ಲಿ ಬಳಕೆಯಲ್ಲಿದೆ. 'ಸ್ತ್ರೀವಾದ' ಎನ್ನುವ ಪರಿಕಲ್ಪನೆಯನ್ನು ಕುರಿತಂತೆ ಸಾಮಾನ್ಯವಾಗಿ ಕೆಲವು ಅಪಕಲ್ಪನೆಯ ಹಾಗೂ ಅಪನಂಬಿಕೆಯ ಗ್ರಹಿಕೆಗಳು ಇವೆ. 'ಸ್ತ್ರೀ'ವಾದ'ಎಂದರೆ ವಿರೋಧಿವಾದ ಎಂದಾಗಲೀ 'ಪುರುಷದ್ವೇಷಿಗಳು ಪ್ರತಿಪಾದಿಸುವ ವಾದ' ಎಂದಾಗಲೀ ಅಲ್ಲ. ಸ್ತ್ರೀವಾದಿಗಳು ಎಂದರೆ ಸ್ವೇಚ್ಛಾಚಾರಿಗಳು, ಅತಿ ಕ್ರಾಂತಿಕಾರಕ ಮೌಲ್ಯಗಳನ್ನು ಪ್ರತಿಪಾದಿಸುವವರು, ಸ್ವಚ್ಛಂದ ಜೀವನ ನಡೆಸುವವರು ಸಾಂಸಾರಿಕ ಬದುಕನ್ನು ಅಲಕ್ಷಿಸುವವರು ಎಂಬ ಆರೋಪಗಳಿವೆ.

'ಸ್ತ್ರೀವಾದ' ಎನ್ನುವುದು ಮೂಲತಃ ಒಂದು ರಾಜಕೀಯ ಸಿದ್ಧಾಂತ. ಅದು ಸ್ತ್ರೀ ಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ. ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ಪ್ರಯತ್ನಿಸುತ್ತದೆ. 'ಸ್ತ್ರೀವಾದ' ಎನ್ನುವ ಪರಿಕಲ್ಪನೆ ಮೂಲತಃ ನಮ್ಮ ಚಿಂತನೆಯಲ್ಲ. ಅದು ಪಶ್ಚಿಮ ದೇಶಗಳಿಂದ ಆಮದಾಗಿರುವ ಚಿಂತನೆಯಾಗಿದೆ. ೧೭ನೇ ಶತಮಾನದ ಕೊನೆಯ ಭಾಗದಲ್ಲಿ ಸ್ತ್ರೀ ಪರ ಚಿಂತನೆಗಳು ಪ್ರಾರಂಭವಾದರೂ ಅವು ಚಳವಳಿಯ ರೂಪ ಪಡೆದು ಒಂದು ವಾದವಾಗಿ ಬೆಳೆದು ಬಂದದ್ದು ೧೯ನೇ ಶತಮಾನದಲ್ಲಿ. ಇದಕ್ಕೆ ಮೂಲ, ಆ ಸಮಯದಲ್ಲಿ ಹುಟ್ಟಿಕೊಂಡ ಸಮಾನತೆ ಹಾಗೂ ಸ್ವಾತಂತ್ರ್ಯದ ತತ್ವಗಳು. ಈ ತತ್ವಗಳನ್ನು ಮಹಿಳೆಯರಿಗೂ ಅನ್ವಯಿಸಿಕೊಂಡು ಸ್ತ್ರೀವಾದಿ ಚಿಂತನೆಗಳು ಹುಟ್ಟಿಕೊಂಡವು.

ಪ್ರಪಂಚದಾದ್ಯಂತ ಶೋಷಣೆಯು ಕಾಲ, ದೇಶ, ಸಮಾಜಬದ್ಧವಾಗಿ ತನ್ನದೇ ಸ್ವರೂಪವನ್ನು ಹೊಂದಿದೆ. ಅದಕ್ಕೆ ಹೊಂದಿಕೊಂಡಂತೆ ಚರಿತ್ರೆ ಕಂಡ ಎಲ್ಲಾ ರೀತಿಯ ಶೋಷಣೆಗಳೂ ಮಹಿಳೆಯಲ್ಲಿ ತನ್ನ ಪರಾಕಾಷ್ಠೆಯೊಂದಿಗೆ ಪ್ರಕಟಗೊಳ್ಳುತ್ತವೆ. ಮಹಿಳೆಯ ಶೋಷಣೆಯ ಐತಿಹಾಸಿಕ ಕಥೆಗನುಗುಣವಾಗಿ ಸ್ತ್ರೀವಾದವೂ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ. ಎಲ್ಲಿ ಸಾಮಾಜಿಕ ಬದಲಾವಣೆಗಳು ತ್ವರಿತಗತಿಯಲ್ಲಿ ಆಗುತ್ತಾ ಬಂದವೋ ಅಲ್ಲಿ ಸ್ತ್ರೀವಾದದ ಮಜಲುಗಳನ್ನು ಸ್ಪಷ್ಟವಾಗಿ

ಗುರುತಿಸಬಹುದು. ಮಹಿಳಾ ಶೋಷಣೆಯ ಸ್ವರೂಪವನ್ನು ತಾತ್ವಿಕ ಶಿಸ್ತಿನ ಅಧ್ಯಯನದ ಕ್ರಮವನ್ನು ರೂಪಿಸುವಲ್ಲಿ ಪಾಶ್ಚಾತ್ಯ ಸ್ತ್ರೀವಾದಿಗಳ ಕೊಡುಗೆ ಗಮನಾರ್ಹವಾದುದು.

ಸ್ತ್ರೀವಾದವು ಒಂದೇ ಸಮಸ್ಯೆಯ ಸುತ್ತ ಬೆಳೆದು ಬಂದ ಏಕಸೂತ್ರದ ವಿಚಾರಧಾರೆಯಲ್ಲ. ಅಲ್ಲದೆ ಅದು ಕಾಲ, ದೇಶ, ರಾಜಕೀಯಶಕ್ತಿ, ಭಾಷೆ, ವರ್ಗ, ಜನಾಂಗ ಮುಂತಾದ ರೀತಿಯಲ್ಲಿ ಮಹಿಳೆಯರ ಬೇರೆ ಬೇರೆ ಪರಿಸ್ಥಿತಿಗಳಿಗೆ ತಕ್ಕಂತೆ ಬೇರೆ ಬೇರೆಯಾದ ಸಮಸ್ಯೆಗಳ ತಳಹದಿಯ ಮೇಲೆ ಬೆಳೆದಂಥ ಬಹುರೂಪದ ಚಿಂತನೆಗಳನ್ನು ಒಳಗೊಂಡದ್ದಾಗಿದೆ. ಪಾಶ್ಚಿಮಾತ್ಯರ ಬಂಡವಾಳಶಾಹಿ ಪಿತೃಪ್ರಧಾನ ಸಂಸ್ಕೃತಿಯಲ್ಲಿ ಇದು ಹುಟ್ಟಿ ಬಂದು ಪಿತೃಪ್ರಧಾನ ವ್ಯವಸ್ಥೆಯಲ್ಲಿನ 'ಲಿಂಗಪ್ರಭೇದ' ವ್ಯವಸ್ಥೆಯ ತೀವ್ರವಾದ ವಿಮರ್ಶೆಗೆ ಇದು ಯತ್ನಿಸುತ್ತದೆ. ಅಂಥದೇ ಲಿಂಗ ತಾರತಮ್ಯವಿರುವ ಯಾವುದೇ ಸಮಾಜದಲ್ಲಿ ಸ್ತ್ರೀ ಪುರುಷರ ನಡುವಿನ ಸಂಬಂಧಗಳೆಲ್ಲ ಅಧಿಕಾರ ರಾಜಕೀಯವುಳ್ಳದ್ದಾಗಿರುವುದನ್ನು ಅದು ಗುರುತಿಸುತ್ತದೆ. ಅಲ್ಲದೆ ಅಂತಹ ಅಧಿಕಾರ ಸಂಬಂಧಗಳ ಬದಲಾವಣೆಗಾಗಿ ತಾತ್ವಿಕ ಹೋರಾಟ ಹೂಡುತ್ತವೆ.

ಸ್ತ್ರೀ ವಾದಕ್ಕೆ ಎರಡು ಮುಖ್ಯ ಆಯಾಮಗಳಿವೆ. ಅವುಗಳು

೧) ವಾಸ್ತವ ಜೀವನದಲ್ಲಿ ಮಹಿಳೆಯರು ಎದುರಿಸುತ್ತಿರುವ ಭೌತಿಕ ಶೋಷಣೆಗಳನ್ನು ಅವುಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಸಂಘಟಿತ ಸಾಮಾಜಿಕ, ರಾಜಕೀಯ ಹೋರಾಟಗಳ ಮೂಲಕ ಪ್ರತಿಭಟಿಸುವುದು ಸ್ತ್ರೀವಾದದ ಒಂದು ಬಹುಮುಖ್ಯ ಆಯಾಮ.

೨) ಸಂಸ್ಕೃತಿ ಮೀಮಾಂಸೆಯ ಒಂದು ಅಂಗವಾಗಿ ಸಾಹಿತ್ಯ ಕಲೆಗಳ ಸ್ತ್ರೀವಾದಿ ವಿಮರ್ಶೆ, ವಿಶ್ಲೇಷಣೆಗೆ ಯತ್ನಿಸುವುದು ಅದರ ಇನ್ನೊಂದು ಆಯಾಮ.

ಮೇರಿ ವುಲ್ಫ್‌ಸ್ಟನ್ ಕ್ರಾಫ್ಟ್‌ಳಿಂದ ಹಿಡಿದು ಜರ್ಮೈನ್ ಗ್ರಿಯರಳವರೆಗೆ ಪ್ರತಿಯೊಬ್ಬರೂ ಸ್ತ್ರೀವಾದದ ರಾಜಕೀಯ ಸಿದ್ಧಾಂತವನ್ನು ಹೇಳುವ ತಮ್ಮ ತಮ್ಮ ವಿಚಾರಗಳಿಗೆ ಸಾಹಿತ್ಯ ವಿಶ್ಲೇಷಣೆಯ ಮೂಲಕ ಅವಶ್ಯಕ ಸಮರ್ಥನೆ ನಿದರ್ಶನಗಳನ್ನು ಪಡೆದುಕೊಳ್ಳುತ್ತಾರೆಂಬುದು ಗಮನಾರ್ಹ ಅಂಶವಾಗಿದೆ.

ಸ್ತ್ರೀ ವಾದದ ತಾತ್ವಿಕತೆಯ ಪ್ರಮುಖ ಲಕ್ಷಣಗಳು

೧. ಪಿತೃ ಪ್ರಾಧಾನ್ಯ ಎಂಬುದು ಮಹಿಳೆಯರ ಹಿತಾಸಕ್ತಿಗಳನ್ನು ಪುರುಷರ ಹಿತಾಸಕ್ತಿಗಳಿಗೆ ಅಧೀನವಾಗಿಸಿರುವ ಅಧಿಕಾರ ಸಂಬಂಧಗಳಿರುವ ವ್ಯವಸ್ಥೆಯನ್ನು ಸೂಚಿಸುತ್ತದೆ. ಈ ಸಂಬಂಧಗಳು ಒಂದೊಂದು ಸಮಾಜದೊಳಗೂ ಬೇರೆ ಬೇರೆ ರೀತಿಯದಾಗಿರಬಹುದು. ಹಾಗೆಯೇ ಒಂದೇ ಸಮಾಜದೊಳಗೂ ಈ ಸಂಬಂಧಗಳು ಬಹುರೂಪಗಳಲ್ಲಿ ಪ್ರಕಟವಾಗುತ್ತಿರಬಹುದು. ಶ್ರೇಣೀಕೃತ ವ್ಯವಸ್ಥೆಯಲ್ಲಿ ಪುರುಷನ ಶ್ರೇಷ್ಠತೆ, ಪುರುಷನ ಪರಮಾಧಿಕಾರದ ಮೂಲಕ ಸೃಷ್ಟಿಯಾಗಿರುವ ಎಲ್ಲ ಬಗೆಯ ವಿಚಾರಧಾರೆಗಳು ಜ್ಞಾನಪ್ರಕಾರಗಳು, ಕಲೆ, ಸಾಹಿತ್ಯಗಳಂತಹ ಸಾಂಸ್ಕೃತಿಕ ಅಭಿವ್ಯಕ್ತಿಗಳೂ ಪುರುಷ ಕೇಂದ್ರಿತ ದೃಷ್ಟಿಕೋನದಿಂದಲೇ ರೂಪುಗೊಂಡಿದ್ದು ಅವನ್ನೇ ಎತ್ತಿ ಹಿಡಿಯುತ್ತಿರುತ್ತವೆಂದು ಸ್ತ್ರೀವಾದವು ತೋರಿಸಿಕೊಡುತ್ತದೆ. ಪುರುಷ ಕೇಂದ್ರಿತ ಸಂಸ್ಕೃತಿಯು ಹುಟ್ಟುಹಾಕಿ ಬೆಳೆಸಿರುವ ರೂಢಿಗತವಾದ ನಂಬಿಕೆಗಳು ಮತ್ತು ಮೌಲ್ಯಗಳು, ಆಚರಣೆಗಳು ಇಂದಿಗೂ ಮಹಿಳೆಯರ ಬದುಕು ಮತ್ತು ವ್ಯಕ್ತಿತ್ವಗಳು ಹೀಗೆ ಇರಬೇಕೆಂದು ರೂಪಿಸುತ್ತಿರುತ್ತವೆ. ಈ ಬಗೆಯ ಸ್ಥಾಪಿತ ಮೌಲ್ಯಗಳನ್ನು ವಾಸ್ತವಾಂಶಗಳ ಬೆಳಕಿನಲ್ಲಿ ಒರೆ ಹಚ್ಚಿ ಸ್ತ್ರೀವಾದವು ಪ್ರಶ್ನಿಸುತ್ತದೆ.

೨. ಜೀವಶಾಸ್ತ್ರೀಯ ಲೈಂಗಿಕ ವ್ಯತ್ಯಾಸಗಳಿಗೆ ಸಾಮಾಜಿಕವಾಗಿ ಎಂಥ ಅರ್ಥವನ್ನು ನೀಡಲಾಗುತ್ತದೆ ಎಂಬುದರ ಮೇಲೆ ಪಿತೃಪ್ರಧಾನತೆಯ ಅಧಿಕಾರವಿರುತ್ತದೆ. ಈ ವ್ಯವಸ್ಥೆಯಲ್ಲಿ ಮಹಿಳೆಯರ ಸ್ವಭಾವಗಳನ್ನೂ ಅವರ ಸಾಮಾಜಿಕ ಪಾತ್ರಗಳನ್ನು ನಿರ್ಧರಿಸುತ್ತಿರುವ ಸಂಗತಿಗಳು ಪುರುಷರನ್ನು ಮಾನದಂಡವಾಗಿಟ್ಟು ಕೊಂಡಿರುತ್ತವೆ.

೩. ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ತಮ್ಮ ಹಿತಾಸಕ್ತಿಗಳಿಗೆ ಮಾತ್ರ ಮೀಸಲಾಗಿಟ್ಟುಕೊಂಡ ಹಕ್ಕುಗಳು, ಸವಲತ್ತುಗಳೊಳಗೆ ಮಹಿಳೆಯರೂ ಪ್ರವೇಶಪಡೆಯಬೇಕೆಂದು ಹೋರಾಡುತ್ತಾ ಬಂದ ದೀರ್ಘ ಪ್ರಯತ್ನಗಳ ಫಲವಾಗಿ ಅಷ್ಟಿಷ್ಟು ಸಾಮಾಜಿಕ ಹಾಗೂ ರಾಜಕೀಯ ಲಾಭಗಳು ಮಹಿಳೆಯರಿಗೆ ಸಿಗುವಂತಾಗಿದೆ. ಆದರೂ ಶಿಕ್ಷಣ, ಮತದಾನ, ಸಾಮಾಜಿಕ ಜೀವನ ಮತ್ತು ದುಡಿಮೆಯ ಮಾರುಕಟ್ಟೆಗಳಲ್ಲಿ ಮಹಿಳೆಯರ ಪ್ರವೇಶ ಎಂಬುದು ಬಹಳಷ್ಟು

ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿ ಕೂಡ ಸುಲಭವಲ್ಲ. ಮಹಿಳಾ ದಕ್ಷತೆಯ ಮಾಪನದಲ್ಲಿ ಸ್ತ್ರೀ ವಿಶಿಷ್ಟ ಸಂದರ್ಭಗಳ ಅರಿವು ಅವಶ್ಯಕ ಹಾಗೆಯೇ ಪ್ರಗತಿ ಸಾಧನೆ ಮುಂತಾದ ಆಧುನಿಕ ಪರಿಕಲ್ಪನೆಗಳೆಲ್ಲ ಮಾನವೀಕರಣಕ್ಕೆ ಒಳಗಾಗಬೇಕಾಗುತ್ತದೆ ಎಂಬುದು ಸ್ತ್ರೀವಾದದ ಒಂದು ನಿಲುವು.

೪. ಲಿಂಗಾಧಾರಿತ ಶ್ರಮ ವಿಭಜನೆಯ ವ್ಯವಸ್ಥೆಯ ಬಗ್ಗೆ ಇಡೀ ಮಾನವಕುಲವು ಪುನರಾಲೋಚನೆ ಮಾಡುವ ಅನಿವಾರ್ಯತೆಯ ಬಗ್ಗೆ ಜನರಲ್ಲಿ ಅನಿಚ್ಛೆಯೇ ವ್ಯಕ್ತವಾಗುತ್ತಿರುವುದನ್ನು ಕಾಣಬಹುದು. ಬದಲಾವಣೆಯನ್ನು ಬಯಸದ ಜನರ ಇಂಥ ಪದ್ಧತಿಯ ತಳದಲ್ಲಿ ಸ್ತ್ರೀಯರು ನೈಸರ್ಗಿಕವಾಗಿ ಪುರುಷರಿಗಿಂತ ಭಿನ್ನರಾಗಿದ್ದು ಭಿನ್ನರೀತಿಯ ಸಾಮಾಜಿಕ ಕಾರ್ಯಗಳಿಗೆ ಹೆಚ್ಚು ಸಮರ್ಥರಿರುತ್ತಾರೆ ಎಂಬ ಗ್ರಹಿಕೆಯು ಕೆಲಸ ಮಾಡುತ್ತದೆ. ಆದರೆ ಮಹಿಳೆ ಕುಟುಂಬದೊಳಗೇ ಹೆಚ್ಚು ಹೊಂದುತ್ತಾಳೆಂಬ ಪಿತೃಪ್ರಧಾನ ವ್ಯವಸ್ಥೆಯ ಗ್ರಹಿಕೆಯೇ ಇಂಥ ಜನರು ಒಪ್ಪಿರುವ ಮಹಿಳೆ ಕುರಿತ ಮುಖವಾಡವು ಆಗಿರುತ್ತದೆ. ಹಾಗೆಯೇ ಹಲವು ತರತಮಗಳು ರೂಪುಗೊಂಡಿವೆ. ಉದಾಹರಣೆಗೆ : ತಾಯಿಗೆ ಮಾತ್ರ ಹೆರಿಗೆ ರಜೆ ನೀಡಿ ತಂದೆಗೆ ಮಾತ್ರ ಯಾವ ಬಿಡುವನ್ನು ನೀಡದಿರುವುದು ಮಗುವನ್ನು ಪೋಷಿಸುವ ಜವಾಬ್ದಾರಿಗಳಿಂದ ನುಣುಚಿಕೊಳ್ಳಲು ಸಾಧ್ಯವಾಗುತ್ತದೆ.

೫. ಮಹಿಳೆಯರು ಪುರುಷರಿಗಿಂತ ಭಿನ್ನವಾದ ಪಾತ್ರಗಳನ್ನು ನಿರ್ವಹಿಸಲು ಸೃಷ್ಟಿಯಾಗಿದ್ದಾರೆ ಎಂಬ ಗ್ರಹಿಕೆಯು ಸ್ತ್ರೀ ಪುರುಷರಿಬ್ಬರೂ ಸಮಾನ ಶ್ರೇಷ್ಠರೆಂದೇನೂ ಭಾವಿಸಲಾಗದು. ಬದಲಾಗಿ ಹೆಂಗಸರು ಪತ್ನಿ ಮತ್ತು ತಾಯಿಯ ಪಾತ್ರಕ್ಕೆಂದೇ ಇದ್ದಾರೆಂಬುದು ಅಲ್ಲ ಮುಖ್ಯ. ಹಾಗಾಗಿ ಒಬ್ಬ ಒಳ್ಳೆಯ ಪತ್ನಿ ಹಾಗೂ ತಾಯಿ ಎನಿಸಿಕೊಳ್ಳುವುದು ಹೆಣ್ಣಿನ ಉಳಿದೆಲ್ಲ ಬಗೆಯ ಸಾಧನೆಗಳಿಗಿಂತ ಮುಖ್ಯವೆಂಬಂತೆ ಪ್ರತಿಪಾದಿಸಲಾಗುತ್ತದೆ.

ಸ್ತ್ರೀ ಸ್ವಭಾವ ನಾರೀಗುಣ ಎಂದು ಎತ್ತಿ ಹಿಡಿಯಲ್ಪಡುವ ಗುಣಗಳಿಂದ ತಾಳ್ಮೆ, ಮಾರ್ದವತೆ, ಕ್ಷಮೆ, ಭಾವನಾಶೀಲತೆ ಅಂತಃಸ್ಫೂರ್ತಿ, ನಿಸ್ವಾರ್ಥ, ತ್ಯಾಗಬುದ್ಧಿ ಮುಂತಾದವು ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀತ್ವದ ಆದರ್ಶ ಲಕ್ಷಣಗಳೆಂದು ಕರೆಸಿಕೊಳ್ಳುತ್ತವೆ. ಹೆಣ್ಣಿನ ವ್ಯಕ್ತಿತ್ವವನ್ನು ಇಂಥ ಗುಣಗಳೊಂದಿಗೆ

ಸಮೀಕರಿಸಿ, ಇವುಗಳನ್ನೇ ಮೌಲ್ಯಗಳೆಂದು ಬಿಂಬಿಸಿ, ಬಲಗೊಳಿಸುವ ಪರಿಸರ-ದಲ್ಲಿ ಈ ಚೌಕಟ್ಟಿನಲ್ಲಿ ಸೇರಿಸಿಕೊಳ್ಳಲಾರದ ಭಿನ್ನ ಗುಣಗಳ ಮಹಿಳೆಯರನ್ನು ಅವರ ಭಿನ್ನ ಸ್ವಭಾವಕ್ಕಾಗಿಯೇ ತಿರಸ್ಕಾರ ಅವಹೇಳನಗಳಿಂದ ನೋಡಲಾಗುತ್ತದೆ. ಇದಕ್ಕೆ ವಿರುದ್ಧವಾಗಿ ಆಕ್ರಮಣಶೀಲತೆ ಗಡುಸುತನ, ದಬ್ಬಾಳಿಕೆ ಮುಂತಾದ ಗುಣಗಳು ಪುರುಷರಿಗೆ ಸಹಜವೆಂದು ಭಾವಿಸಲಾಗುತ್ತವೆ. ಸ್ತ್ರೀಯರೇನಾದರೂ ಅವುಗಳನ್ನು ಅನುಸರಿಸಿದಲ್ಲಿ ಅವರನ್ನು 'ಗಂಡುಬೀರಿ' ಎಂದು ಬಿಂಬಿಸ-ಲಾಗುತ್ತದೆ. ಈ ರೀತಿಯಲ್ಲಿ ಸಂಸ್ಕೃತಿಯ ವಿಭಿನ್ನ ಗುಣಗಳ ಪಟ್ಟಿಗಳಲ್ಲಿ ಸ್ತ್ರೀ ಪುರುಷರ ಸ್ವಭಾವಗಳನ್ನು ವಿಂಗಡಿಸುವುದು ನಿಜಸ್ಥಿತಿಗೆ ವಿರುದ್ಧವಾದ ಮೌಲ್ಯಗಳ ಕಲ್ಪನೆಗಳನ್ನು ಮನುಷ್ಯರಲ್ಲಿ ಬಿತ್ತಿ ಬೆಳೆಸುತ್ತವೆ. ಇದರಿಂದ ಈ ನಿರೀಕ್ಷೆಗಳನ್ನು ತುಂಬಿಸಲಾಗದ ಸ್ಥಿತಿಗಳು ಸ್ತ್ರೀಯರಿಗೂ ಪರುಷರಿಗೂ ಮಾನಸಿಕ ಕ್ಷೋಭೆಗಳನ್ನು ಸಾಮಾಜಿಕ ಅವಮಾನಗಳನ್ನು ಸೃಷ್ಟಿಸುತ್ತಿರುವುದರತ್ತ ಸ್ತ್ರೀವಾದವು ಬೆಳಕು ಬೀರಿದೆ.

೬. ಪುರುಷ ಕೇಂದ್ರಿತ ಚಿಂತನೆ, ದೃಷ್ಟಿಕೋನ ಮಾನವ ಸ್ವಭಾವವನ್ನು ಹೆಣ್ಣಿನದು, ಗಂಡಿನದು ಎಂದು ಇಬ್ಬಗೆಯಾಗಿ ವಿಂಗಡಿಸಿ ಸ್ವೀಕರಿಸುತ್ತಾ ಬಂದಿರುವುದನ್ನು ಈ ಮೊದಲು ಪ್ರಸ್ತಾಪಿಸದ್ದಾಗಿದೆ. ಕೋಮಲತೆ, ಮಾರ್ಧವತೆ, ಭಯ, ಭಾವನಾ ಶೀಲತೆಗಳು, ಹೆಣ್ಣುಗುಣಗಳೆಂದೂ ಸಾಹಸ, ಬಿರುಸು, ಆಕ್ರಮಣ ಶೀಲತೆ, ತರ್ಕನಿಷ್ಠೆಗಳನ್ನು ಪುರುಷಗುಣಗಳೆಂದೂ ಹೇಳಲಾಗುತ್ತದೆ. ನಿಜವಾಗಿ ಈ ಇಬ್ಬಗೆಯ ಗುಣಗಳು ಸ್ತ್ರೀಪುರುಷರಿಬ್ಬರಲ್ಲೂ ಇರಬಹುದು. ಅವು ಸಂದರ್ಭ, ಪರಿಸರಕ್ಕನುಸಾರವಾಗಿ ಕಾಣಿಸಿಕೊಳ್ಳುತ್ತವೆ.

ಆದರೆ ಪಿತೃಪ್ರಧಾನ ದೃಷ್ಟಿಕೋನವು ಹೆಣ್ಣಿನಲ್ಲಿ ಸ್ತ್ರೀ ಗುಣಗಳೂ, ಗಂಡಿನಲ್ಲಿ, ಪುರುಷ ಗುಣಗಳೂ ಅದೇ ಕ್ರಮದಲ್ಲಿ ಇರಬೇಕಾದದ್ದು ಅವರ ವ್ಯಕ್ತಿತ್ವದ ಆದರ್ಶ ಸ್ಥಿತಿಯೆಂದು ಸಾರಿ ಎತ್ತಿ ಹಿಡಿಯುತ್ತದೆ. ಇದರಿಂದ ಮಾನವ ಸಹಜವಾದ ಇತರ ಸ್ವಭಾವಗಳು ಸಾಮಾಜಿಕವಾಗಿ ಹತ್ತಿಕ್ಕಲ್ಪಡುತ್ತವೆ. ಅಲ್ಲದೆ ನಿರೀಕ್ಷಿತ ಗುಣಗಳ ಚೌಕಟ್ಟಿಗೆ ಹೊಂದದವರನ್ನು ಸಾಮಾಜಿಕ ಅವಹೇಳನಕ್ಕೆ ಗುರಿ ಮಾಡಲಾಗುತ್ತದೆ. 'ಗಂಡುಬೀರಿ' 'ಹೆಣ್ಣಿಗ' ಮುಂತಾದ ಮಾತುಗಳು ನಿರ್ದಿಷ್ಟವಾದ ಹೆಣ್ಣು ಅಥವಾ ಗಂಡು ಮಾದರಿಗಿಂತ

ಭಿನ್ನರಾದವರನ್ನು ಕೀಳಾಗಿ ನೋಡುತ್ತಿರುವ ರೀತಿಗೆ ನಿದರ್ಶನಗಳು. ಈ ತಾರತಮ್ಯದ ವಿಸ್ತೃತ ರೂಪಗಳನ್ನು ಸ್ತ್ರೀವಾದವು ಗುರುತಿಸುತ್ತದೆ.

೭. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕಲಿಕೆ ಆಸಕ್ತಿ, ಆಚಾರ, ವಿಚಾರಗಳೆಲ್ಲ ಪುರುಷರದಾದಾಗ ಮೇಲು, ಸ್ತ್ರೀಯರದಾದಾಗ ಕೀಳೆಂದು ಶ್ರೇಣೀಕೃತ-ವಾಗಿರುತ್ತವೆ. ಇಂತಹ ಶ್ರೇಣೀಕರಣದಿಂದಾಗಿ ಮಹಿಳೆಯರ ಪ್ರತಿಭೆ, ವ್ಯಕ್ತಿತ್ವ ವಿಕಾಸಗಳು ಮರುಟಿ ಹೋಗಬಹುದು. ಜೇಡರ ದಾಸಿಮಯ್ಯನಂಥ ಶಿವಶರಣನು ಒಳಗಿರುವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ' ಎಂದು ಸಾರಿರಬಹುದು. ಸಂಚಿಯ ಹೊನ್ನಮ್ಮಳು 'ಪೆಣ್ಣುಪೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು ಎಂದು ಪ್ರಶ್ನಿಸಿರಬಹುದು. ಈ ಉಪದೇಶ ಪ್ರಶ್ನೆಗಳು ಲಿಂಗತಾರತಮ್ಯವನ್ನು ಬಲವಾಗಿ ಪ್ರತಿಪಾದಿಸುವ ಸಾಮಾಜಿಕ ಪರಿಸರದಲ್ಲಿಯೇ ವ್ಯವಸ್ಥೆಯು ತಿದ್ದಿ, ತೀಡಿ, ರೂಪಿಸುವ ತಾರತಮ್ಯಗಳನ್ನು ತಮ್ಮಲ್ಲಿ ಅಂತಸ್ಥ-ವಾಗಿಸಿಕೊಳ್ಳುತ್ತಲೇ ಬೆಳೆವ ಸ್ತ್ರೀಯರು ಸ್ವತಃ ತಮ್ಮನ್ನು ಪುರುಷರಿಗಿಂತ ಕೀಳೆಂದೂ ಕರೆದುಕೊಂಡು ತಮ್ಮ ಮಕ್ಕಳಲ್ಲೂ ಅಂಥದೇ ನಂಬಿಕೆ ಮೌಲ್ಯಗಳನ್ನು ಬೆಳೆಸುತ್ತಾ ಸಾಮಾಜೀಕರಿಸುತ್ತಾರೆ. ಈ ರೀತಿಯ ಲಿಂಗ ತಾರತಮ್ಯವನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸಿ, ಉಳಿಸಿಬಿಡುವುದರಲ್ಲಿ ಇವರದೇ ಪ್ರಮುಖ ಪಾತ್ರ. ಪುರುಷ ಪ್ರಧಾನ ಸಂಸ್ಕೃತಿಯ ಪ್ರಮುಖ ಸಂರಕ್ಷಕರು ಸ್ತ್ರೀಯರೇ ಎಂಬುದನ್ನು ಗುರುತಿಸಿಕೊಡುವ ಮೂಲಕ ಸ್ತ್ರೀಯರ ಪ್ರಜ್ಞಾ ಜಾಗೃತಿಗೆ ಸ್ತ್ರೀವಾದ ಯತ್ನಿಸುತ್ತದೆ.

೮. ಪುರುಷ ನಿಯಂತ್ರಿತ 'ಹೊರಜಗತ್ತು' ಮಹಿಳೆಯರ ಒಳಜಗತ್ತುಗಳ ನಡುವಿನ ಅಗಾಧವಾದ ಕಂದರಗಳ ಫಲವಾಗಿ ಸ್ತ್ರೀಪುರುಷರಿಬ್ಬರ ವ್ಯಕ್ತಿತ್ವದ ಬೆಳವಣಿಗೆಗಳು ಸಮಗ್ರವಾಗಿ ಆಗಲಾರದೆ ಹೋಗುತ್ತದೆ. ಇದರಿಂದ ಸಮಾಜದ ಸಮಗ್ರ ಮತ್ತು ಪ್ರಗತಿಗಳೂ ಕುಂಠಿತವಾಗುತ್ತವೆ ಎಂಬುದನ್ನು ಸ್ತ್ರೀವಾದವು ತೋರಿಸಿಕೊಡಲು ಯತ್ನಿಸುತ್ತದೆ.

೯. ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗಿ ರಕ್ತಗತವಾಗುತ್ತಾ ಹೋಗುವ ಕೆಲವು ನಂಬಿಕೆಗಳು ಮೌಲ್ಯಗಳು ಮತ್ತು ಆಚರಣೆಗಳ ಫಲವಾಗಿ ಕೆಲವು ಗೃಹೀತಗಳು ರೂಢಿಸಿರುತ್ತವೆ. ಉದಾಹರಣೆಗಾಗಿ ಬಹಳಷ್ಟು ಜನರ ಸಾಮಾನ್ಯ ನಂಬಿಕೆ

ಎಂದರೆ ಪ್ರತಿಯೊಬ್ಬ ಹೆಣ್ಣಿಗೂ ತಾಯ್ತನದ ಹಂಬಲವು ಸ್ವಾಭಾವಿಕ; ತಾಯಿಯಾಗದಿದ್ದಲ್ಲಿ ಆಕೆಯ ಬದುಕು ಪರಿಪೂರ್ಣವಲ್ಲ ಎಂದಿರುತ್ತದೆ. ಹಾಗೆಯೇ ಮಗುವನ್ನು ಹೆತ್ತ ಮಾತ್ರಕ್ಕೆ ವಾತ್ಸಲ್ಯ, ಅಂತಃಕರಣ, ಜೀವಪ್ರೇಮ, ಜೀವನ-ಶ್ರದ್ಧೆಗಳೆಲ್ಲ ತಾವಾಗಿ ಆಕೆಯಲ್ಲಿ ಹುಟ್ಟಿಕೊಳ್ಳುತ್ತವೆಂದೂ ಎಷ್ಟೇ ಕಷ್ಟಕರ ಸ್ಥಿತಿಯಲ್ಲಿದ್ದಾಗಲೂ ಸ್ತ್ರೀಗೆ ತಾಯ್ತನವು ಸದಾ ಅಪೇಕ್ಷಣೀಯವೇ ಆಗಿರುತ್ತದೆಂದೂ ಜನರ ಭಾವನೆ.

ತಾಯ್ತನವನ್ನು ವಾಸ್ತವ ನೆಲೆಗಿಂತ ಉದಾತ್ತೀಕರಿಸಿ ನೋಡುವ ವೈಭವೀಕರಿಸಿರುವ ಭಾರತದಲ್ಲೇ ತಾಯಿಯಾಗಲಾರದವರ, ಬಂಜೆ ಸ್ತ್ರೀಯರ ಪಾಡು ನಾಯಿಗಿಂತ ಕಡಿಮೆಯಾಗಿರುತ್ತವೆ ಎಂಬುದು ಈ ವ್ಯವಸ್ಥೆಯ ಕ್ರೂರ ಅತಿರೇಕಕ್ಕೆ ಉದಾಹರಣೆ ಬೇಡವೆಂದಾಗಲೂ ತಾಯ್ತನವು ಬಲವಂತವಾಗಿ ಹೇರಲ್ಪಟ್ಟಾಗ ಆ ಹೆಂಗಸು ಅದನ್ನು ಹೊರೆಯೆಂದು ಎಣಿಸಲಾರಳೇ? ಆ ಸ್ಥಿತಿಯಿಂದ ಹುಟ್ಟುವ ಕ್ಲೇಶ ಬಿಕ್ಕಟ್ಟು, ಆಯಾಸಗಳೆಲ್ಲ ಸದಾ ಹೆಣ್ಣಿಗೆ ಆನಂದದಾಯಕವೇ ಆಗಿರಲು ಹೇಗೆ ಸಾಧ್ಯ? ಬೇರೆ ದಾರಿಗಳು ಲಭ್ಯವಿದ್ದಾಗ ಎಷ್ಟು ಸ್ತ್ರೀಯರು ತಾಯ್ತನವನ್ನು ನಿಜವಾಗಿ ಬಯಸಿಯಾರು? ಮುಂತಾದ ಪ್ರಶ್ನೆಗಳು ಇಲ್ಲಿ ಏಳುತ್ತವೆ. ಆದರೆ ಸಹಸ್ರಾರು ವರ್ಷಗಳ ರೂಢಿಗತ ನಂಬಿಕೆಯು ಹೆಣ್ಣಿನ ಸಂಪ್ರದಾಯವೆಂದೇ ಸ್ಥಾಪಿಸಿರುವಾಗ ಜನರು ಅದನ್ನು ಪ್ರಶ್ನಿಸದೆಯೇ ಸಹಜವೆಂದೇ ಸ್ವೀಕರಿಸುತ್ತಾರೆ. ಈ ಕ್ರಮ ಚಾರಿತ್ರಿಕವೆಂದಾಗಲೀ ಇದು ಬದಲಾಗಬಹುದು ಎಂದಾಗಲಿ ಅವರು ಚಿಂತಿಸಲಾರರು.

ಹೆಣ್ಣು ಗಂಡಿನ ದುಡಿಮೆಗಳಿಗೆ ಎರಡು ರೀತಿಯಲ್ಲಿ ಬೆಲೆಕಟ್ಟುವ ನಮ್ಮ ವ್ಯವಸ್ಥೆಯಲ್ಲಿ ಕಡಿಮೆ ಸಂಬಳ ಸುಲಭವಾಗಿ ಕೆಲಸದಿಂದ ತೆಗೆದುಹಾಕುವುದು ಅನಿಶ್ಚಿತತೆ, ಅಭದ್ರತೆ, ಭ್ರಷ್ಟಾಚಾರ, ಪಿತೃವಂಶೀಯ ಕುಟುಂಬ ಪದ್ಧತಿಯಿಂದಾಗಿ ತವರಿನಿಂದ ಗಂಡನ ಮನೆಗೆ ರವಾನೆಯಾಗುವ ಅನಿವಾರ್ಯ, ತಾಯ್ತನವೇ ಮುಂತಾದ ಅನೇಕ ಅಂಶಗಳು ಮಹಿಳೆಯರ ದುಡಿಮೆಯ ಹಕ್ಕನ್ನು ಅವರ ದಕ್ಷತೆ, ಸಾಮರ್ಥ್ಯಗಳನ್ನೂ ದುಡಿಮೆಯ ಸಾಧನೆಗಳನ್ನೂ ನಿಯಂತ್ರಿಸುವುದು ಸಾಮಾನ್ಯ ನೋಟ, ಇಂಥ ಸ್ಥಿತಿಯಿಂದ ವಿಮುಕ್ತಿ ದೊರೆಯಬೇಕಾದರೆ ಒಳ-ಹೊರ ದುಡಿಮೆಗಳು ಸ್ತ್ರೀ ಪುರುಷರಿಬ್ಬರಿಗೂ ಸಮಾನ ಅನಿವಾರ್ಯ ಧರ್ಮವಾಗಬೇಕು ಎಂಬುದು ಸ್ತ್ರೀವಾದದ ಮುಖ್ಯ ಹಕ್ಕೊತ್ತಾಯವಾಗಿದೆ.

ಹೀಗೆ ಸ್ತ್ರೀವಾದದ ತಾತ್ವಿಕ ಲಕ್ಷಣಗಳನ್ನು ಗಮನಿಸಿದಾಗ ಸಮಾಜದಲ್ಲಿ ಲಿಂಗಾಧಾರಿತ ಅಸಮಾನತೆಯಿದೆ ಎಂಬ ವಿಷಯದ ಬಗ್ಗೆ ಅರಿವನ್ನು ಮೂಡಿಸಿಕೊಂಡು ಸಮಾಜದ ವಿವಿಧ ಸಂಸ್ಥೆಗಳಲ್ಲಿ ಸ್ತ್ರೀಯರು ಎದುರಿಸುತ್ತಿರುವ ತಾರತಮ್ಯ ದೌರ್ಜನ್ಯ ಹಾಗೂ ಶೋಷಣೆಗಳನ್ನು ಮನಗಂಡು ಈ ಪ್ರವೃತ್ತಿಗಳನ್ನು ಕೊನೆಗಾಣಿಸಲು ನಡೆಸುವು ಎಲ್ಲ ಉದ್ದೇಶಿತ ಪ್ರಾಮಾಣಿಕ ಪ್ರಯತ್ನಗಳನ್ನು ಸ್ತ್ರೀವಾದ ಎಂದು ಕರೆಯಬಹುದು. ಈ ಅರ್ಥದಲ್ಲಿ ಸ್ತ್ರೀವಾದ ಒಂದು ವಿಚಾರಧಾರೆಯೂ ಹೌದು ಒಂದು ಜೀವನ ಕ್ರಮವೂ ಹೌದು. ಶೋಷಣೆಯ ವಿರುದ್ಧದ ಹೋರಾಟದಲ್ಲಿ ಸ್ತ್ರೀವಾದಿಗಳು ಅಳವಡಿಸಿಕೊಳ್ಳುವ ಒಂದು ಸೈದ್ಧಾಂತಿಕ ಕ್ರಮವೂ ಸ್ತ್ರೀವಾದವೇ. ಒಟ್ಟಿನಲ್ಲಿ ಸ್ತ್ರೀಪರ ವಿಚಾರಗಳಲ್ಲಿ ಕಾಳಜಿಯನ್ನು ಹೊಂದಿರುವ ಹಾಗೂ ಸ್ತ್ರೀ ಸಂಬಂಧಿ ವಿಚಾರಗಳಿಗೆ ಸ್ಪಂದಿಸುವ ಮನೋಭಾವವನ್ನು ಬೆಳೆಸಿಕೊಂಡಿರುವ ಸ್ತ್ರೀಯರು ಮತ್ತು ಪುರುಷರನ್ನು 'ಸ್ತ್ರೀವಾದ'ಗಳು ಎಂದೂ ಅವರ ದೃಷ್ಟಿಕೋನವನ್ನು 'ಸ್ತ್ರೀವಾದಿ' ಎಂತಲೂ ಹೇಳಬಹುದು.

ಪಾಶ್ಚಿಮಾತ್ಯ ಸ್ತ್ರೀವಾದ ಬೆಳೆದುಬಂದ ಬಗೆ

ಸ್ತ್ರೀಪರ ಚಿಂತನೆಗಳು ಪಾಶ್ಚಿಮಾತ್ಯದಲ್ಲಿ ೧೭ನೆ ಶತಮಾನದಲ್ಲಿ ಪ್ರಾರಂಭ-ವಾದವು. ಆದರೂ ಅವು ಒಂದು ವಿಶಿಷ್ಟ ಸೈದ್ಧಾಂತಿಕ ರೂಪ ಪಡೆದುಕೊಂಡಿದ್ದು ೧೯ನೇ ಶತಮಾನದಲ್ಲಿ. ಇದಕ್ಕೆ ಮೂಲ ಆ ಸಮಯದಲ್ಲಿ ಹುಟ್ಟಿಕೊಂಡ ಸಮಾನತೆ ಹಾಗೂ ಸ್ವಾತಂತ್ರ್ಯದ ತತ್ವಗಳು. "ಸ್ತ್ರೀವಾದ ಮೇರಿವುಲ್ಫ್‌ಸ್ಟನ್ ಕ್ರಾಫ್ಟ್, ವರ್ಜಿನಿಯಾ ವುಲ್ಫ್ ಸಿಮೋನ್‌ದ ಬೋವಾ, ಬೆಟೆ ಫ್ರೀಡನ್, ಮೇರಿ ವಿಲ್ಮಸ್, ಶುಲಾಮಿಕ್ ಫೈರ್‌ಸ್ಟೋನ್ ಹಾಗೂ ಕೇಟ್ ಮಿಲೇಟ್ ಮುಂತಾದ ಚಿಂತಕಿಯರ ಚಿಂತನೆಗಳ ಫಲವಾಗಿದೆ. ಸ್ತ್ರೀವಾದಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲಿ ತಳಪಾಯ ಕಟ್ಟಿದವರು ಈ ಮಹಿಳೆಯರು. ಆದರೂ ಅವರುಗಳಿಗೆಲ್ಲ ಪ್ರಭಾವ ಬೀರಿದ್ದು ಪುರುಷರ ಚಿಂತನೆಗಳೇ ಎಂಬುದನ್ನು ಮರೆಯಬಾರದು. ಮೇರಿವುಲ್ಫ್‌ಸ್ಟನ್ ಕ್ರಾಫ್ಟ್ ರೂಸೋನ ವಿಚಾರಗಳಿಂದ, ಬೋವಾ ಸಾರ್ತ್ರೆ, ಕಾರ್ಲ್‌ಮಾರ್ಕ್ಸ್ ಮತ್ತು ಫ್ರಾಯ್ಡ್‌ನ ತಾತ್ವಿಕ ಚಿಂತನೆಗಳಿಂದ ಪ್ರೇರಣೆ ದೊರೆತಿದೆ. ಈ ಎಲ್ಲಾ ಚಿಂತಕಿಯರ ಸ್ತ್ರೀವಾದದ ಬಗೆಗಿನ ಚಿಂತನೆಗಳನ್ನು ಸಾಂದರ್ಭಿಕವಾಗಿ ಹಾಗೂ ಸುಕ್ಷಿಪ್ತವಾಗಿ ಗಮನಿಸಬಹುದು.

೧೮ನೇ ಶತಮಾನದ ಮೇರಿವುಲ್‌ಸ್ಟನ್ ಕ್ರಾಫ್ಟ್ ಸ್ತ್ರೀವಾದದ ಆದಿ ಚಿಂತಕಿಯರಲ್ಲಿ ಪ್ರಮುಖಳು. ರಾಜಪ್ರಭುತ್ವ, ಧಾರ್ಮಿಕ ಕಟ್ಟುಪಾಡು ಹಾಗೂ ಪುರುಷ ಪ್ರಧಾನ ಮೌಲ್ಯಗಳು ಪ್ರಬಲವಾಗಿದ್ದಂತಹ ಕಾಲದಲ್ಲಿ ಸ್ತ್ರೀ ಸಮಾನತೆ, ಮತ್ತು ಸ್ತ್ರೀ ಹಕ್ಕುಗಳನ್ನು ಎತ್ತಿ ಹಿಡಿವ ಮೇರಿ ಕ್ರಾಂತಿಕಾರಕ ಚಿಂತಕಿಯಾಗಿದ್ದಾಳೆ. ಅವಳ "A vindication of Rights of Women' (1792)" ಕೃತಿಯು ಸ್ತ್ರೀವಾದಿ ಚಿಂತನೆಯ ಮೊಟ್ಟಮೊದಲ ಉತ್ಕೃಷ್ಟ ಕೃತಿಯಾಗಿದೆ. ಇದರಲ್ಲಿ ಸ್ತ್ರೀ ವಿರೋಧಿಯಾಗಿದ್ದ ಹಲವಾರು ಅಂಶಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿ ಸ್ತ್ರೀಪರವಾದ ಹಕ್ಕೊತ್ತಾಯ-ಗಳನ್ನು ಮುಂದಿಟ್ಟಿದ್ದಾಳೆ ಮೇರಿಯ ವಾದಗಳು ಫ್ರೆಂಚ್ ಕ್ರಾಂತಿಯ ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವದ ತತ್ವಗಳನ್ನು ಆಧರಿಸಿವೆ. ಸ್ತ್ರೀಯರ ಪರಾಧೀನತೆ ಕೃತಕವಾದುದು. ಎಂದು ಹೇಳುತ್ತಾಳೆ. "ಎವಿಂಡಿಕೇಶನ್ ಆಫ್ ದಿ ರೈಟ್ಸ್ ಆಫ್ ದಿ ಮ್ಯಾನ್ (೧೭೯೦)" ಎಂಬ ಗ್ರಂಥದಲ್ಲಿ ಬರ್ಕಿನ್ ಹೇಳುವ "ಸ್ತ್ರೀಯು ಪುರುಷನು ತನ್ನ ಅವಶ್ಯಕತೆಗೆ ತಕ್ಕಂತೆ ರೂಪಿಸಿದ ಆದರ್ಶ ಸ್ತ್ರೀತ್ವದ ಚಿಹ್ನೆ ತನಗೋಸ್ಕರ ಅಲ್ಲ, ಮಹಿಳೆಯರು ಮೃದು ಸ್ವಭಾವದವರು ಸೂಕ್ಷ್ಮ ಜೀವಿಗಳು ತಾರ್ಕಿಕವಾಗಿ ಚಿಂತಿಸುವವರಲ್ಲ" (ಡಾ. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ-೪, ಪುಟ. ೧೨) ಎಂಬ ವಿಚಾರವನ್ನು ಅಲ್ಲಗಳೆಯುತ್ತಾಳೆ. ಫ್ರೆಂಚ್ ಕ್ರಾಂತಿಯ ಪುರುಷರು ಸ್ತ್ರೀಯರಿಗೆ ಮನೆಯೇ ಸರಿಯಾದ ಸ್ಥಳ. ಅದೇ ಅವರಿಗೆ ಸ್ವಾತಂತ್ರ್ಯವನ್ನು ನೀಡುತ್ತದೆ ಎಂದು ಹೇಳಿದರು. ಆದರೆ ಕ್ರಾಂತಿಯ ಆದರ್ಶ ತತ್ವಗಳಾದ ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವ ಮಹಿಳೆಯರಿಗೆ ಅನ್ವಯವಾಗಲಿಲ್ಲ. ಇದನ್ನು ವಿರೋಧಿಸಿ ಮೇರಿ ತನ್ನ ಗ್ರಂಥದಲ್ಲಿ ಪುರುಷರ ಹಕ್ಕುಗಳಲ್ಲಿ ಮಹಿಳೆಯರ ಹಕ್ಕುಗಳನ್ನು ಸೇರಿಸಬೇಕೆಂದು ವಾದ ಮಾಡಿದಳು.

ಮೇರಿಯು ಸ್ತ್ರೀಯರನ್ನು ಲೈಂಗಿಕ ಭೋಗದ ಜೀವಿಗಳನ್ನಾಗಿ ನೋಡುವುದಕ್ಕಿಂತ ಮಾನವ ಜೀವಿಗಳನ್ನಾಗಿ ನೋಡುವುದು ತುಂಬ ಮುಖ್ಯ ಎನ್ನುತ್ತಾಳೆ. ಸ್ತ್ರೀಯರ ಬೇಡಿಕೆಗಳನ್ನು ಕೇವಲ ಸ್ತ್ರೀಯರ ಬೇಡಿಕೆಗಳಾಗಿ ಪೂರೈಸುವುದಕ್ಕಿಂತ ಮಾನವ ಜೀವಿಯ ಬೇಡಿಕೆಯಾಗಿ ಪೂರೈಸಬೇಕು. ಸ್ತ್ರೀಯರಲ್ಲೂ ತಾರ್ಕಿಕ ಶಕ್ತಿ ಇದೆ. ಅವರೂ ವಿಚಾರ ಮಾಡುವ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ. ಆದ್ದರಿಂದ ಪುರುಷರಂತೆಯೇ ಹಕ್ಕುಗಳನ್ನು ಹೊಂದಲು ಅರ್ಹರಾಗಿದ್ದಾರೆ ಎಂದು ವಾದಿಸುತ್ತಾಳೆ. ಪುರುಷರ ದಬ್ಬಾಳಿಕೆಗಳ ಫಲವಾಗಿ

ಮಹಿಳೆಯರು ತಮ್ಮ ಧ್ವನಿಯನ್ನು ಕಳೆದುಕೊಂಡಿದ್ದಾರೆ. ತುಂಬ ದಮನಗೊಂಡಿರುವ ಅವರು ತಮ್ಮನ್ನು ಕುರಿತು ತಾವೇ ಏನನ್ನೂ ಹೇಳಲು ಅಸಮರ್ಥರಾಗಿದ್ದಾರೆ. ಇದರಿಂದಾಗಿ ಹೆಂಗಸರ ಬುದ್ಧಿಮತ್ತೆ ಕೆಳದರ್ಜೆಯದೆಂದು ಪುರುಷರು ನಿರ್ಧರಿಸಲು ಕಾರಣವಾಗಿದೆ. ಹತ್ತಿಕ್ಕುವಿಕೆಯೇ ಸ್ತ್ರೀಯರ ಅವನತಿಯ ಮೂಲವೆಂದು ಈಕೆ ವಿಶ್ಲೇಷಿಸುತ್ತಾಳೆ.

ಮೇರಿಯು ಸ್ತ್ರೀಯರ ವ್ಯಕ್ತಿ ಸ್ವಾತಂತ್ರ್ಯ ಮತ್ತು ಹಕ್ಕುಗಳ ಕುರಿತು ಸಾಕಷ್ಟು ಚರ್ಚಿಸಿದ್ದಾಳೆ. ಸ್ತ್ರೀಯು ಎಲ್ಲಾ ಪಾತ್ರಗಳನ್ನು ಗುರುತಿಸುತ್ತಾಳೆ. ತಾಯಿಯಾಗಿ, ಪತ್ನಿಯಾಗಿ, ನಾಗರಿಕಳಾಗಿ ಹಾಗೂ ಒಬ್ಬ ವ್ಯಕ್ತಿಯಾಗಿ ಸ್ತ್ರೀಯನ್ನು ಚಿತ್ರಿಸುತ್ತಾಳೆ. ಅವೆಲ್ಲಕ್ಕಿಂತ ತರ್ಕದಲ್ಲಿ ಅಪರಿಮಿತ ವಿಶ್ವಾಸ ಹೊಂದಿದ್ದಳು ಹಾಗೆಯೇ ಭವಿಷ್ಯದಲ್ಲಿ ಪರಿಸ್ಥಿತಿಯು ಬಯಲಾಗುತ್ತದೆ ಎಂಬ ಆಶಾಭಾವನೆಯನ್ನು ಹೊಂದಿದ್ದಳು.

ಮೇರಿವುಲ್ಫ್‌ಸ್ಟನ್ ಕ್ರಾಫ್ಟ್‌ಳ ನಂತರ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಪ್ರಸಿದ್ಧಳಾದ ಸ್ತ್ರೀವಾದಿ ಚಿಂತಕಿ ಎಂದರೆ ವರ್ಜೀನಿಯಾವುಲ್ಫ್ (೧೮೮೨-೧೯೪೧) "ಕಾಲದ ದೃಷ್ಟಿಯಿಂದಲೂ ಮಹಿಳಾ ವಿಮೋಚನೆಯ ಪ್ರಶ್ನೆಯನ್ನು ಅಭಿವ್ಯಕ್ತಿ ಮತ್ತು ಸೃಜನಶೀಲತೆಯ ಪ್ರಶ್ನೆಯ ಜೊತೆ ಸೇರಿಸಿರುವ ದೃಷ್ಟಿಯಿಂದಲೂ ವರ್ಜೀನಿಯಾ ವುಲ್ಫ್ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದಿದ್ದಾಳೆ. ಈಕೆಯ ಸೃಜನಾಶೀಲ ಬರಹಕ್ಕೂ ಸೃಜನೇತರ ಬರಹಕ್ಕೂ 'ಮಹಿಳೆಯೇ ಕೇಂದ್ರ. ತೀಕ್ಷ್ಣವಾದ ಸ್ವೋಪಜ್ಞತೆಯಿಂದ ಚಿಂತಿಸುವುದಕ್ಕಾಗಿ ಪ್ರಸಿದ್ಧಳಾಗಿರುವ ವುಲ್ಫ್, ಸ್ತ್ರೀ ನಿಷ್ಠವಾದ ಹಲವು ರಾಜಕೀಯ ಬೇಡಿಕೆಗಳನ್ನು ಮುಂದಿಡುತ್ತಾಳೆ."[೧]

ಲಿಂಗಭೇದ ವ್ಯವಸ್ಥೆಯನ್ನು ಬಲವಾಗಿ ಖಂಡಿಸುವ ಮೂಲಕ ಒಂದು ತಾತ್ವಿಕ ವಿಶ್ಲೇಷಣೆಯನ್ನು ನೀಡಿ ಅದು ಸಾಂಸ್ಕೃತಿಕವಾಗಿ ಕಟ್ಟಲ್ಪಟ್ಟಿರುವಂಥದ್ದೂ ಹಾಗೆಯೇ ಬದಲಾಗುವಂಥದ್ದು ಎಂದು ಪ್ರತಿಪಾದಿಸಿ ಅದು ಪ್ರಶ್ನಾರ್ಹವೆಂದು ಪ್ರತಿಪಾದಿಸಿದ್ದು ವರ್ಜೀನಿಯಾವುಲ್ಫ್ ಸ್ತ್ರೀವಾದಿ ಚಿಂತನೆಗೆ ನೀಡಿದ ಮಹತ್ವದ ಕಾಣಿಕೆಯೆನಿಸಿದೆ. ವುಲ್ಫ್‌ಳ ಚಿಂತನೆಗಳ ಸಮಗ್ರ ತಾತ್ವಿಕ ವಿಚಾರಗಳನ್ನು ದೊರಕಿಸಿಕೊಡುವ ಮೂರು ಮುಖ್ಯ ಕೃತಿಗಳೆಂದರೆ A room of one's own' (1929), 'Three Guineas' (1938), ಮತ್ತು 'Women and writing' (1979) ಮಹಿಳೆಯರನ್ನು ಪುರುಷರು ದಮನಗೊಳಿಸುವ

---

೧. ಡಾ. ಬಿ.ಎನ್.ಸುಮಿತ್ರಾಬಾಯಿ, ಸ್ತ್ರೀವಾದ, ಪುಟ. ೧೬

ಸಾಮಾಜಿಕ ಮತ್ತು ಮಾನಸಿಕ ವಿಧಾನಗಳನ್ನು ವುಲ್ಫ್ ವಿಶ್ಲೇಷಿಸಿದ್ದಾಳೆ. "ಪುರುಷನಿಂದ ಭಿನ್ನಳಾದ ಸ್ತ್ರೀ ಆತನನ್ನೇ ಪ್ರತಿಬಿಂಬಿಸುವ ಕನ್ನಡಿಯಂತಿದ್ದು ಅವನ ವಿಚಾರ, ಹಿತಾಸಕ್ತಿಗಳೇ ಇರುವಂಥ ಸಾಮಾಜಿಕ ವ್ಯವಸ್ಥೆಯನ್ನೇ ಎತ್ತಿಹಿಡಿಯುತ್ತಾಳೆ, ದೃಢಪಡಿಸುತ್ತಾಳೆ. ಕೌಟುಂಬಿಕ ಶ್ರಮ ವಿಭಜನೆಯಲ್ಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರನ್ನು ಪ್ರತ್ಯೇಕಗೊಳಿಸುವುದಕ್ಕೆ ಪುರುಷರು ಸ್ತ್ರೀಯರನ್ನು ಭೌತಿಕವಾಗಿಯೂ ತಾತ್ವಿಕವಾಗಿಯೂ ಆಳುತ್ತಿರುವುದರಲ್ಲೇ ಕಾರಣವಿದೆ"[೧]ಎಂದು ವುಲ್ಫ್ ಪ್ರತಿಪಾದಿಸಿದ್ದಾಳೆ.

ಲೇಖಕಿಯರು ತಮ್ಮ ಹೊರಗಿನ ಸಮಾಜ ಹಾಗೂ ತಮ್ಮ ಒಳಗೂ ಎದುರಿಸಬೇಕಾದ ಅಡೆತಡೆಗಳು ಅವರ ಕೃತಿಯ ಗುಣಮಟ್ಟವನ್ನು ಹೇಗೆ ನಿಯಂತ್ರಿಸುತ್ತವೆ ಎಂಬುದರತ್ತ ಆಕೆ ಬೆಳಕು ಚೆಲ್ಲಿದ್ದಾಳೆ. ಅತಿರೇಕದ ಆದರ್ಶ, ದೈವಿಕತೆಗಳ ಭ್ರಮೆಯಿಂದ ಹೊರಬಂದು ಮಾನವೀಯ ಮೌಲ್ಯಗಳನ್ನು ಸಾಕಾರ-ಗೊಳಿಸುವಂಥ ಮಡಿವಂತಿಕೆಯಿಲ್ಲದ ಪ್ರಾಮಾಣಿಕವಾದ ಬರಹವನ್ನು ಮಹಿಳೆಯರು ಬರೆಯಬೇಕೆಂದು ಆಕೆ ಪ್ರತಿಪಾದಿಸುತ್ತಾಳೆ.

ಪಾಶ್ಚಿಮಾತ್ಯ ಸ್ತ್ರೀವಾದಿ ಚಿಂತಕಿಯರಲ್ಲಿ ವ್ಯಾಪಕವಾದ ಪರವಿರೋಧ ಚರ್ಚೆಗೆ ಒಳಪಟ್ಟು ವ್ಯಾಪಕವಾಗಿ ಶಾಸ್ತ್ರೀಯವಾಗಿ ಮತ್ತು ಪ್ರಭಾವಶಾಲಿಯಾಗಿ ಸ್ತ್ರೀ ಕೇಂದ್ರಿತ ಚಿಂತನೆಯನ್ನು ಕೊಟ್ಟ ಲೇಖಕಿ ಸಿಮೋನ್‌ದ ಬೋವಾ. ಇವಳ ಸುಪ್ರಸಿದ್ಧವಾದ ಕೃತಿ 'ದ್ವಿತೀಯಲಿಂಗ' (The second sex, 1949). ಇದು ಮುಂದಿನ ಸ್ತ್ರೀವಾದಿ ಚಿಂತನೆಯನ್ನು ಗಾಢವಾಗಿ ಪ್ರಭಾವಿಸಿದ ಕೃತಿಯಾಗಿದೆ. ಇದರಲ್ಲಿ ಬೋವಾ ಚಾರಿತ್ರಿಕ ಭೌತವಾದ ಮನೋ ವಿಶ್ಲೇಷಣೆ ಮತ್ತು ಅಸ್ತಿತ್ವವಾದಗಳನ್ನು ತಳಹದಿಯಾಗಿಟ್ಟುಕೊಂಡು ಸ್ತ್ರೀ ಶೋಷಣೆಗೆ ಒಂದು ತಾತ್ವಿಕ ಚೌಕಟ್ಟಿನಲ್ಲಿ ವಿವರಣೆ ನೀಡಲು ಅದರ ಸ್ವರೂಪವನ್ನು ನಿರ್ವಹಿಸಲು ಯತ್ನಿಸುತ್ತಾಳೆ.

"second Sex ಕೃತಿಯಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ 'ಸತ್ಯ ಮತ್ತು ಕಟ್ಟುಕಥೆಗಳು" ಎಂಬ ಮೊದಲನೇ ಭಾಗದಲ್ಲಿ ಹೇಗೆ ಪ್ರಾಚೀನ ಕಾಲದಿಂದಲೂ ಪುರುಷರು ಸ್ತ್ರೀಯನ್ನು ಸ್ವತಂತ್ರ ವ್ಯಕ್ತಿಯಂತಲ್ಲದೆ, ಪುರುಷತ್ವಕ್ಕೆ ಪೂರಕವಾಗುವ 'ತಾಯಿ, ಪತ್ನಿ, ವೇಶ್ಯೆ ಇತ್ಯಾದಿ ಸಿದ್ಧಪಡಿಯಚ್ಚುಗಳಲ್ಲಿ ಕಂಡಿದ್ದಾರೆಂಬುದನ್ನು ಸಮರ್ಥವಾಗಿ ಸಿಮೋನ್ ದಾಖಲಿಸುತ್ತಾಳೆ. 'ಇಂದು ಸ್ತ್ರೀಯ ಬದುಕು' ಎಂಬ

---

೧. ಡಾ.ಬಿ.ಎನ್. ಸುಮಿತ್ರಾಬಾಯಿ, ಸ್ತ್ರೀವಾದ ಪುಟ. ೧೬.

ಎರಡನೇ ಭಾಗದಲ್ಲಿ ಸ್ತ್ರೀಯು ಪಾಲನೆ, ಅವಳಿಗೆ ನೀಡುವ ಶಿಕ್ಷಣ ಅವಳ ಸಾಮಾಜಿಕ ಪರಿಸ್ಥಿತಿ ಇವೆಲ್ಲವೂ ಹೇಗೆ ಸ್ತ್ರೀಯನ್ನು ಒಂದು ಪೂರ್ವ ನಿರ್ಧಾರಿತ ಪ್ರಕಾರದಲ್ಲಿ ನಿಯಂತ್ರಿಸಿ ಸ್ವತಃ ಅವಳೇ ತನ್ನ ಪರಾಧೀನ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ ಎಂಬುದನ್ನು ವಿವರಿಸುತ್ತಾಳೆ. 'ವಿಮುಕ್ತಿಯತ್ತ' ಎಂಬ ಕೃತಿಯ ಕೊನೆಯ ಭಾಗದಲ್ಲಿ ತನ್ನ ಪರಾಧೀನ ಪರಿಸ್ಥಿತಿಯಿಂದ ಸ್ತ್ರೀ ಹೊರ ಬರಬೇಕಾದರೆ ಆಗಬೇಕಾದ ಸಾಮಾಜಿಕ ವೈಚಾರಿಕ ಪರಿವರ್ತನೆಗಳ ಚರ್ಚೆಯಿದೆ."[೧]

ಹಲವಾರು ದಾರ್ಶನಿಕರು ಸ್ತ್ರೀಯ ಪರಾಧೀನ ಸ್ಥಿತಿ ದೈವಮಾನ್ಯವಾಗಿದೆ ಮತ್ತು ಈ ಪ್ರಪಂಚದಲ್ಲಿ ಉಪಯುಕ್ತವಾಗಿದೆ' ಎಂದು ಸಮರ್ಥಿಸುತ್ತಾ ಬಂದಿದ್ದಾರೆ. ಇದಕ್ಕೆ ಆಧಾರವಾಗಿ ಜೈವಿಕ ಶಾಸ್ತ್ರ, ಮನೋವಿಜ್ಞಾನ ಇತ್ಯಾದಿ ಎಲ್ಲಾ ಕ್ಷೇತ್ರವನ್ನು ಶೋಧಿಸಿದ್ದಾರೆ. ಇಂತಹ ಸ್ತ್ರೀಪುರುಷ ಭಿನ್ನತೆಯನ್ನು ಬೋವಾ ಒಪ್ಪಿಕೊಂಡು "ಒಟ್ಟಿನಲ್ಲಿ ಜೈವಿಕವಾಗಿ ಸ್ತ್ರೀ ನಿಸರ್ಗ ಶಪಿತಳೆ ಹೌದು. ಮಾಸಿಕ ಋತುಸ್ರಾವ, ಗರ್ಭಧಾರಣೆ, ಪ್ರಸವ ವೇದನೆ, ಪ್ರಸವ ಇತ್ಯಾದಿ ಅವ್ಯಾಹತ ಸಂಕಟಗಳನ್ನು ಸ್ತ್ರೀ ಸದಾ ಎದುರಿಸಬೇಕಾಗುತ್ತದೆ. ಸ್ತ್ರೀ ಪುರುಷನಂತೆ ವೇಗವಾಗಿ ಓಡಲಾರಳು ಅವನಷ್ಟೇ ಭಾರ ಎತ್ತಲಾರಳು ದುರ್ಬಲಳು ಮತ್ತು ಮಾನಸಿಕವಾಗಿ ಅವಳಿಗೆ ಪುರುಷನಿಗಿರುವಷ್ಟು ಸಂಕಲ್ಪ ಶಕ್ತಿ ಇಲ್ಲ"[೨] ಎಂದು ಹೇಳುತ್ತಾಳೆ.

ಆದರೆ ಬೋವಾ ಹೇಳುವುದೇನೆಂದರೆ ಇಂತಹ ಜೈವಿಕ ಸಾಕ್ಷ್ಯ ಸ್ತ್ರೀಯನ್ನು ಪುರುಷನಿಗಿಂತ ಭಿನ್ನಳೆಂದು ಸ್ಥಾಪಿಸುತ್ತದೆಯೇ ಹೊರತು ಅವನಿಗಿಂತ ಕೀಳು ಎಂದಲ್ಲ. ಅಂದರೆ ಲಿಂಗಭೇದ ಒಂದು ಶ್ರೇಣೀಕೃತ ಮೌಲ್ಯವಲ್ಲ ಎಂದು ವಾದಿಸುತ್ತಾಳೆ. ಆರ್ಥಿಕ ಪರಾವಲಂಬನೆ ಸ್ತ್ರೀಯ ಸಾಮಾಜಿಕ ಕೌಟುಂಬಿಕ ಸ್ಥಾನಮಾನಗಳನ್ನು ನಿಕೃಷ್ಟವನ್ನಾಗಿಸಿವೆ. ಆದರೆ ಆರ್ಥಿಕ ಸ್ವಾತಂತ್ರ್ಯವೊಂದೇ ಸ್ತ್ರೀಗೆ ತನ್ನತನವನ್ನು ಕೊಡಲಾರದು ಎಂದು ಬೋವಾ ವಾದಿಸುತ್ತಾಳೆ. ಆದ್ದರಿಂದ ಸಿಮೋನ್ ಬೋವಾಳ The second sex ಸ್ತ್ರೀವಾದಿ ಚಿಂತನೆಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲಾಯಿತು.

---

೧. ಸಿ.ಎನ್.ರಾಮಚಂದ್ರನ್, ಸಾಹಿತ್ಯ ವಿಮರ್ಶೆ, ಪುಟ. ೮೫.

೨. ಅದೇ, ಪುಟ. ೮೭

ಪಾಶ್ಚಿಮಾತ್ಯ ಸ್ತ್ರೀವಾದಿ ಚಿಂತಕಿಯರಲ್ಲಿ ಮತ್ತೊಂದು ಮುಖ್ಯವಾದ ಹೆಸರು. ಬಿಟೆ ಫ್ರೈಡನ್; ಈಕೆ ತನ್ನ The Feminine Mystique' (1963) ಕೃತಿಯಲ್ಲಿ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀತ್ವದ ಸಾಂಪ್ರದಾಯಿಕ ಮಾದರಿಗಳಲ್ಲಿ ತೊಳಲಾಡುತ್ತಿರುವ ಮಹಿಳೆಯರ ಸಂಕಟವನ್ನು ಕುರಿತು ಚರ್ಚಿಸಿದ್ದಾಳೆ. ಸ್ತ್ರೀಯರು ತಮ್ಮ ಮಾನಸಿಕ ಕ್ಷುಬ್ದ ಸ್ಥಿತಿಗಳಿಂದ ಹೊರಬರಬೇಕಾದರೆ ಪತ್ನಿ, ತಾಯಿ, ಗೃಹಿಣಿಯರಾಗಿ ಬದುಕನ್ನು ಇಡಿಯಾಗಿ ಕಳೆಯುವ ಸ್ಥಿತಿಗಳಿಂದ ಹೊರಬರಬೇಕು. ಸಿದ್ಧ ಪಾತ್ರಗಳಿಗೆ ಜೋತು ಬೀಳದೆ ಮನೆಯ ಹೊರಗಿನ ಸಾಮಾಜಿಕ ವಾಸ್ತವತೆಗಳಿಗೆ ಮುಖಾಮುಖಿಯಾಗುತ್ತ ತಮ್ಮದೇ ಆದ ಬದುಕನ್ನು ಸ್ವತಃ ರೂಪಿಸಿಕೊಳ್ಳಬೇಕು. ವಿಶಾಲ ಸಮಾಜದಲ್ಲಿ ತಾನೂ ಒಬ್ಬ ವ್ಯಕ್ತಿಯೆಂದು ಗುರುತಿಸಿಕೊಳ್ಳಲು ತನ್ನ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳಲು ಉದ್ಯೋಗವು ಅವಕಾಶವನ್ನು ನೀಡುತ್ತದೆ. ಹಾಗಾಗಿ ತಮ್ಮ ಅಸ್ಮಿತೆಯನ್ನು ಪಡೆದು ಕೊಳ್ಳುವುದರಲ್ಲಿ ಮಹಿಳೆಯರ ಬಿಡುಗಡೆಯಿದೆ ಎಂದು ಫ್ರೈಡಾನ್ ವಾದಿಸುತ್ತಾಳೆ.

ಸ್ತ್ರೀವಾದಿ ಚಿಂತನೆಯ ದಿಕ್ಕನ್ನು ಬದಲಿಸಿದ ಚಿಂತಕಿ ಮೇರಿ ಎಲ್‌ಮನ್ ಈಕೆ ತನ್ನ 'Thinking about women' (1968) ಕೃತಿಯಲ್ಲಿ ತನ್ನ ಚಿಂತನೆಗಳನ್ನು ತಂದಿದ್ದಾಳೆ. ಅವಳು ಲಿಂಗಭಿನ್ನತೆ ಎಂಬುದು ಬರಿ ಜೀವ ಶಾಸ್ತ್ರೀಯ ನೆಲೆಗೆ ಸೀಮಿತವಲ್ಲ. ಬದುಕಿನ ವಿದ್ಯಾಮಾನಗಳನ್ನು ಗ್ರಹಿಸುವ ಅರ್ಥಮಾಡಿಕೊಳ್ಳುವ ರೀತಿಯಲ್ಲಿಯೇ ಲೈಂಗಿಕ ಸಾದೃಶ್ಯವನ್ನು ಆಧರಿಸಿದ ಕ್ರಮವೊಂದು ಇರುತ್ತದೆ. ಇಂಥ ಲೈಂಗಿಕ ಸಾದೃಶ್ಯದ ಚಿಂತನಾ ಕ್ರಮವು ಮಹಿಳೆಯರೂ, ಪುರುಷರೂ ಜಗತ್ತನ್ನು ಕಾಣುವ ಬಗೆಯನ್ನು ಅವರ ಅನುಭವಗಳ ವರ್ಗೀಕರಣವನ್ನು ಭಿನ್ನವಾಗಿ ರೂಪಿಸುತ್ತಿರುತ್ತದೆ ಎಂದು ಪ್ರತಿಪಾದಿಸಿದ್ದು ಮಹತ್ವಪೂರ್ಣ ಚಿಂತನೆಯಾಗಿದೆ.

ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಹೆಸರಿಸಲೇ ಬೇಕಾದ ಪ್ರಮುಖ ಚಿಂತಕಿ ಎಂದರೆ ಕೇಟ್‌ಮಿಲೆಟ್,. ಸ್ತ್ರೀವಾದಿ ಚಿಂತನೆಯ ಇತಿಹಾಸದಲ್ಲಿ ಇವಳು ಬರೆದಿರುವ 'The Sexual Politics' (1969) ಕೃತಿಗೆ ಪ್ರಮುಖ ಸ್ಥಾನವಿದೆ. ಈ ಕೃತಿಯಲ್ಲಿ ಸ್ತ್ರೀಯರ ಪಾರತಂತ್ರಕ್ಕೆ ಕಾರಣ ಪಿತೃಪ್ರಧಾನ ವ್ಯವಸ್ಥೆ ಎಂದು ವಾದಿಸುತ್ತಾಳೆ. ಸ್ತ್ರೀಯರು ಪುರುಷರ ಲೈಂಗಿಕ ರಾಜಕೀಯದ ಬಲಿಪಶುಗಳಾಗಿ ಅನಾದಿಕಾಲದಿಂದಲೂ ತಮ್ಮವೆಂದು ಪುರುಷರಿಂದ ನಿರ್ಧರಿಸಲ್ಪಟ್ಟ ಸಿದ್ಧಪಡಿಯಚ್ಚುಗಳ ಒಳಗೇ ಬದುಕುತ್ತಿದ್ದಾರೆ ಎಂದು ತೀರ್ಮಾನಿಸುತ್ತಾಳೆ.

ಕೇಟ್‌ಮಿಲೇಟ್ ತನ್ನ The Sexual Politics ಗ್ರಂಥದಲ್ಲಿ ಮೂರು ಮುಖ್ಯ ಆರೋಪಗಳನ್ನು ಮಾಡುತ್ತಾಳೆ.

೧) ಪುರುಷ ಬರಹಗಾರರು ಸ್ತ್ರೀಯರು ಮತ್ತು ಪುರುಷರ ಪಾತ್ರಗಳನ್ನು ತಮ್ಮ ಹಿತಾಸಕ್ತಿಗೆ ಅನುಗುಣವಾಗಿಯೇ ತಿರುಚಿರುತ್ತಾರೆ.

೨) ಈ ಎಲ್ಲಾ ಭಿನ್ನತೆಗತಳನ್ನು ಸ್ತ್ರೀ ಸ್ವಭಾವದ್ದು ಎಂದು ಆರೋಪಿಸಿ ಲೈಂಗಿಕತ್ವವನ್ನೇ ತಪ್ಪಾಗಿ ಪ್ರತಿಪಾದಿಸುತ್ತಾರೆ.

೩) ಕಥಾ ಸಾಹಿತ್ಯದ ಸಂರಚನೆಯು ಪುರುಷ ಸಂಸ್ಕೃತಿಯನ್ನೇ ಪ್ರತಿನಿಧಿಸುತ್ತದೆ.

ನಮ್ಮ ಸಾಹಿತ್ಯದ ಸಂದರ್ಭವನ್ನು ನೋಡಿದಾಗ ಈ ಆರೋಪಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಈ ಆರೋಪಗಳನ್ನು ಮೀರಿ ಅದರಾಚೆಗೂ ಬರೆಯುವ ಪುರುಷ ಬರಹಗಾರರನ್ನು ನಾವು ಗುರುತಿಸಬಹುದಾಗಿದೆ.,

ಹೀಗೆ ಈ ಮೇಲಿನ ಸ್ತ್ರೀವಾದಿ ಚಿಂತಕಿಯರ ಚಿಂತನೆಗಳ ಫಲವಾಗಿ ಪಾಶ್ಚಾತ್ಯ ದೇಶಗಳಲ್ಲಿ ಸ್ತ್ರೀವಾದವು ಸೈದ್ಧಾಂತಿಕವಾಗಿ ಬೆಳೆದು ಬಂದಿತು. ಈ ಎಲ್ಲಾ ಚಿಂತಕರು ಮಹಿಳೆಯ ಶೋಷಣೆ, ವಿಮೋಚನೆ, ಪಿತೃಪ್ರಧಾನ ವ್ಯವಸ್ಥೆಯ ತಾತ್ವಿಕತೆ ಮತ್ತು ಲಿಂಗ ಪ್ರಭೇದದ ಪರಿಕಲ್ಪನೆಗಳಿಗೆ ಮೊದಲು ರೂಪಣದ ಕಾರ್ಯವನ್ನು ಆರಂಭಿಸಿದವರೂ ಸಾಹಿತ್ಯದ ಮೂಲಕ ಸಂಸ್ಕೃತಿ ವಿಮರ್ಶೆಯನ್ನು ಬೆಳೆಸಲು ಪ್ರಯತ್ನಿಸಿದವರೂ ಆಗಿದ್ದರು. ಆದರೆ ಪಿತೃ ಪ್ರಧಾನ ಸಂಸ್ಕೃತಿಯನ್ನು ಅಂತ್ಯಗೊಳಿಸುವಲ್ಲಿ ತಮ್ಮ ವಿಮರ್ಶೆಯ ಶಕ್ತಿಯೇನು ಎಂಬುದನ್ನು ಇವರು ಕಂಡುಕೊಳ್ಳುವ ರೀತಿಯು ಕುತೂಹಲ ಹುಟ್ಟಿಸುವಂಥದ್ದು. ಸ್ತ್ರೀಯರು ಬರಿಯ ಜಡ ವಸ್ತುಗಳಂತೆ ತಮ್ಮನ್ನು ಭಾವಿಸಿಕೊಳ್ಳುವ ಸ್ಥಿತಿಯಿಂದ ಹೊರಬರುವುದಕ್ಕೆ ಮತ್ತು ಸಮಾಜದ ಕ್ರಿಯಾಶೀಲ ಉತ್ಪಾದಕ ವ್ಯಕ್ತಿಗಳಾಗಿ ತಮ್ಮನ್ನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬ ಬಲವಾದ ನಂಬಿಕೆಯನ್ನು ಇವರೆಲ್ಲರೂ ಹೊಂದಿರುವಂತೆ ತೋರುತ್ತದೆ.

ಪ್ರಪಂಚದಾದ್ಯಂತ ಶೋಷಣೆಯು ಕಾಲ, ದೇಶ ಸಮಾಜ ಬದ್ಧವಾಗಿ ತನ್ನದೇ ಆದ ಸ್ವರೂಪವನ್ನು ಹೊಂದಿವೆ. ಅದಕ್ಕೆ ಹೊಂದಿಕೊಂಡಂತೆ ಚರಿತ್ರೆ ಕಂಡ ಎಲ್ಲಾ ರೀತಿಯ ಶೋಷಣೆಗಳೂ ಮಹಿಳೆಯಲ್ಲಿ ತನ್ನ ಪರಾಕಾಷ್ಠೆಯೊಂದಿಗೆ ಪ್ರಕಟಗೊಳ್ಳುತ್ತವೆ. ಮಹಿಳೆಯ ಶೋಷಣೆಯ ಐತಿಹಾಸಿಕ ಕಥೆಗನುಗುಣವಾಗಿ ಸ್ತ್ರೀವಾದವೂ ಕಾಲದಿಂದ

ಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ. ಎಲ್ಲಿ ಸಾಮಾಜಿಕ ಬದಲಾವಣೆಗಳು ತ್ವರಿತಗತಿಯಲ್ಲಿ ಆಗುತ್ತಾ ಬಂದವೋ ಅಲ್ಲಿ ಸ್ತ್ರೀವಾದದ ಮಜಲುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮಹಿಳಾ ಶೋಷಣೆಯ ಸ್ವರೂಪವನ್ನು ತಾತ್ವಿಕ ಶಿಸ್ತಿನ ಅಧ್ಯಯನ ಕ್ರಮವನ್ನಾಗಿ ರೂಪಿಸುವಲ್ಲಿ ಪಾಶ್ಚಾತ್ಯ ಸ್ತ್ರೀವಾದಿಗಳ ಕೊಡುಗೆ ಗಮನಾರ್ಹ.

ಎಲ್ಲ ಸ್ತ್ರೀವಾದಿಗಳೂ ಸ್ತ್ರೀಪರ ಕಾಳಜಿಯನ್ನು ಹೊಂದಿದ್ದರೂ ಅವರು ಅಳವಡಿಸಕೊಳ್ಳುವ ವಿಧಾನಗಳಲ್ಲಿ ಅವರ ದೃಷ್ಟಿಕೋನಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಹೀಗಾಗಿ ಸ್ತ್ರೀವಾದಿ ನಿಲುವುಗಳಲ್ಲಿ ಉದಾರವಾದಿ ಸ್ತ್ರೀವಾದ, ಮಾರ್ಕ್ಸ್‌ವಾದಿ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಮನೋವಿಶ್ಲೇಷಣಾತ್ಮಕ ಸ್ತ್ರೀವಾದ, ಅಸ್ತಿತ್ವವಾದಿ ಸ್ತ್ರೀವಾದ ಎಂಬ ಬಗೆಗಳನ್ನು ಗುರುತಿಸುತ್ತಾರೆ.

ಸ್ತ್ರೀ ಎಂಬ ಏಕೈಕ ಕಾರಣಕ್ಕಾಗಿ ದುಡಿಮೆಗೆ ತಕ್ಕ ಪ್ರತಿಫಲದಿಂದ ವಂಚಿತರಾಗವುದು, ಅನೇಕ ಬಾರಿ ಲೈಂಗಿಕ ದುರಾಚಾರಗಳಿಗೆ ಒಳಗಾಗುವುದು ಮನೆಯೊಳಗಿನ ದುಡಿಮೆಯನ್ನು ದುಡಿಮೆಯೆಂದು ಪರಿಗಣಿಸದೆ ಇರುವುದು ಮನೆಯಲ್ಲಿಯೂ ಪುರುಷರ ದೌರ್ಜನ್ಯಕ್ಕೆ ಒಳಗಾಗುವುದು ಮೊದಲಾದ ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಎಲ್ಲಾ ಬಗೆಯ ತಾರತಮ್ಯವೂ ಹೋರಾಟ ಯೋಗ್ಯವಾದರೂ ಅದರ ವಿಶೇಷವಾದ ಸ್ವರೂಪದಿಂದ ಸ್ತ್ರೀ ಸಮಸ್ಯೆಗಳಿಗೆ ಇದೂವರೆಗೂ ಸಮರ್ಪಕವಾದ ಪರಿಹಾರಗಳು ದೊರೆತಿಲ್ಲ. ಆದ್ದರಿಂದ ಸ್ತ್ರೀವಾದಿಗಳು ಲಿಂಗಾಧಾರಿತ ತಾರತಮ್ಯದ ವಿರುದ್ಧದ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು.

ಸ್ತ್ರೀವಾದದ ಗುರಿಗಳು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಕಂಡಿವೆ. ಸ್ತ್ರೀವಾದದ ಪ್ರಾರಂಭಿಕ ಹಂತಗಳಲ್ಲಿ ಸ್ತ್ರೀವಾದಿಗಳು ಸ್ತ್ರೀಶೋಷಣೆಯನ್ನು ಕೊನೆಗಾಣಿಸಲು ಕಾನೂನು ರೀತ್ಯಾ ಹಕ್ಕುಗಳನ್ನು ಪಡೆಯುವುದರತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಶಿಕ್ಷಣ, ಉದ್ಯೋಗ, ಆಸ್ತಿಯ ಹಕ್ಕು, ಮತ ಚಲಾವಣೆ, ವಿವಾಹ ವಿಚ್ಛೇದನ, ಸಂತಾನ ನಿಯಂತ್ರಣ ಇವೇ ಮುಂತಾದ ಕ್ಷೇತ್ರಗಳಲ್ಲಿ ಹಕ್ಕುಗಳನ್ನು ಪಡೆಯಲು ಸ್ತ್ರೀವಾದಿಗಳು ಹೋರಾಟವನ್ನು ನಡೆಸಿದ್ದರು. ಇಂದು ಇವುಗಳಲ್ಲಿ ಬಹುತೇಕ ಹಕ್ಕುಗಳು ಸ್ತ್ರೀಯರಿಗೆ ತಾತ್ವಿಕವಾಗಿ ಸಿಕ್ಕಿದ್ದರೂ ಆಚರಣೆಯಲ್ಲಿ ಪೂರ್ಣವಾಗಿ ಸಿಕ್ಕಿಲ್ಲ.

ಸ್ತ್ರೀವಾದದ ಸಮಾನತೆಗಾಗಿ ಸಂಘರ್ಷವನ್ನು ನಡೆಸುವುದರ ಜೊತೆಜೊತೆಗೆ ಸಮಾನತೆ ಹಾಗೂ ನ್ಯಾಯ ಸಮ್ಮತಿಯ ತತ್ವಗಳನ್ನು ಆಧರಿಸಿದ ಬದುಕನ್ನು ನಡೆಸಲು ಸ್ತ್ರೀ ಪುರುಷರಿಬ್ಬರಿಗೂ ಹಕ್ಕುಗಳು ದೊರೆಯಬೇಕೆಂಬ ಆಶಯವನ್ನು ಸ್ತ್ರೀವಾದಿಗಳು ಹೊಂದಿದ್ದಾರೆ. ಸ್ತ್ರೀಯ ಸ್ವಾಭಿಮಾನ ಹಾಗೂ ಸ್ವಾತಂತ್ರ್ಯಕ್ಕೆ ತಾವು ಎಷ್ಟು ಮನ್ನಣೆಯನ್ನು ನೀಡುವರೋ ಅಷ್ಟೇ ಮಹತ್ವವನ್ನು ಸ್ತ್ರೀವಾದಿಗಳು ಪುರುಷರ ಸ್ವಾಭಿಮಾನ ಮತ್ತು ಸ್ವಾತಂತ್ರ್ಯಗಳಿಗೂ ನೀಡಿದ್ದಾರೆ. ಆದುದರಿಂದ ಸ್ತ್ರೀವಾದಿಗಳಿಗೆ ಪುರುಷರಿಗೆ ಸಂಬಂಧಿಸಿದ ವಿಚಾರಗಳಲ್ಲಿ ಕಾಳಜಿ ಇಲ್ಲ ಎಂದು ಅರ್ಥೈಸಬಾರದು.

ಇಂದು ನಮ್ಮ ಸಮಾಜದಲ್ಲಿ ಸ್ತ್ರೀವಾದವನ್ನು ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆ ಎಂದು ಟೀಕಿಸುವವರೂ ಇದ್ದಾರೆ. ಆದರೆ ಸ್ತ್ರೀವಾದವನ್ನು ಯಾವುದೇ ಸಂಸ್ಕೃತಿಯ ಅಂಧಾನುಕರಣೆ ಎಂದು ಪರಿಗಣಿಸುವುದು ತಪ್ಪಾಗುತ್ತದೆ. ಸ್ತ್ರೀ ವಿರೋಧಿ ಮೌಲ್ಯಗಳು ಎಲ್ಲ ಸಂಸ್ಕೃತಿಗಳಲ್ಲೂ ಹಾಸುಹೊಕ್ಕಾಗಿವೆ. ಇದಕ್ಕೆ ಪಾಶ್ಚಿಮಾತ್ಯ ಸಮಾಜವೇನೂ ಹೊರತಾಗಿಲ್ಲ. ಲಿಂಗಾತಾರತಮ್ಯದ ಸ್ವರೂಪ ಬೇರೆ ಬೇರೆ ಸಮಾಜದಲ್ಲಿ ಬೇರೆ ಬೇರೆ ರೂಪಗಳಲ್ಲಿದ್ದು ಅದು ಸಾರ್ವತ್ರಿಕವಾಗಿದೆ.

ಸ್ತ್ರೀ ಪುರುಷ ಸಮಾನತೆಗೆ ಅಡ್ಡಿ ಬಂದಿರುವ ಪ್ರಮುಖ ಕಾರಣ ಆಕೆಯ ದೇಹರಚನೆಯೇ ಆಗಿದೆ ಎಂಬ ವಾದ ಇಂದಿಗೂ ಇದೆ. ಪುರುಷನ ಹಾರ್ಮೋನುಗಳು ಆತನನ್ನು ಒಬ್ಬ ಬಲಿಷ್ಠ ಆಕ್ರಮಣಕಾರಿ ದೃಢಕಾಯದ ವ್ಯಕ್ತಿಯನ್ನಾಗಿ ಮಾಡಿದ್ದರೆ ಸ್ತ್ರೀಯ ಹಾರ್ಮೋನ್‌ಗಳು ಆಕೆಯನ್ನು ಓರ್ವ ಸಾಧು ಸ್ವಭಾವದ ಮಾರ್ಧವತೆಯ ಭಾವನೆಗಳನ್ನು ಹೊಂದಿದ ಬಲಾಢ್ಯಳಲ್ಲದ ವ್ಯಕ್ತಿಯನ್ನಾಗಿ ಮಾಡುತ್ತವೆ ಎಂಬ ಅಭಿಪ್ರಾಯ ಸ್ತ್ರೀವಾದಿ ಹೋರಾಟಕ್ಕೆ ಒಂದು ಪ್ರಮುಖ ಸವಾಲಾಗಿದೆ. ಸ್ತ್ರೀಪುರುಷ ಅಸಮಾನತೆಯ 'ಜೈವಿಕಮೂಲ'ಸಿದ್ಧಾಂತವನ್ನು ಸ್ತ್ರೀವಾದಿಗಳು ತಿರಸ್ಕರಿಸುತ್ತಾರೆ. ಏಕೆಂದರೆ ಪುರುಷತ್ವ ಮತ್ತು 'ಸ್ತ್ರೀತ್ವ' ಎಂಬ ಪರಿಕಲ್ಪನೆಗಳು ಮಾನಸಿಕ ಸ್ಥಿತಿಗಳೇ ಹೊರತು ಸಾರ್ವತ್ರಿಕ ವಾಸ್ತವಗಳಲ್ಲ. ಪುರುಷ ಕೇಂದ್ರಿತ ಸಾಮಾಜಿಕ ಮೌಲ್ಯಗಳು ಅನೇಕ ಸ್ತ್ರೀಯರಲ್ಲಿ ಕೀಳರಿಮೆ, ಪರಾಧೀನತೆಯ ಅಥವಾ ದುರ್ಬಲತೆಯ ಭಾವನೆಗಳನ್ನು ಮೂಡಿಸುತ್ತವೆ. ಸ್ತ್ರೀ ಪುರುಷರ ಮೂಲ ಪ್ರವೃತ್ತಿಗಳು ಎಂದು ಗುರುತಿಸಲ್ಪಟ್ಟಿರುವ ಅನೇಕ ಲಕ್ಷಣಗಳು ನಮ್ಮ ಸಾಂಸ್ಕೃತಿಕ ಮೌಲ್ಯ ವ್ಯವಸ್ಥೆಯಿಂದ ಪ್ರಭಾವಿಸಲ್ಪಟ್ಟಿವೆಯೇ ಹೊರತು ಇವು ಸ್ತ್ರೀಯರಿಗೆ ಸಹಜವಾಗಿ ಬಂದಂಥ ಗುಣಗಳಲ್ಲ.

ಸ್ತ್ರೀಯ ಜೈವಿಕ ದೌರ್ಬಲ್ಯ ಒಂದು ಸಾಂಸ್ಕೃತಿಕ ಪೂರ್ವಾಗ್ರಹ ಪ್ರತೀಕವೇ ಹೊರತು ಅದು ಆಕೆಯ ಜೈವಿಕತೆಗೆ ಸಂಬಂಧಿಸಿದ್ದಲ್ಲ ಎನ್ನುವುದು ಸ್ತ್ರೀವಾದಿಗಳ ಖಂಡಿತವಾದ ನಿಲುವು. ಉತ್ಪಾದನಾ ಕ್ರಿಯೆಯಲ್ಲಿ ಗೋಚರವಾಗುವಂಥ ಜವಾಬ್ದಾರಿಗಳನ್ನು ಪುರುಷರು ನಿರ್ವಹಿಸುತ್ತಾರೆ. ಆದುದರಿಂದಲೇ ಅವರಿಗೆ ಸಮಾಜ ಕಟ್ಟಿರುವ ಮೌಲ್ಯ ಹೆಚ್ಚಿನದಾಗಿದೆ. ಮನೆಯ ಒಳಗೆ ಇರುವ ಸ್ತ್ರೀಯೇ ಆಗಲಿ ದೈಹಿಕ ಶ್ರಮವನ್ನು ಬಳಸಿ ಮನೆಯ ಹೊರಗೆ ದುಡಿಯುತ್ತಿರುವ ಸ್ತ್ರೀಯೇ ಆಗಲಿ ಪುರುಷನಿಗೆ ಸಮಾನಳಲ್ಲ ಎಂಬ ಆಧಾರರಹಿತ ಹಾಗೂ ಅರ್ಥಹೀನವಾದ ವಾದಗಳಿಗೆ ಸ್ತ್ರೀವಾದಿಗಳ ಖಂಡನೆ ಇದೆ.

ಸ್ತ್ರೀವಾದದ ಹೋರಾಟ ಇರುವುದು 'ಪುರುಷ ಪ್ರಧಾನ ವ್ಯವಸ್ಥೆ'ಯ ವಿರುದ್ಧ. ಪುರುಷ ಪ್ರಧಾನ ವ್ಯವಸ್ಥೆ ಎಂದರೆ ಪುರುಷ ಕೇಂದ್ರಿತ ಮೌಲ್ಯಗಳನ್ನು ಎತ್ತಿ ಹಿಡಯುವ ವ್ಯವಸ್ಥೆ ಎಂದರ್ಥವೇ ಹೊರತು ಎಲ್ಲ ಪುರುಷರು ಎಂದಾಗಲೀ ಪುರುಷರು ಮಾತ್ರವೆಂದಾಗಲೀ ಇದರರ್ಥವಲ್ಲ. ಎಷ್ಟೋ ಬಾರಿ ಅನೇಕ ಪುರುಷರು ಸ್ತ್ರೀ ಪರ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಪಾಶ್ಚಾತ್ಯ ದೇಶಗಳಿಂದ ಆಮದಾದುದೆಂದು ನಾವೆಲ್ಲಾ ಭಾವಿಸಿರುವ ಸ್ತ್ರೀವಾದದ ಮೂಲ ಬೇರುಗಳು ನಮ್ಮ ಭಾರತೀಯ ಸಾಹಿತ್ಯದಲ್ಲೇ ಕಾಣಿಸಿಕೊಂಡಿವೆ. ಪ್ರಪಂಚದ ಎಲ್ಲ ಭಾಷೆಗಳ ಮೊಟ್ಟಮೊದಲ ಅಲಿಖಿತ ಸಾಹಿತ್ಯವಾದ ಜಾನಪದದಲ್ಲಿ ಈ ಅಂಶಗಳು ಕಂಡುಬರುತ್ತವೆ. ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಹರಳುಗಟ್ಟಿದ ಸ್ತ್ರೀವಾದವನ್ನು ಕನ್ನಡ ಸಾಹಿತ್ಯದಲ್ಲಿ ಹುಡುಕುವ ಈ ಪ್ರಯತ್ನದ ಮೂಲವನ್ನು 'ಸ್ತ್ರೀ ಸಂವೇದನೆ' ಎಂದು ಕರೆಯಬಹುದು. ಆದರೆ ಸ್ತ್ರೀ ಸಂವೇದನೆಯಿಂದ ಜಾನಪದವನ್ನು ಗ್ರಹಿಸುವ ಬಗೆಗೆ ಪ್ರಾರಂಭದಲ್ಲಿ ಲೇಖಕಿಯರಿಗೇ ಅನುಮಾನಗಳಿದ್ದವು. ಪಾಶ್ಚಾತ್ಯ ಪರಿಕಲ್ಪನೆ-ಗಳಿಂದಲೇ ಸ್ತ್ರೀವಾದವನ್ನು ಗ್ರಹಿಸಲು ಪ್ರಾರಂಭಿಸಿದ ಲೇಖಕಿಯರಿಗೆ ಸಾವಿರಾರು ವರ್ಷಗಳ ಪ್ರಾಚೀನತೆಯುಳ್ಳ ನಮ್ಮ ದೇಶದ ಅಲಿಖಿತ ಸಾಹಿತ್ಯದಲ್ಲಿಯೇ ಅದರ ಮೂಲವಿದೆ ಎಂಬ ಅಂಶವನ್ನು ಪ್ರಾರಂಭದಲ್ಲಿ ಗ್ರಹಿಸಲು ಕಷ್ಟವಾಯಿತು.

"ಲಿಖಿತವನ್ನಷ್ಟೇ ಪ್ರಮಾಣ ಎಂದು ನಂಬುವ ಚಿತ್ತ ಭ್ರಮೆಯಿಂದ ನಾವು ಇಂದಾದರೂ ಬಿಡುಗಡೆ ಪಡೆಯಬೇಕು. ಹೆಣ್ಣಿನ ಅಭಿವ್ಯಕ್ತಿ ನೆಲೆಯಾದ ಮೌಖಿಕ ಜಗತ್ತಿನ ಬಗೆಗೆ ವಿಶೇಷ ಕಾಳಜಿ ಹೊಂದಿರಬೇಕಾದ ನಮ್ಮ ಸ್ತ್ರೀವಾದಿಗಳು ಪಾಶ್ಚಾತ್ಯ ಸ್ತ್ರೀವಾದೀ ಲಯದಲ್ಲೇ ಉಸಿರಾಡುತ್ತಿದ್ದು ಜಾನಪದ ಅಥವಾ ಮೌಖಿಕ ಪರಂಪರೆಯ

ಬಗೆಗೆ ದಿವ್ಯ ನಿರ್ಲಕ್ಷ್ಯ ತೋರುತ್ತಲೇ ಬಂದಿದ್ದಾರೆ" ಎಂದು ಆಪಾದಿಸುತ್ತಾ ಲೇಖಕಿ ಡಾ.ಗಾಯತ್ರಿನಾವಡ ಅವರು "ಪಾಶ್ಚಾತ್ಯ ಸ್ತ್ರೀವಾದವು ಎಲ್ಲಿ ನಿಲುತ್ತದೆಯೋ ಅಲ್ಲಿ ಭಾರತೀಯ ಸ್ತ್ರೀವಾದ ಹುಟ್ಟುತ್ತದೆ" ಎಂದು ತಮ್ಮ ಕೃತಿ ಭಾರತೀಯ ಸ್ತ್ರೀವಾದ ಒಂದು ಸಂಕಥನದಲ್ಲಿ ಹೇಳುತ್ತಾರೆ.

ಒಟ್ಟಾರೆಯಾಗಿ ಸ್ತ್ರೀವಾದವು ಮೂಲಭೂತವಾಗಿ ಸಮಾಜದಲ್ಲಿನ ಸ್ತ್ರೀ ಶೋಷಣೆಯ ಹಾಗೂ ಮಾನವನನ್ನು ಕುರಿತ ಪ್ರಜ್ಞಾಪೂರ್ವಕ ಎಚ್ಚರ. ಕುಟುಂಬ ಮತ್ತು ಕುಟಂಬದಾಚೆಗಿನ ಪರಿಸರದಲ್ಲಿ ನಡೆಯುವ ಸ್ತ್ರೀ ಶೋಷಣೆಯ ಸಿದ್ಧ ಸ್ಥಿತಿಯನ್ನು ಕದಲಿಸುವ ಪ್ರಯತ್ನಗಳಿಗೆ ಚೈತನ್ಯವನ್ನು ಸ್ತ್ರೀವಾದ ನೀಡುತ್ತದೆ. ಸ್ತ್ರೀಯನ್ನು ಕುರಿತ ಗ್ರಹಿಕೆ, ವಿವರಣೆ, ವಿಶ್ಲೇಷಣೆ, ಪುನರ್‌ಮೌಲ್ಯೀಕರಣ ಪ್ರಯತ್ನಕ್ಕೆ ಸೂಕ್ತವಾದ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯೇ ಸ್ತ್ರೀವಾದ. ಈ ನಿಟ್ಟಿನಲ್ಲಿ ಮಹಿಳೆಯ ಬಗೆಗಿನ ಪುರುಷ ನಿರ್ಮಿತ ಸಿದ್ಧ ತಾತ್ವಿಕ ಮಾದರಿಗಳನ್ನು ಎದುರಾಗಿ ಇಟ್ಟುಕೊಂಡೇ ಸ್ತ್ರೀವಾದ ವ್ಯವಹರಿಸುತ್ತದೆ.

ಅಧ್ಯಾಯ – ೩

ಸ್ತ್ರೀ ಸಂವೇದನೆಯ ಅರ್ಥ ಮತ್ತು ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಇಂಗ್ಲಿಷ್‌ನ 'ಸೆನ್ಸಿಬಿಲಿಟಿ' ಎಂಬ ಪದ 'ಸಂವೇದನೆ' ಎಂಬ ರೂಪದಲ್ಲಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹಿಂದಿನಿಂದಲೂ ಬಳಕೆಗೊಂಡು ಬರುತ್ತಿದೆ. "ಯಾವುದೇ ಅನುಭವಕ್ಕೆ ವ್ಯಕ್ತಿಯೊಬ್ಬನ ವಿಶಿಷ್ಟವಾದ ಭಾವನಾತ್ಮಕ ಮತ್ತು ಬೌದ್ಧಿಕ ಪ್ರತಿಕ್ರಿಯೆ ಎಂಬ ಅರ್ಥದಲ್ಲಿ ಅದೊಂದು ತಾತ್ವಿಕ ಪರಿಭಾಷೆಯಾಗಿ ಹೊಸ ಮೈಯನ್ನು ಪಡೆದುಕೊಂಡಿದ್ದು, ಸ್ತ್ರೀ ಸಂವೇದನೆ, ದಲಿತ ಸಂವೇದನೆ, ಮುಸ್ಲಿಂ ಸಂವೇದನೆ ಎನ್ನುವ ಸೈದ್ಧಾಂತಿಕ ನೆಲೆಗಳಲ್ಲಿ ಸಂವೇದನೆಯು ಬಳಕೆಯಲ್ಲಿದೆ."[೧] ಸ್ತ್ರೀ ಸಂವೇದನೆಯ ಮಾತು, ಅದರ ಸ್ವರೂಪ ಕಾಲದಿಂದ ಕಾಲಕ್ಕೆ ಬೇರೆ ಬೇರೆ ರೀತಿಯದಾಗಿದ್ದು, ಬೇರೆ ಬೇರೆ ನೆಲೆಗಳಿಂದ ಪ್ರೇರೇಪಿತವಾಗಿರುವುದನ್ನು ಕಾಣಬಹುದು. ನಮ್ಮ ಸಾಹಿತಿಗಳು ನಾಡು–ನುಡಿ ರಾಷ್ಟ್ರೀಯತೆ, ನಿಸರ್ಗ ಆಧ್ಯಾತ್ಮಗಳ ಕುರಿತು ಸ್ಪಂದಿಸಿದಂತೆ ಸ್ತ್ರೀ ಸಂವೇದನೆಯ ಕುರಿತಾಗಿಯೂ ಅಭಿವ್ಯಕ್ತಿ ನೀಡಿದ್ದಾರೆ.

ಭಾವನೆಗಳು ಮತ್ತು ವಿಚಾರಗಳು ಮನುಷ್ಯನ ಮೂಲಭೂತ ಸಂಗತಿಗಳಲ್ಲಿ ಒಂದಾಗಿ ತೋರುತ್ತವೆ. ಉಳಿದ ಜೀವಿಗಳಿಗಿಂತ ಭಿನ್ನವಾಗಿ ಮನುಷ್ಯರಲ್ಲಿ ತಮ್ಮೊಳಗಿನ ಅನುಭವಜನ್ಯವಾದ ನೋವು–ನಲಿವು, ಇನ್ನಿತರೆ ಅಸಂಖ್ಯ ಭಾವನೆಗಳ ಮಹಾಪೂರ–ವನ್ನು ಭಾಷಾ ಮಾಧ್ಯಮದ ಮೂಲಕ ಅಭಿವ್ಯಕ್ತಪಡಿಸುವ ವಿಶಿಷ್ಟ ಸಾಮರ್ಥ್ಯವಿದೆ.

ವಿಚಾರಶೀಲತೆ ಮತ್ತು ಭಾವನಾತ್ಮಕತೆಗಳು ಮನುಷ್ಯನಿಗೆ ಸ್ವಭಾವಜನ್ಯವಾಗಿ ಅಥವಾ ಪ್ರಕೃತಿಜನ್ಯವಾಗಿ ಬಂದ ಕೊಡುಗೆಯಾಗಿವೆ. ಹೀಗೆ ಮನುಷ್ಯರ ಅಂತರಂಗದಲ್ಲಿ ಅಂತರ್ಗತವಾಗಿ ನೆಲೆಗೊಂಡಿರುವ ಭಾವನೆಗೆ ಹಾಗೂ ವಿಚಾರಗಳ ಸ್ವರೂಪವನ್ನು ನಿಯಂತ್ರಿಸುವ ವಿಷಯದಲ್ಲಿ ನಮಗೆ ದ್ವಂದ್ವತೆ ಕಾಡುತ್ತದೆ. ಮನಃಶಾಸ್ತ್ರೀಯ ಸಿದ್ಧಾಂತದ ನೆಲೆಯಿಂದ ಅದನ್ನು ಶೋಧಿಸಹೊರಟಾಗ ಭಾವನೆ ಹಾಗೂ ಆಲೋಚನೆಗಳನ್ನು ವಿನ್ಯಾಸಗೊಳಿಸುವ ಸಾಮರ್ಥ್ಯವನ್ನು ನಮ್ಮ ಮನಸ್ಸು ಪಡೆದಿದೆ ಎಂಬುದು ಅರಿವಿಗೆ ಬರುತ್ತದೆ. ಪಂಚೇದ್ರಿಯಗಳ ಮುಖೇನ ನಾವುಗಳು

---

೧. ಪ್ರೇಮಾ ಆರ್.ಜಿ.ಅಪಚಂದ, ಲಿಂಗ ವ್ಯವಸ್ಥೆ ಸಂಕಥನ, ಪುಟ. ೫.

ಬಾಹ್ಯ ಜಗತ್ತನ್ನು ಗ್ರಹಿಸುತ್ತೇವೆ. ಈ ಬಾಹ್ಯ ಜಗತ್ತಿನ ಕುರಿತಾದ ಗ್ರಹಣ ಶಕ್ತಿಯನ್ನು 'ಸಂವೇದನೆ' ಎಂಬ ಪರಿಭಾಷೆಯಲ್ಲಿ ಕರೆಯಬಹುದು. ಹೀಗೆ ಇಂದ್ರೀಯ ಗಮ್ಯವಾದ ಅನುಭವಗಳು ಮನಸ್ಸಿನಲ್ಲಿ ಭಾವದ ಅಚ್ಚನ್ನು ಮೂಡಿಸುತ್ತವೆ. ಇಂತಹ ಅಸಂಖ್ಯ ಭಾವಗಳನ್ನು ಸ್ಮರಿಸಿಕೊಳ್ಳುವುದರ ಮೂಲಕ ಸಂವೇದನೆಗಳು ಪುನಃ ಸೃಷ್ಟಿಯಾಗುತ್ತವೆ.

'ಸಂವೇದನೆ' ಎಂಬುದು ಒಂದೊಂದು ಕಾಲದಲ್ಲಿ ಒಂದೊಂದು ಪ್ರಧಾನವಾದ ರೂಪವನ್ನು ಪ್ರಕಟಿಸುವ ಪ್ರಕ್ರಿಯೆ. ಬದಲಾಗುತ್ತಿರುವ ಬದುಕಿಗನುಗುಣವಾಗಿ ಸಂವೇದನೆಯ ಸ್ವರೂಪವೂ ಭಿನ್ನ ಭಿನ್ನವಾಗಿರುತ್ತದೆ. ಅದರ ಛಾಯೆ ಬರಹ ರೂಪದಲ್ಲೂ ವೈವಿಧ್ಯಮಯವಾಗಿ ದಾಖಲಾಗುತ್ತದೆ. ಕಾಲವೈರುಧ್ಯಗಳ ನಡುವೆ ಸಂವೇದನಾಶೀಲ ಮನುಷ್ಯ ಹೊರಗನ್ನೂ ಒಳಗೆ, ಒಳಗನ್ನು ಹೊರಗೆ ತಂದುಕೊಳ್ಳುವ ಮತ್ತು ತಂದುಕೊಡುವ ತೀವ್ರತೆಯಲ್ಲಿ ಅಭಿವ್ಯಕ್ತಿಸುತ್ತಾನೆ. ಆ ಮೂಲಕ ಅದಕ್ಕೊಂದು ಆಕಾರ ಕೊಡುತ್ತಾನೆ. ಈ ಆಕಾರ ಕವಿತೆಯ ರೂಪದಲ್ಲಿರಬಹುದು. ನಾಟಕವೂ ಆಗಬಹುದು; ಇಲ್ಲವೇ ಚಲನಚಿತ್ರೂ ಆಗಬಹುದು. ಈ ಎಲ್ಲಾ ರೂಪಗಳ ಹಿಂದೆ ಕಾಲ ಮತ್ತು ಮನುಷ್ಯನ ಸಂಬಂಧ ಸ್ವಭಾವ ಮತ್ತು ಸೃಷ್ಟಿ ವಿಧಾನಗಳ ಒತ್ತಡವಿರುತ್ತದೆ. ಹೀಗೆ ಸಂವೇದನೆ ಹಲವಾರು ಮುಖಗಳಲ್ಲಿ ವ್ಯಕ್ತಗೊಳ್ಳುತ್ತಲೇ ಇರುತ್ತದೆ.

'ಸಂವೇದನೆ'ಯ ಅರ್ಥವ್ಯಾಪ್ತಿಯೊಳಗೆ 'ಸ್ತ್ರೀ ಸಂವೇದನೆ' ಎಂದರೇನು ಎಂಬುದರ ಕುರಿತು ವಿವೇಚನೆ ನಡೆಸುವ ಅಗತ್ಯ ಇಲ್ಲಿದೆ. ಅದಕ್ಕೆ ಮೊದಲು ಭಾರತೀಯ ಶ್ರೇಣೀಕೃತ ಲಿಂಗಾಧಾರಿತ ಸಮಾಜದಲ್ಲಿ ಹೆಣ್ಣಿಗೆ ನೀಡಿದ್ದ ಸ್ಥಾನಮಾನ ಹಾಗೂ ಭ್ರಮೆಗಳ ವೈಭವೀಕರಣದ ಸಂಕೋಲೆಯ ನಡುವೆ ಸಿಲುಕಿ ನಲುಗಿ ಹೋಗಿದ್ದ ಹೆಣ್ಣಿನ ಸ್ಥಿತಿಗತಿಯ ಕುರಿತು ಶೋಧನಾತ್ಮಕ ಚಿಂತನೆಗಳ ಸಂಕ್ಷಿಪ್ತ ಚಿತ್ರಣವನ್ನು ನೋಡಬೇಕಾಗುತ್ತದೆ.

ಸಂಪ್ರದಾಯಬದ್ಧವಾದ ಸಮಾಜದ ಸಾಮಾಜಿಕ ರಚನೆಯಲ್ಲಿ ಜಾತಿ, ವರ್ಗ, ವರ್ಣಗಳ ಅಸಮಾನತೆಯಂತೆ ಲಿಂಗ ಸಂಬಂಧಿಯಾದ ಅಸಮಾನತೆಯೂ ಇದ್ದು, ಪುರುಷ ಕೇಂದ್ರಿತ ವ್ಯವಸ್ಥೆಯೊಳಗೆ ಹೆಣ್ಣನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಕ್ಷೇತ್ರಗಳಲ್ಲಿ ಕಡೆಗಣಿಸಲಾಗಿತ್ತು. ಸ್ತ್ರೀಯ ಜ್ಞಾನ ಅವಶ್ಯಕತೆಗಳು ನಿರ್ಲಕ್ಷಕ್ಕೆ ಒಳಪಟ್ಟಿದ್ದವು.

"ಹಿಂದೂಧರ್ಮ ಪತ್ನಿಯನ್ನು ಸಹಧರ್ಮಿಣಿ, ಪತಿವ್ರತೆ ಮೊದಲಾದ ಹೆಸರುಗಳಿಂದ ಕರೆದು ಸತಿ ತನ್ನ ಪತಿಯೊಂದಿಗೆ ನಡೆದುಕೊಳ್ಳಬೇಕಾದ ರೀತಿನೀತಿಗಳನ್ನು ಹೇಳುತ್ತದೆ. ಸಹಧರ್ಮಿಣಿ, ಪತವ್ರತೆ ಎಂಬ ಸಂಭೋದನೆಗಳು ಪತ್ನಿಯ ಆದರ್ಶ ನಡತೆಯನ್ನು ಸೂಚಿಸುತ್ತವೆಯೇ ಹೊರತು ಪತಿಯ ಬಗ್ಗೆ ಏನನ್ನು ಹೇಳುವುದಿಲ್ಲ"[೧] ಹೀಗೆಯೇ ನಮ್ಮ ಪ್ರಾಚೀನ ಪುರಾಣ ಕಾವ್ಯಗಳಲ್ಲಿ ಸ್ತ್ರೀ ಪಾತ್ರಗಳನ್ನು ಅದಕ್ಕನುಸಾರವಾಗಿ ಚಿತ್ರಿಸಲಾಗಿದೆ.

ಪ್ರಾಚೀನ ಕಾಲದ ಸ್ತ್ರೀಯರು ಸ್ವಾತಂತ್ರ್ಯವನ್ನು ಅನುಭವಿಸಲು ಸ್ವೇಚ್ಛೆಯಿಲ್ಲದವರು ಕುಡುಕ, ಜೂಜುಗಾರನಂಥ ಗಂಡನಿದ್ದರೂ 'ಪತಿಯೇ ಸರ್ವಸ್ವ' ಪತಿಯೇ ದೇವರೆಂದು ಪೂಜಿಸಬೇಕಿತ್ತು. ಹಾಗೆಯೇ ಬಾಳಬೇಕಿತ್ತು. "ಪಿತಾರಕ್ಷತಿ ಕೌಮಾರೇಭರ್ತಾ ರಕ್ಷತಿ ಯೌವನೆ ರಕ್ಷಂತಿ ಸ್ಥಾವರೆ ಪುತ್ರಾ ನಸ್ತ್ರೀ ಸ್ವಾತಂತ್ರ್ಯ ಮಾರ್ಹತೆ" ಎಂಬ ಶಾಸನ ವಿಧಿಸಿ ಭಾರತೀಯ ನೈಜ ಧರ್ಮಶಾಸ್ತ್ರಕ್ಕೆ ಕಳಂಕವನ್ನು ತಂದು ಸ್ತ್ರೀಯರ ಬಾಯಿಗೆ ಕಡಿವಾಣ ಹಾಕಲಾಯಿತು. ಇದೇ ಮನು 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ' ಅಂದರೆ ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂದು ಹೇಳಿ ಸ್ತ್ರೀಯರನ್ನು ಪೂಜಿಸಬೇಕೆಂದು ಸ್ತ್ರೀ ಪೂಜಿಸಲ್ಪಡುವ ದೇವತೆಯೆಂದು ಫಲಕ ಹಾಕಿ ಇಬ್ಬಂದಿತನವನ್ನು ತೋರಿಸಿ ಸ್ತ್ರೀಕುಲದ ದುರಂತ ಇತಿಹಾಸದ ಮೇಲೆ ಕಪ್ಪುಗೆರೆ ಎಳೆಯಲಾಯಿತು.

ಒಂದು ಸಮಾಜದಲ್ಲಿ ಸ್ತ್ರೀಯರಿಗೆ ನೀಡಲಾಗಿರುವ ಸ್ಥಾನಮಾನಗಳು ಆ ಸಮಾಜದ ಸಂಸ್ಕೃತಿಯ ಹಿರಿಮೆಯನ್ನು ನಾಗರಿಕತೆಯ ಗರಿಮೆಯನ್ನು ಮತ್ತು ಅದರ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಆಧ್ಯಾತ್ಮಿಕ ಮಹಿಮೆಯನ್ನು ಎತ್ತಿತೋರುವ ನಂಬಲರ್ಹವಾದ ಸೂಚನೆಯಾಗಿರುತ್ತವೆ. ಒಂದು ಸಮಾಜದ ಸಂಸ್ಕೃತಿಯ ಸತ್ವ ನಾಗರಿಕತೆಯ ನವಿರು ಮತ್ತು ಅದರ ಪ್ರಜೆಗಳ ಸರ್ವತೋಮುಖ ಪ್ರಗತಿಯು ಆ ನಾಡಿನಲ್ಲಿ ಮಹಿಳೆಯರಿಗೆ ತೋರಿರುವ ಗೌರವವಾದರೆ ಅವರನ್ನು ಪುರುಷರಿಗೆ ಸರಿಸಮಾನವಾಗಿ ಕಂಡುಕೊಟ್ಟಿರುವ ಮರ್ಯಾದೆ ಮತ್ತು ಅವರಿಗೆ ಒದಗಿಸಿಕೊಟ್ಟಿರುವ ಅವರ ಸರ್ವತೋಮುಖ ವಿಕಾಸಕ್ಕೆ ಬೇಕಾದ ಸದಾವಕಾಶಗಳನ್ನು ಅವಲಂಬಿಸಿರುತ್ತದೆ.

---

೧. ಪ್ರೇಮಾ ಆರ್.ಜಿ.ಅಪಚಂದ, ಲಿಂಗ ವ್ಯವಸ್ಥೆ ಸಂಕಥನ, ಪುಟ. ೬.

ಹೆಣ್ಣನ್ನು ಚಂಚಲೆ, ಭೋಗಲೋಲುಪಳು, ಮಾಯಾವಿನಿ ಎಂಬಂತೆ ಅತ್ಯಂತ ನಿಕೃಷ್ಟ ರೀತಿಯಲ್ಲಿ ನಿಸ್ವಾರ್ಥಿ, ಕ್ಷಮಯಾಧರಿತ್ರಿ, ಪತಿವ್ರತೆ, ಸಾಧ್ವಿ, ಶಿರೋಮಣಿ ಎಂಬಂತೆ ಉತ್ಕೃಷ್ಟ ರೀತಿಯಲ್ಲಿ ಒಟ್ಟಾರೆ ಈ ಎರಡೂ ರೀತಿಯ ಅತಿರೇಖಗಳಲ್ಲಿ ಅವಳ ಸ್ವಭಾವವನ್ನು ನಿರ್ವಚನ ಮಾಡಿರುವುದು ಕಂಡುಬರುತ್ತದೆ. ಆದರೆ ಈ ಎರಡೂ ಅತಿರೇಕಗಳಲ್ಲಿ ಸ್ತ್ರೀಯ ನಿಜವಾದ ವ್ಯಕ್ತಿತ್ವ ಅನಾವರಣಗೊಳ್ಳುವುದಿಲ್ಲ ಎಂಬುದು ಸುಡುವಾಸ್ತವದ ಸಂಗತಿಯಾಗಿದೆ. ಈ ಎರಡೂ ರೀತಿಯ ಅತಿರೇಕಗಳನ್ನು ನಾವು ಸಾಂಸ್ಕೃತಿಕ ಸಂದರ್ಭದ ಅಭಿವ್ಯಕ್ತಿಗಳಲ್ಲಿ ಮುಖ್ಯವಾಗಿ ಕಾಣಬಹುದಾಗಿದೆ.

ನಮ್ಮ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆಯ ಬಗೆಗೆ ಮಾದರೀಕೃತ ಲಿಂಗವ್ಯವಸ್ಥೆಯ ಕಲ್ಪನೆಗಳು ಹಾಗೂ ಊಹೆಗಳು ಸೃಷ್ಟಿಯಾಗಿವೆ. ಹೀಗೆ ಗಂಡು ಮತ್ತು ಹೆಣ್ಣು ಎನ್ನುವ ವ್ಯತ್ಯಾಸವನ್ನು ಮಾನವ ಜೀವ ವರ್ಗದಲ್ಲಿ ಗುರುತಿಸುವಾಗ ಮೊದಲಿಗೆ ಹುಟ್ಟಿದ ಸಂದರ್ಭದಲ್ಲೇ ಪ್ರಕಟವಾಗುವ ಜೈವಿಕ ಭಿನ್ನತೆ ಮುಖ್ಯವಾಯಿತು. ಅನಂತರ ಜೈವಿಕ ಅಂಶಗಳು ವ್ಯಕ್ತಿಯ ದೈಹಿಕ ಚಟುವಟಿಕೆಯನ್ನು ನಿಯಂತ್ರಿಸುವ ಸಂಗತಿಯಾಧಾರದ ಮೇಲೆ ಗಂಡುತನ, ಹೆಣ್ಣುತನಗಳನ್ನು ಗುರುತಿಸಲಾಯಿತು. ಜೀವಶಾಸ್ತ್ರೀಯ ನೆಲೆಯ ಈ ಭಿನ್ನತೆಯೇ ಮೂಲವಾಗಿ ಗಂಡು–ಹೆಣ್ಣು ಎಂಬ ಲಿಂಗಭೇದವನ್ನು ಕಲ್ಪಿಸಲಾಯಿತು. ಈ ಲಿಂಗಭೇದ ವೈಶಿಷ್ಟ್ಯವನ್ನು ಪುರುಷ ಪ್ರಧಾನ ಸಾಂಸ್ಕೃತಿಕ ಗ್ರಹಿಕೆಗಳು ಲಿಂಗಭೇದ ವೈಶಿಷ್ಟ್ಯಗಳಾದ ಗಂಡುತನವನ್ನು ಶ್ರೇಷ್ಠವೆಂದೂ ಹೆಣ್ಣುತನವನ್ನು ಕನಿಷ್ಠವೆಂದೂ ನಿರ್ಧರಿಸಿದೆ. ಹೆಣ್ಣನ್ನು ತನ್ನಂತೆಯೇ ಯೋಚನಾ ಸಾಮರ್ಥ್ಯವುಳ್ಳ ಮಾನವ ಜೀವಿಯೆಂದು ಭಾವಿಸುವುದಕ್ಕಿಂತ ಭಿನ್ನವಾಗಿ ಸ್ತ್ರೀಯರ ಇಂಥ ಮಾದರಿಗಳು ರೂಪುಗೊಂಡಿವೆ. ಮಹಿಳೆಯರೆಂದರೆ ಹಾವಭಾವಗಳಲ್ಲಿ ನಯವಂತಿಗೆಯುಳ್ಳ ಮೃದು ಸ್ವಭಾವದ ಜೀವಪೋಷಕ ಅಂತಃಕರಣವುಳ್ಳವಳು ಎಂದು ಆಕೆಯ ಮೂಲ ಪ್ರವೃತ್ತಿಯನ್ನು ವಿವರಿಸಲಾಗಿದೆ. ಮಹಿಳೆಯರನ್ನು ಕುರಿತ ಇಂಥ ಅಪಕಲ್ಪನೆಗಳಿಗೆ ಪೂರಕವಾಗಿ ಪುರುಷರಿಗೆ ಸಂಬಂಧಿಸಿದಂತೆ ಆತ ವೀರ, ಯೋಧ, ಉದಾತ್ತ, ಪರಿಪೂರ್ಣ ಬುದ್ಧಿವಂತ ಎಂಬ ಅತಿರೇಕದ ಪರಿಕಲ್ಪನೆಗಳು ಅಸ್ತಿತ್ವದಲ್ಲಿವೆ. ಹೀಗೆ ಜೈವಿಕ ಲಿಂಗತ್ವದ ಕಲ್ಪನೆ ಮಹಿಳೆ ಪುರುಷರಲ್ಲಿ ದೈಹಿಕ ಭೇದದ ಜೊತೆಗೆ ಮಾನಸಿಕ ಭೇದವನ್ನು ಕಲ್ಪಿಸಿವೆ. ಜೈವಿಕ ಲಿಂಗತ್ವದ ಆಧಾರದ ಮೇಲೆ ಹೀಗೆ ಗಂಡು ಗುಣ, ಹಾಗೂ ಹೆಣ್ಣುಗುಣಗಳನ್ನು ಆರೋಪಿಸುವುದನ್ನು ಸ್ತ್ರೀವಾದಿ ಪರಿಭಾಷೆಯಲ್ಲಿ ಪುರುಷಾತ್ಮಕತೆ ಎಂಬುದಾಗಿ ಕರೆಯಲಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡುಚಿಂತನೆ ತನ್ನನ್ನು ತಾನು ಪರಿಪೂರ್ಣನು ಎಂದು ನಿರ್ವಚಿಸಿಕೊಂಡು ಹೆಣ್ಣನ್ನು ಅನ್ಯಳಾಗಿ ಪರಿಭಾವಿಸಿದೆ. ಹೀಗೆ ಅನ್ಯವು ಅನುಬಂಧವಾಗಿ ಸೇರಲ್ಪಟ್ಟ ಹೆಣ್ಣಿನ ಭಿನ್ನತೆಯನ್ನು ಭೇದವಾಗಿ ಗ್ರಹಿಸಲಾಗಿದೆ. ಗಂಡು ಹೆಣ್ಣಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡರೆ ಜೈವಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳಿಗೆ ಎದುರಾಗುವ ಹೆಣ್ಣಿಗೆ ಅಸ್ತಿತ್ವದ ಹುಡುಕಾಟವೇ ದೊಡ್ಡ ಹೋರಾಟ. ಗಂಡು ಅರ್ಥೈಸಿದ ಹೆಣ್ಣಿನ ವ್ಯಕ್ತಿತ್ವವು ಕುಟುಂಬದ ಜಗನ್ಮಾತೆ, ವೇಶ್ಯೆ ಮಾದರಿಯವು. ಈ ಮಾದರಿಗಳಿಗೆ ಒಗ್ಗುವಂತೆ ಹೆಣ್ಣಿನ ಗುಣ ಸ್ವಭಾವ, ವ್ಯಕ್ತಿತ್ವವನ್ನು ವೈಭವೀಕರಿಸಲಾಗಿದೆ. ಅಲ್ಲದೆ ಪತಿತಗೊಳಿಸಲಾಗಿದೆ. ಅದನ್ನು ಹೆಣ್ಣುತನದ ಸಹಜತೆ ಎಂಬಂತೆ ನಂಬಿಸಲಾಗಿದೆ. ಈ ವೈಭವೀಕರಣವು ಎಷ್ಟರಮಟ್ಟಿಗೆ ನಡೆದಿದೆ ಎಂದರೆ ಹೆತ್ತ ಹೆಣ್ಣನ್ನು ಹೆಣ್ಣಲ್ಲ ಎನ್ನುವಷ್ಟು ಹೆಣ್ಣುತನವನ್ನು ತಾಯ್ತನದೊಂದಿಗೆ ಶೀಲದೊಂದಿಗೆ ಸಮೀಕರಿಸಿ, ಆಕೆಯ ಇಡೀ ವ್ಯಕ್ತಿತ್ವವನ್ನು, ಅನುಭವವನ್ನು ನಿರಾಕರಿಸಲಾಗಿದೆ. ಆದರೆ ತಾಯ್ತನ ಅಥವಾ ಪಾತಿವ್ರತ್ಯಗಳು ತುಡಿತಗಳಾಗಿವೆಯೇ? ಅಥವಾ ಹೆಣ್ಣಿನ ಅಂತರಂಗದ ಅನುಭವ, ನಿರೀಕ್ಷೆ, ಬಹಿರಂಗದ ಸಾಂಸ್ಕೃತಿಕ ಮಾದರಿಗಳ ನಡುವೆ ಬಿರುಕು ಇದೆ. ಅದು ಗಂಡಿನ ಅನುಭವ ಮತ್ತು ಗಂಡು ಹೆಣ್ಣನ್ನು ಗ್ರಹಿಸಿದ ಅನುಭವಕ್ಕಿಂತ ಬೇರೆಯಾದುದು. ಹೀಗೆ ಹೆಣ್ಣೊಬ್ಬಳು ತಾನು ತಾನಾಗಿರದ ಸ್ಥಿತಿಯನ್ನು ಒಪ್ಪಿಕೊಳ್ಳುವಲ್ಲಿ ತನ್ನದಲ್ಲದ ಅನುಭವವನ್ನು ಒಗ್ಗಿಸಿಕೊಳ್ಳುವಲ್ಲಿ ಒತ್ತಡವಿದೆ. ಈ ಬಗೆಯ ಸಾಂಸ್ಕೃತಿಕ ಒತ್ತಡಗಳು ಗಂಡಿಗಿಲ್ಲ.

ಮಹಿಳೆಯ ಬದುಕು ಕಾಲಾಂತರದಲ್ಲಿ ಅನೇಕ ಸಂಕೀರ್ಣ ಸ್ತರಗಳಲ್ಲಿ ವಿಸ್ತರಿಸುತ್ತಾ, ಹೆಣ್ಣಿನ ಬದುಕನ್ನು ದಾರುಣಗೊಳಿಸುತ್ತದೆ. ಇದು ಇತಿಹಾಸ ಹಾಗೂ ವಾಸ್ತವದ ಯಜಮಾನ ಸಂಸ್ಕೃತಿಯ ವಿಕಾಸದಿಂದ ಹಿಂದೆ ಸರಿಯಲ್ಪಟ್ಟ ಮಹಿಳೆ ಸಾಮಾಜಿಕ ಸ್ಥಾನ ಮಾನ ಹಾಗೂ ಶಿಕ್ಷಣ ಎರಡರಿಂದಲೂ ಅವಕಾಶ ವಂಚಿತಳಾದಳು. ಈ ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಹುಟ್ಟಿಕೊಂಡ ಧರ್ಮಶಾಸ್ತ್ರಗಳು ಮಹಿಳೆಯ ಶಕ್ತಿ ಪಾಂಡಿತ್ಯ ವಿಶ್ವಾಸಗಳನ್ನೇ ಕುಗ್ಗಿಸಿದವು.

ಮಹಿಳೆಯ ಅನುಭವಗಳು ಆತ್ಮವಿಸ್ಮೃತಿಯ ಕಾರ್ಗತ್ತಲಲ್ಲಿ ಘೋರ ವೇದನೆಯನ್ನು ಅನುಭವಿಸುತ್ತ ಕಾಲ ಕಳೆಯುತ್ತಿದ್ದ ಸಮಯದಲ್ಲಿ ಇಂಥ ಮಹಿಳಾ ಚೈತನ್ಯಗಳಿಗೆ ಭರವಸೆಯ ಬೆಳಕನ್ನು ನೀಡಿದವರು ಶರಣರು. ಹನ್ನೆರಡನೇ

ಶತಮಾನದಲ್ಲಾದ ಶರಣ ಚಳವಳಿಯು ಕರ್ನಾಟಕದ ಸ್ತ್ರೀ ಸಮುದಾಯಕ್ಕೆ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಿತು. ಇದು ಮಹಿಳೆಗೆ ಸ್ವಾತಂತ್ರ್ಯ, ಸಮನತೆ, ಸ್ವಾವಲಂಬನೆ-ಗಳ ಹೊಸ ಹೆಬ್ಬಾಗಿಲನ್ನೇ ತೆರೆಯಿತು. ಅದರ ಪರಿಣಾಮವಾಗಿ ಅಕ್ಕ ಮಹಾದೇವಿ, ನೀಲಾಂಬಿಕೆ ಮುಂತಾದ ದಿಟ್ಟ ಸಾಧಕಿಯರು ಮೂಡಿಬಂದು ಹೊಸ ತಲ್ಲಣ-ವನ್ನುಂಟುಮಾಡಿದರು.

ವೈಧವ್ಯವೆಂಬುದು ಮಹಿಳೆಯ ಪಾಲಿಗೆ ದೊಡ್ಡ ಶಾಪ. ಅಂತಹ ಜೀವಂತ ನರಕದಲ್ಲಿ ಅವಳು ಬೇಯುವುದನ್ನು ದಾಸ ಸಾಹಿತ್ಯ ಚಿತ್ರಿಸಿದೆ. 'ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ ಹಡೆದವಳ ಕೊರಳ ಕೊಯ್ದ ಚೂರಿ' ಎನ್ನುತ್ತಾರೆ. ಅವಳ ಬುದ್ಧಿ, ಗುಣ, ಸೌಂದರ್ಯ, ಸಂಪತ್ತೆಲ್ಲವೂ ಆಗ ನಗಣ್ಯ ಸಮಾಜದಲ್ಲಿ ಅವಳಿಗೆ ದೊರೆಯುವ ಮರ್ಯಾದೆಯೂ ಇಲ್ಲ. ಹೊರಗೆ ಬರಲಿಕ್ಕೆ ಸಲ್ಲ, ಅತ್ತೆ ತನ್ನಯ ಮಗಂಗೆ ಮೃತ್ಯು ಎನ್ನುವಳು, ಹುಟ್ಟಿದ ಮನೆಯವರು ದೂಷಿಸುವರು, ಅತಿಕ್ರಮಣ-ವೆಂದರೂ ಆದರಿಸರು, ಅತೀ ದೈನ್ಯದಿಂದ ಬಾಯಿ ಬಡಿದರೂ ರಾಶಿ ಅನ್ನವನ್ನುಂಡವಳೆಂದು ದೂರುವರು. ಈ ರೀತಿಯಾಗಿ ಸ್ತ್ರೀ ತನ್ನ ವೈಧವ್ಯದ ಸಂದರ್ಭದಲ್ಲಿ ಅನುಭವಿಸುವ ವೇದನಗೆಗಳು ಹಲವಾರು ರೀತಿಯಾಗಿವೆ ಎಂದು ದಾಸರು ಹೇಳುತ್ತಾರೆ.

ಕತ್ತಲೆಯ ಹಾದಿಯಲ್ಲಿ ನಡೆದು ಪುನಃ ಬೆಳಕಿನತ್ತ ನಡೆಯಬೇಕೆಂಬ ಹಂಬಲದಿಂದ ಅನಾದಿ ಕಾಲದಿಂದಲೂ ಹೆಜ್ಜೆ ಹೆಜ್ಜೆಗೂ ಎದುರಾಗುತ್ತಿರುವ ಸವಾಲುಗಳಿಗೆ ಸೆಡ್ಡು ಹೊಡೆದು ಆತ್ಮವಿಶ್ವಾಸ, ಧೈರ್ಯ ನೈತಿಕ ಬಲಗಳಿಂದ ತನ್ನನ್ನು ತನ್ನತನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುನ್ನಡೆಯುತ್ತಿರುವ ಮಹಿಳಾ ಬದುಕಿಗೆ ಆಕೆಯದೇ ಆದ ಒಂದು ಪ್ರತ್ಯೇಕ ಘೋರ ಅಮಾನುಷ ಕ್ರೂರ ಚರಿತ್ರೆಯಿದೆ. ಆದರೆ ಸ್ತ್ರೀ ಸಂವೇದನಾ ನೀತಿಯಿಂದ ಅವಳನ್ನು ಅವಲೋಕಿಸಿದಾಗ ಒಂದೊಂದು ಅಕ್ಷರಗಳೂ ಪುರುಷರ ಕ್ರೌರ್ಯದ ರಕ್ತದ ಹನಿಗಳಿಂದ ತೊಯ್ದು ತೊಪ್ಪೆಯಾದದ್ದು ಕಾಣುತ್ತದೆ. ಅದು ಅವರೊಂದಿಗೆ ಅಲ್ಲಲ್ಲಿ ಮರುಭೂಮಿಯ ಓಯಾಸಿಸ್‌ನಂತೆ ಎಲ್ಲಿಂದಲೋ ನುಸುಳಿಕೊಂಡು ಬಂದ ಆಶಾಕಿರಣಗಳಾಗಿವೆ. ಅವಳ ನಿರ್ಜೀವತೆಗೆ ಉಸಿರನ್ನು ತುಂಬಿ ಅವಳನ್ನು ಚರಿತ್ರೆಯ ಹಾದಿಯಲ್ಲಿ ಮುನ್ನಡೆಯಲು ಪ್ರೇರೇಪಿಸಿದಷ್ಟು ಸುಳ್ಳೆಂದು ಯಾರು ಹೇಳಿದರೂ ಸ್ಪಷ್ಟ ಸ್ಥಿತಿಗಳಿಗೆ ಸಹಜತೆಯನ್ನು ನೀಡಲು ನಿರಂತರ

ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. ಇದು ಇಂದಿನ ಮಾತಲ್ಲ, ಹಿಂದಿನಿಂದಲೂ ಕಾಲಕಾಲಕ್ಕೆ ಬದಲಾದ ಸಾಮಾಜಿಕ ಮೌಲ್ಯಗಳಿಗೆ ತಲೆಬಾಗಿ ಧರ್ಮಶಾಸ್ತ್ರಜ್ಞರು ಹಾಕಿದ ಕಟ್ಟಳೆಗಳನ್ನು ದಾಟಿದ ಇವಳು ಇದುವರೆಗೆ ಸಾವಿರಾರು ವರ್ಷಗಳಿಂದ ತನ್ನ ಕಣ್ಣೀರಿನ ಹಾದಿಯನ್ನು ಸವೆಸುತ್ತ ಬಂದಿದ್ದಾಳೆ ಎನ್ನುವುದು ಗಮನಾರ್ಹವಾದ ಅಂಶವಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ನೋಡಿದಾಗ ಮಹಿಳೆಯ ಇಂಥ ಸ್ಥಿತಿಗೆ ಪುರುಷ ಪ್ರಧಾನವಾದ ಮತ್ತು ಸಾಂಪ್ರದಾಯಿಕವಾದ ಸಮಾಜವೇ ಮೂಲ ಕಾರಣವೇ ಹೊರತು ಅವಳೇ ಅದಕ್ಕೆ ಹೊಣೆಗಾರಳಲ್ಲ. ಇಂತಹ ಸಂಗತಿಗಳನ್ನು ಗುರುತಿಸಿ ಸ್ತ್ರೀ ಸಂವೇದನೆಯನ್ನು ಕುರಿತು ಸಹಜವಾಗಿ ಎಲ್ಲರೂ ಚಿಂತಿಸಬೇಕಾದ ಅಂಶವಾಗಿದೆ. ಮತ್ತು ಅಗತ್ಯವೂ ಆಗಿದೆ. ಹಾಗೆಯೇ ಇದೇ ಸ್ತ್ರೀ ಸಂವೇದನೆಯ ಮುಖ್ಯ ಆಶಯವೂ ಆಗಿದೆ ಎಂದು ಹೇಳಬಹುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಸಾಹಿತ್ಯವೆನ್ನುವುದು ಜೀವನದ ಅನುಭವಗಳ ಅಭಿವ್ಯಕ್ತಿಕ್ರಮ. ರಂ.ಶ್ರೀ.ಮುಗಳಿ ಅವರು ಹೇಳುವಂತೆ 'ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ' ಈ ಮಾದ್ಯಮದ ಮೂಲಕ ಸಮಾಜದಲ್ಲಿ ಆಗುವ ಅನುಭವಗಳಿಗೆ ಮೂರ್ತ ರೂಪದಲ್ಲಿ ಅಭಿವ್ಯಕ್ತಿ ನೀಡಬಹುದು. ಈ ಅನುಭವಲೋಕವು ನಾನಾ ತೆರನಾಗಿರುತ್ತದೆ. ಅದನ್ನು ಸಾಹಿತಿಯಾದವನು ಸಂವೇದನಾ ಪೂರ್ವಕವಾಗಿ ಅಭಿವ್ಯಕ್ತಪಡಿಸುತ್ತಾನೆ. ಸ್ತ್ರೀ ಸಂವೇದನೆ ಎನ್ನುವ ಪರಿಭಾಷೆ ತೀರಾ ಇತ್ತೀಚಿನದೆನಿಸಿದರೂ ಸಂವೇದನೆ ಬಹಳ ಪ್ರಾಚೀನವಾದುದು. ಅದಕ್ಕೊಂದು ದೀರ್ಘ ಪರಂಪರೆಯೇ ಇದೆ.

ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ ಮತ್ತು ಸ್ತ್ರೀ ಸಂವೇದನಾ ನೆಲೆಗಳನ್ನು ಗುರುತಿಸುವುದು ಇಲ್ಲಿನ ಮುಖ್ಯ ಉದ್ದೇಶ. ಆದರೂ ಅದನ್ನು ಗುರುತಿಸಿ ಚರ್ಚಿಸಬೇಕಾದರೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಹೇಗೆ ಕಾಲದಿಂದ ಕಾಲಕ್ಕೆ ಹೇಗೆ ಬೇರೆ ಬೇರೆ ನೆಲೆಗಳಿಂದ ಪ್ರೇರೇಪಣೆಗೊಂಡು ಕಾಣಿಸಿಕೊಂಡಿದೆ ಎಂಬುದರ ಸಂಕ್ಷಿಪ್ತ ನೋಟವೊಂದನ್ನು ನೀಡುವ ಅಗತ್ಯವಿದೆ ಎನಿಸುತ್ತದೆ. ಹಾಗಾಗಿ ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನಾ ನೆಲೆಗಳನ್ನು ಸಂಕ್ಷಿಪ್ತವಾಗಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

'ಜನಪದ' ಎಂಬುದು ಎಲ್ಲಾ ಸಾಹಿತ್ಯದ ಮೂಲ ಬೇರು. ನಮ್ಮ ಸಂಸ್ಕೃತಿ ಹರಳುಗಟ್ಟಿರುವುದೇ ಜನಪದ ಸಾಹಿತ್ಯದಲ್ಲಿ. ಇದೊಂದು ಸಮಷ್ಠಿ ಸೃಷ್ಟಿ. ಇಲ್ಲಿಯ ಭಾಷೆ ಸರಳ ಹಾಗೂ ಸ್ಪಷ್ಟ. ಜನಪದ ಸಾಹಿತ್ಯವು ಜನಸಾಮಾನ್ಯರ ನೋವು ನಲಿವು, ವಿನೋದ, ವಿಷಾದ, ತುಡಿತ, ಮಿಡಿತ ಮುಂತಾದ ಎಲ್ಲಾ ಸಂವೇದನೆಗಳನ್ನು ಒಳಗೊಂಡ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. ಜನಪದ ಸಾಹಿತ್ಯವು ಪುರುಷರಿಂದ ಅಥವಾ ಮಹಿಳೆಯರಿಂದ ರಚಿತವಾಯಿತೆಂದು ಹೇಳಲಾಗದು. ಇಂಥ ಸಾಹಿತ್ಯವು ಸ್ತ್ರೀ ಸಂವೇದನಾ ಸಂಚಯವೆಂಬ ಮಾತು ಸುಳ್ಳಲ್ಲ.

ನಮ್ಮ ಸಮಾಜದಲ್ಲಿ ಹೆಣ್ಣಿನ ಪಾತ್ರ ಬಹಳ ವಿಶಿಷ್ಟವಾದುದು. ಮಾನವ ಜೀವನದ ಎಲ್ಲಾ ಹಂತಗಳಲ್ಲೂ ತನ್ನ ಜವಾಬ್ದಾರಿಯನ್ನರಿತು ಕರ್ತವ್ಯ ನಿರ್ವಹಿಸುವ ಕುಶಲಮತಿ ಹೆಣ್ಣಾಗಿದ್ದಾಳೆ. ಎಲ್ಲಾ ಸಂಬಂಧಗಳ ಸರಪಳಿಯನ್ನು ಬೆಸೆಯುವ ಬೆಸುಗೆಯೇ ಹೆಣ್ಣು. ಈ ಹೆಣ್ಣು ತಾಯಿ, ಅಕ್ಕ, ತಂಗಿ, ಪತ್ನಿ, ಸೊಸೆ, ಅತ್ತೆ, ಅತ್ತಿಗೆ, ನಾದಿನಿ, ಮುಂತಾದ ಎಲ್ಲಾ ಪಾತ್ರಗಳಲ್ಲಿಯೂ ಅನುಭವಿಸಿದ ಅನುಭವಗಳನ್ನು ಭಟ್ಟಿ ಇಳಿಸಿದ್ದಾಳೆ. ಜಾನಪದ ಮಹಿಳೆಗೆ ತನ್ನ ಸಂಸಾರವೇ ಸರ್ವಸ್ವ, ತನ್ನ ಸಂಸಾರಕ್ಕಾಗಿಯೇ ಅವಳು ದುಡಿಯುತ್ತಾಳೆ. ತನ್ನ ದುಡಿತದ ನಡುವೆಯೇ ಪ್ರೀತಿ, ವಾತ್ಸಲ್ಯ, ಕರುಣೆ, ತೃಪ್ತಿ, ಅತೃಪ್ತಿ, ದ್ವೇಷ, ಮತ್ಸರ, ಸಂತಸ, ಸಂಕಟ, ಭಕ್ತಿಭಾವ, ಯುಕ್ತಿ–ಮುಕ್ತಿ, ತೆಗಳಿಕೆ, ಹೊಗಳಿಕೆ ಲೋಕಾನುಭವ ಅಲೌಕಿಕಾನುಭವ ಮುಂತಾದ ಸಂವೇದನೆಗಳನ್ನು ತನ್ನ ಕಂಠದಿಂದ ಹರಿಯಬಿಟ್ಟಿದ್ದಾಳೆ.

ಪ್ರಕೃತಿಯಲ್ಲಿ ದೇವರನ್ನು ಕಾಣುವ ಜನಪದ ಹೆಣ್ಣಿನ ಭಕ್ತಿ, ದೈವೀ ಶ್ರದ್ಧೆ ಮೆಚ್ಚುವಂತದ್ದು, ತನ್ನ ಮೊದಲ ಭಕ್ತಿಯನ್ನು ಭೂಮಿಗೆ ಸಲ್ಲಿಸುತ್ತಾಳೆ.

> ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ
> ಎಳ್ಳು ಜೀರಿಗೆ ಬೆಳೆಯೋಳಾ ಭೂಮಿತಾಯ
> ಎದ್ದೊಂದು ಗಳಿಗೆ ನೆನೆದೇನಾ

ಆಹಾರೋತ್ಪನ್ನದ ಮೂಲ ಭೂಮಿತಾಯಿ. ಇದೇ ಬಾಳಿನ ಸರ್ವಸ್ವ ಮಕ್ಕಳು ಸವಿಸಕ್ಕರೆಯ ನಿದ್ರೆಯಲ್ಲಿರುವಾಗ ಭೂಮಿಗೆ ನಮಿಸಿ ತನ್ನ ಕಾಯಕ

ಆರಂಭಿಸುವ ಇವಳ ಧಾರ್ಮಿಕ ಚಿಂತನೆ ಅಮೂಲ್ಯವಾದುದು. ಎಳ್ಳು ಜೀರಿಗೆ ಸುಖಸಮೃದ್ಧಿಯ ಸಂಕೇತ ಕೂಡ.

ಜಾನಪದ ಹೆಣ್ಣು ಸಹಕಾರ ತತ್ವದವಳು. ಒಬ್ಬರಿಗಿಂತ ಒಬ್ಬರು ಲೇಸೆಂಬುದೇ ಇವಳ ನಂಬಿಕೆ. ಇವರದು ಅವಿಭಕ್ತ ಕುಟುಂಬ. ಬೇರೊಂದು ಮನೆಯಿಂದ ಬಂದ ಹೆಣ್ಣು ಗಂಡನ ಮನೆಯವರೊಂದಿಗೆ ಹೊಂದಿಕೊಳ್ಳಬೇಕಾದುದು ಅವಳಿಗೆ ಅನಿವಾರ್ಯವಾಗಿತ್ತು. ಅದರಲ್ಲೇ ಅವಳಿಗೆ ನೆಮ್ಮದಿಯಿತ್ತು. ಸುಖಿ ಕುಟುಂಬದಿಂದ ಸುಖಿ ಸಮಾಜವೆಂಬ ಸಾಮಾಜಿಕ ತಜ್ಞಳು ಇವಳು. ಕೇವಲ ವಿಭಕ್ತ ಕುಟುಂಬಕ್ಕೆ ಜೋತು ಬಿದ್ದಿರುವ ಈ ದಿನಗಳಲ್ಲಿ ಅವರ ಮಾತುಗಳು ನಮ್ಮನ್ನು ಚಿಂತನೆಗೆ ಹಚ್ಚುತ್ತವೆ.

ಹೆಣ್ಣು ಉಭಯ ಕುಲದೀಪಕಳು ಎರಡು ಕುಟುಂಬಗಳ ಸಂಬಂಧ ಸೇತು. ತೌರು ಮತ್ತು ಗಂಡನ ಮನೆ ಅವಳ ಎರಡು ಕಣ್ಣುಗಳು ಇದ್ದ ಹಾಗೆ. ತಾಯಿ, ತಂದೆ, ಅಣ್ಣ, ತಮ್ಮ, ಅತ್ತೆ, ಮಾವ, ಗಂಡ, ಭಾವ, ಮೈದುನ, ನಾದಿನಿ ಮೊದಲಾದವ ರೊಂದಿಗಿನ ಅವಳ ಸಂಬಂಧ ಅಮೂಲ್ಯವಾದುದು.

ಅತ್ತೆ ಹತ್ತಿ ಹಣ್ಣು, ಮಾವ ಮಲ್ಲಿಗೆ ಹೂವು
ಬಂಗಾರಗೋಲ ನನ್ನ ಬಾವ, ಈ ಮನೆಯ
ಹರಿಶಿನ ಕೊನೆಯು ನನ್ನವರು

ಮಾವಯ್ಯ ಬೈದಾರೆ ಬಲಗಾಲ ಹಿಡಿದೇನು
ಬಾವಯ್ಯನ ಮಡದಿ ನೆಗಣ್ಣಿ ಬೈದಾರೆ
ವಾರಕ್ಕೆ ಎಂದು ಕರೆದೇನು

ಇಂತಹ ತ್ರಿಪದಿಗಳಲ್ಲಿ ಅವಳು ಕೊಡುವ ರೂಪಕಗಳು ಅತಿ ಮಧುರವಾದವು. ಆರಂಭದಿಂದಲೂ ಸ್ತ್ರೀ ಪುರುಷನಿಗೆ ಸಮವಾಗಿ ಒಳಹೊರಗೆ ದುಡಿಯುತ್ತಲೇ ತನ್ನ ಕುಟುಂಬವನ್ನು ಕಾಪಾಡಿಕೊಂಡು ಬಂದವಳಿಗೆ ಈ ರೀತಿ ಹೊಂದಿಬಾಳುವಲ್ಲಿ ಸುಖ ಕಾಣುವ ಸಂತೃಪ್ತಿ ಇದೆ.

ಜನಪದ ಸಾಹಿತ್ಯದಲ್ಲಿ ಕುಟುಂಬಕ್ಕೆಂತೋ ಅಂತೆಯೇ ತಾಯಿಗೂ ವಿಶಿಷ್ಟ ಸ್ಥಾನವಿದೆ. ಮಾತೃದೇವೋಭವ ಎನ್ನುತ್ತದೆ ನಮ್ಮ ಜಾನಪದ ಸಂಸ್ಕೃತಿ. ಸಾವಿರ ಸೌದೆ ಉರಿದರೂ ಒಲೆಯೊಳಗೆ ದೀವಿಗೆಯಂತೆ ಬೆಳಕುಂಟೆ' ಎಂದು ತನ್ನ ತಾಯಿಯನ್ನು ದೀವಿಗೆಗೆ ಹೋಲಿಸುವ ಇವಳ ಭಾವನೆ ಇಷ್ಟವಾಗುತ್ತದೆ. ಇಲ್ಲಿ ಸೌದೆ ಬೆಂಕಿಯ

ಸಂಕೇತ. ಅದೇ ಜ್ಯೋತಿ ಎಲ್ಲರಿಗೂ ಬೆಳಕು ನೀಡುವ ದಿವ್ಯ ಪ್ರಭೆ. ಮನೆಯಲ್ಲಿ ಯಾರೇ ಇದ್ದರೂ ತಾಯಿ ಇದ್ದಂತಾಗುವುದಿಲ್ಲ.

ತಾಯವ್ವನ ಬೈಬಾಡ ತಿಳಿಗೇಡಿ ನನತಮ್ಮ
ಭಾಳದಿನದಾಕಿ ಹಡೆದವ್ವನ। ಬೈದಾರೆ
ಭಾಳ ಮರುಗ್ಯಾಳ ಮನದಾಗ

ತಾನಿಲ್ಲದ ತೌರಲ್ಲಿ ತಾಯಿಗೆ ಕಷ್ಟ ಬಂದೀತೆಂಬ ಭಯ ಅವಳನ್ನು ಕಾಡುತ್ತದೆ.

ಜನಪದರಲ್ಲಿ ಮುತ್ತೈದೆಯ ಕುರುಹುಗಳೆಂದು ನಂಬಲಾಗುವ ಕಡಗ ಕಾಲುಂಗುರಗಳು ವಿವಾಹ ಬಂಧನದ ಸಂಕೇತಗಳಾಗಿವೆ.

ಕಡಗ ಕಾಲುಂಗರ ನಮಗಿಡುವಂಗಾಯ್ತು
ಹಡೆದಮ್ಮನ ಬಿಟ್ಟು ಬರುವಾಗ ನಮ್ಮ ಕಣ್ಣೀರು
ತಡದ ಮಳೆಯಾಗಿ ಸುರಿಯಿತು

ಕಡಗ ಕಾಲುಂಗುರುಗಳನ್ನು ಧರಿಸಿ ವಿವಾಹ ಬಂಧನಕ್ಕೊಳಗಾಗುವುದಕ್ಕಾಗಿ ಸ್ತ್ರೀ ತೆರುವ ಬೆಲೆ ಅಪಾರ. ಹಡೆದ ತಾಯಿಯನ್ನೇ ಬಿಟ್ಟು ಹೊರಡಬೇಕಾದ ಅಸಹ್ಯ ತ್ಯಾಗದ ಯಾತನೆಯನ್ನು ಅವಳು ಅನುಭವಿಸಬೇಕು. ವ್ಯವಸ್ಥೆಯ ಈ ಪದ್ಧತಿಯನ್ನು ಒಪ್ಪದ ತಾಯಿ ಮಗಳು ಇಬ್ಬರೂ ಕಣ್ಣೀರಿನ ಮೂಲಕ ಪ್ರತಿಭಟಿಸಿದ್ದಾರೆ.

'ಕೆರೆಗೆ ಹಾರ'ದಲ್ಲಿ ಕೌಟುಂಬಿಕ ಮೌಲ್ಯಗಳನ್ನು ನಡೆಸಿಕೊಂಡು ಬಂದ ಸೊಸೆ ಭಾಗೀರಥಿಯ ಬಲಿದಾನದ ವಸ್ತುವಿದೆ. ಜೀವವಿರೋಧಿಯಾದ ಆಚರಣೆಗಳನ್ನು ಭಾಗೀರಥಿ ಆಂತರಿಕವಾಗಿ ಒಪ್ಪಿದ್ದಳೆಂಬುದಕ್ಕೆ ಈ ಕವನದಲ್ಲಿ ನಿದರ್ಶನವಿಲ್ಲ. ಆಕೆ ಒಳಗೊಳಗೆ ರೋಧಿಸುವುದು, ಕಣ್ಣೀರು ಬಿಡುವುದು ಅವಳ ಶಬ್ದರಹಿತ ಅಸ್ವೀಕಾರಾತ್ಮಕ ಸಂವೇದನೆಗೆ ನಿದರ್ಶನವಾಗಿದೆ. ತನ್ನ ನೋವಿನ ಈ ಪ್ರಕಾರವಾದ ವ್ಯಕ್ತ ರೂಪವನ್ನು ಕೂಡ ಮರೆಯಾಡುವುದಕ್ಕಾಗಿ ಅವಳು 'ಕಣ್ಣಿನಲ್ಲಿ ಹರಳುಬಿತ್ತು' ಎಂದು ಸುಳ್ಳು ಹೇಳುತ್ತಾಳೆ.

ಹೀಗೆ ಜನಪದ ಸಾಹಿತ್ಯವು ಸಂವೇದನೆಗಳ ಮಡುವಾಗಿದ್ದು, ಅದರಲ್ಲಿ ಸ್ತ್ರೀ ಸಂವೇದನೆಯ ಸ್ವರೂಪವನ್ನು ಗುರುತಿಸಿಕೊಳ್ಳಲು ಅಡ್ಡಿಮಾಡುವ ಅಂಶ ಎಂದರೆ ಈ ಸಾಹಿತ್ಯ ಕರ್ತೃತ್ವದ ಬಗ್ಗೆ ಇರುವ ಅಖಚಿತತೆ. ಆದರೂ ಸ್ತ್ರೀಯರು ಹೆಚ್ಚು ಬಳಸುವ

ಜನಪದ ಸಾಹಿತ್ಯವನ್ನು ಗಮನದಲ್ಲಿಟ್ಟುಕೊಂಡು ಅದರಲ್ಲಿ ವ್ಯಕ್ತವಾದ ಸ್ತ್ರೀ ಸಂವೇದನೆಯ ಸ್ವರೂಪವನ್ನು ಗಮನಿಸಬಹುದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಭಾರತೀಯ ಸಂಸ್ಕೃತಿಯಲ್ಲಿ ಮೂಲಭೂತವಾಗಿ ಹೆಣ್ಣು ಮನುವಿನ ಮನೋಧರ್ಮಕ್ಕೆ ಅನುಗುಣವಾಗಿ ಇದ್ದುದರಿಂದ ಆಕೆಯ ಬೌದ್ಧಿಕ ವ್ಯಕ್ತಿತ್ವ ಅರಳಲೇ ಇಲ್ಲ. ಸ್ತ್ರೀ ಪೂಜೆಗೊಳ್ಳುವಲ್ಲಿ ದೇವತೆಗಳು ನೆಲೆಸುತ್ತಾರೆ ಎಂದು ಹೇಳಿದ ಮನುವೇ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅನರ್ಹರು ಎಂದು ಹೇಳಿರುವನು. ಪ್ರಾಚೀನ ಕಾಲದಿಂದಲೂ ಹೆಣ್ಣನ್ನ ಭೋಗದ ವಸ್ತುವಾಗಿ ಕಂಡರೇ ಹೊರತು ಸೃಷ್ಟಿಯಲ್ಲಿರುವ ಸಮಾನತೆಯನ್ನು ನಿರ್ದಯವಾಗಿ ತಳ್ಳಿ ಹಾಕಿದರು.

ಬಹುಪಾಲು ಕವಿಗಳು ಹೆಣ್ಣಿನ ಸೌಂದರ್ಯವನ್ನು ಸಮಯ ಸಿಕ್ಕಾಗಲೆಲ್ಲಾ ಬಣ್ಣಿಸಿ ವರ್ಣಿಸಿದ್ದಾರೆ. ಕೆಲವೊಮ್ಮೆ ಪ್ರಕೃತಿಯ ಪ್ರತೀಕವೆಂದು ಕರೆದು ಆಕೆಯನ್ನು ಆರಾಧಿಸಿಯೂ ಇದ್ದಾರೆ. ಒಟ್ಟಾರೆ ಅವಳ ಬೌದ್ಧಿಕ ಹಾಗೂ ಮಾನಸಿಕ ಸ್ವರೂಪ ಚಿತ್ರಣವನ್ನು ಕೊಡುವಲ್ಲಿ ಸೋಲುತ್ತಾರೆ.

ಕನ್ನಡದ ಆದಿಕವಿ ಪಂಪನಲ್ಲು ಸ್ತ್ರೀ ಸಂವೇದನೆ ಬರುತ್ತದೆಯಾದರೂ ಒಂದು ತಾತ್ವಿಕ ಹಿನ್ನಲೆಯಾಗಿ ಬರುವುದಿಲ್ಲ.

ಕರ್ನಾಟಕ ಕಾದಂಬರಿಯ ಪ್ರಕಾರ "ಆಶ್ರಮ ಧರ್ಮವನ್ನು ಮೀರಿ ನಡೆದುಕೊಂಡ ಪುಂಡರೀಕ, ಮಹಾಶ್ವೇತೆಯರು ಶಿಕ್ಷಾರ್ಹರು ಎಂಬ ವಿಧಿ ಇದೆ. ಜನ್ಮಾಂತರಗಳಲ್ಲಿ ತನ್ನ ಪ್ರಿಯಕರ ಹುಟ್ಟಿ ಬರುವವರೆಗೆ ಆಕೆ ತಪಸ್ಸನ್ನು ಆಚರಿಸಬೇಕಾಗಿದೆ. ಇದರಿಂದ ತಿಳಿಯುವ ಒಂದು ವಾಸ್ತವ ಸಂಗತಿ ಎಂದರೆ ಹೆಣ್ಣಿನ ವಿವಾಹಪೂರ್ವ ಪ್ರಣಯ ಪ್ರಸಂಗದ ಪರಿಣಾಮ ಗಂಡಿಗಿಂತ ಹೆಣ್ಣಿಗೆ ಹೆಚ್ಚು ಪ್ರತಿಕೂಲವಾಗುತ್ತದೆ ಎಂಬುದು"[೧]

ಜನ್ನನ 'ಯಶೋಧರ ಚರಿತೆ'ಯಲ್ಲಿ ಅಮೃತಮತಿ ಮತ್ತು ಅಷ್ಟಾವಂಕ ಇವರ ಪ್ರಣಯ ಪ್ರಸಂಗವು ವಿವಾಹೋತ್ತರ ಲೈಂಗಿಕ ಸಂಬಂಧವುಳ್ಳ ಒಂದು ಸಂಕೀರ್ಣ

೧. ಬರಗೂರು ರಾಮಚಂದ್ರಪ್ಪ (ಸಂ), ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪುಟ. ೫೩.

ಸನ್ನಿವೇಶವಾಗಿದೆ. ಇಲ್ಲಿಯ ಅಮೃತಮತಿಯ ಪಾತ್ರ ಸ್ತ್ರೀ ಸಂವೇದನೆ ದೃಷ್ಟಿಯಲ್ಲಿ ಬಹಳ ಮಹತ್ವದ್ದಾಗಿದೆ. ಅನೇಕ ಜನ ವಿದ್ವಾಂಸರಿಗೆ ಸವಾಲು ಹಾಕುವಂಥ ಪ್ರಸಂಗ ಇದೆ.

"ನಲ್ಲನೆ ತಡವಾದುದುಂಟು ಬಡಿ, ಮುಳಿಯದಿರು, ಅರಸನೆಂಬ ಪಾತಕ ನೆನೆದನಂ ತೊಡೆಯೇರುಸಿ ಕೇಳಿಕೆಯಾದೊಡೆ ನೋಡುತಿರ್ದನಂತೆ ನೀನುಳಿದೊಡೆ ಸಾವವಳೆನಗೆ ಮಿಕ್ಕ ಗಂಡರ್ ಸಮಸೋದರರರಂದು"

ಈ ಸಾಲುಗಳು ಆಕೆಯ ಸೂಕ್ಷ್ಮ ಸಂವೇದನೆಗೆ ಹಿಡಿದ ಕನ್ನಡಿಯಂತಿವೆ. ಅನೇಕ ವಿಮರ್ಶಕರು ಆಕೆಯದು ಅನೈತಿಕ ರತಿ ಎಂಬ ಒಮ್ಮತದ ನಿರ್ಣಯಕ್ಕೆ ಬಂದಿದ್ದಾರೆ. ಅಮೃತಮತಿಯ ನಿಲುವುಗಳನ್ನು ಕವಿ ಅನುಮೋದಿಸುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಕನ್ನಡದ ಪ್ರಾಚೀನ ಕವಿಗಳು ವಿವಾಹೇತರ ಲೈಂಗಿಕ ಸಂಬಂಧಗಳಿಗೆ ಸಮ್ಮತಿ ಸೂಚಿಸುವವರಲ್ಲ. ಸ್ತ್ರೀ ಸಂವೇದನೆಯನ್ನು ಮುಖ್ಯ ನಿಲುವಾಗಿಸಿಕೊಂಡ ಕೃತಿಗಳಲ್ಲೂ ಅದು ಅನೈತಿಕವೆಂದೇ ಪರಿಗಣಿಸಲ್ಪಟ್ಟಿದೆ.

ಮದ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಮದ್ಯಕಾಲೀನ ಕನ್ನಡ ಸಾಹಿತ್ಯವು ಸ್ತ್ರೀ ಸಂವೇದನಾ ದೃಷ್ಟಿಯಿಂದ ಮಹತ್ತರ ವಾದುದಾಗಿದೆ. ಅಂದಿನ ಕಾಲದಲ್ಲಿ ಸ್ತ್ರೀಯರಿಗೆ ದೊರೆತಿದ್ದ ಸ್ಥಾನಮಾನಗಳು ಅವರ ಸಂವೇದನಾ ಸ್ವರೂಪವನ್ನು ನಿರ್ಧರಿಸುತ್ತವೆ. ಮಧ್ಯಕಾಲದಲ್ಲಿ ಭಕ್ತಿಪಂಥದ ಚಳವಳಿಯಿಂದಾಗಿ ಸ್ತ್ರೀಗೆ ವಿದ್ಯೆಯ ಅವಕಾಶ ದೊರೆಯಿತು. ಇದರ ಪರಿಣಾಮವಾಗಿ ಮದ್ಯಕಾಲೀನ ಸಾಹಿತ್ಯದಲ್ಲಿ ಸ್ತ್ರೀಯರ ಸ್ಥಾನಮಾನಗಳು ಸ್ವಲ್ಪಮಟ್ಟಿಗೆ ಉತ್ತಮಗೊಂಡು ಸ್ತ್ರೀಸಂವೇದನೆಯ ಸ್ವರೂಪದಲ್ಲಿಯೂ ಬದಲಾವಣೆ ಕಂಡುಬಂದಿತು.

ಭಾರತದಲ್ಲಿ ಮದ್ಯಕಾಲದಲ್ಲಿ ಸಂಭವಿಸಿದ ಭಕ್ತಿ ಚಳುವಳಿಯು ಸ್ತ್ರೀ ಪುರುಷರಿಬ್ಬರಿಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನ ಅವಕಾಶಗಳನ್ನು ನೀಡಿತು. ಈ ಸಮಯದಲ್ಲಿ ರಾಜ ಮನೆತನಗಳು ಸ್ತ್ರೀಯರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿದ್ದರಲ್ಲದೆ ತಮ್ಮ ಭಾವನೆಗಳನ್ನು ಸಾಹಿತ್ಯಕವಾಗಿ ಅಭಿವ್ಯಕ್ತಿಸುವುದಕ್ಕೂ ಅವಕಾಶ ಕೊಟ್ಟರು. ಇದರಿಂದಾಗಿ ಕೆಲವು ಸ್ತ್ರೀಯರು ಸಾಹಿತ್ಯ ಕೃತಿ ರಚಿಸುವುದರಲ್ಲಿ ಸ್ವಾತಂತ್ರ್ಯ ಪಡೆದುಕೊಂಡರು. ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳನ್ನು ಗುರುತಿಸಬಹುದಾಗಿದೆ.

ಹನ್ನೆರಡನೆಯ ಶತಮಾನವು ಕನ್ನಡ ಸಾಹಿತ್ಯ ರಚನೆಯಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಅಂದಿನ ಶರಣ ಚಳವಳಿಯಿಂದಾಗಿ ಸೃಷ್ಟಿಯಾದ ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಕಾಣಿಸಿಕೊಂಡು ಎಲ್ಲಾ ವರ್ಗದ ಸ್ತ್ರೀಯರೂ ತಾರತಮ್ಯವಿಲ್ಲದೆ ಸಂವೇದನೆಯಲ್ಲಿ ತೊಡಗಿಕೊಂಡಿದ್ದು ಮಹತ್ತರವಾದ ಘಟನೆ. ಸ್ತ್ರೀಯರಿಗೆ ಆತ್ಮ ವಿಶ್ವಾಸವನ್ನು ತುಂಬಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒದಗಿಸಿದ್ದು ಜೇಡರದಾಸಿಮಯ್ಯನ ದೊಡ್ಡ ಸಾಮಾಜಿಕ ಬದಲಾವಣೆ.

ಮೊಲೆಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ
ಕಾಣಾ ರಾಮನಾಥಾ

ಎಂದು ಹೆಣ್ಣು ಗುಂಪಿನ ಬಗೆಗೆ ಇರುವ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. ಈ ಸಮಯದಲ್ಲಿ ಗಂಡಿನ ಜೊತೆಗೆ ಸರ್ವ ಸ್ವಾತಂತ್ರ್ಯವನ್ನು ಪಡೆದ ಶರಣೆಯರು ತಮ್ಮ ಸಂವೇದನೆಯನ್ನು ಅಭಿವ್ಯಕ್ತಪಡಿಸಿದರು.

ಅಕ್ಕಮಹಾದೇವಿ, ಮುಕ್ತಾಯಕ್ಕ, ಗಂಗಾಂಬಿಕೆ, ಅಕ್ಕನಾಗಮ್ಮ ಮುಂತಾದವರಲ್ಲದೆ ತೀರ ಕೆಳವರ್ಗದಿಂದ ಬಂದ ಕದಿರೆ ಕಾಳವ್ವೆ, ಸಂಕವ್ವೆ, ಗುಡ್ಡಮ್ಮೆ, ರೇಕಮ್ಮ, ಮಸಣಮ್ಮ ಮುಂತಾದ ವಚನಕಾರ್ತಿಯರು ಸಾಹಿತ್ಯದಲ್ಲಿ ತಮ್ಮ ಸಂವೇದನೆಯನ್ನು ತಂದಿದ್ದಾರೆ. ಇವರ ಸಂವೇದನೆಯ ನೆಲೆಗಳಲ್ಲಿ ಭಿನ್ನ ಭಿನ್ನ ಸ್ವರೂಪವನ್ನು ನಾವು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ಕೆಳವರ್ಗದ ವಚನಕಾರರು ಪುರುಷರನ್ನು ಪುರುಷ ಸಮಾಜವನ್ನು ಕಾಣುವ ಈ ಸಮಾಜಕ್ಕೆ ಸ್ಪಂದಿಸುವ ಪ್ರಕ್ರಿಯೆಗೆ ವ್ಯಕ್ತಪಡಿಸುವ ಸ್ವರೂಪದ ನೆಲೆಗಳಿಗೂ ಅಕ್ಕ ಮಹಾದೇವಿಯ ಸಂವೇದನೆಯ ನೆಲೆಗಳಿಗೂ ತುಂಬಾ ಅಂತರವಿದೆ." ಅಕ್ಕಮಹಾದೇವಿ ಸಂಸಾರ ಗಂಡ, ಆ ಮೂಲಕ ಕುಟುಂಬ ಕುಟುಂಬದ ಸ್ವರೂಪ, ಅದರ ಅಂಗರಚನೆಯ ಬಗ್ಗೆ ವಿಭಿನ್ನ ಸ್ವರೂಪದ ನೆಲೆಗಳಲ್ಲಿ ಮಾತನಾಡುತ್ತಾಳೆ. ಆದರೆ ಕೆಳವರ್ಗದ ಜಾತಿಯ ವಚನಕಾರ್ತಿಯರು ಕೌಟುಂಬಿಕ ವ್ಯವಸ್ಥೆಯಲ್ಲಿದ್ದುಕೊಂಡೆ ಸಮಾನತೆಯನ್ನು ಸಾಧಿಸುವ, ಆ ಮೂಲಕ ನವ ಸಮಾಜದ ನಿರ್ಮಾಣಕ್ಕಾಗಿ ತುಡಿಯುತ್ತಾರೆ. ಗಂಡಿನ ದ್ವೇಷಕ್ಕೆ ಅವರ ಸಂವೇದನೆಯ ನೆಲೆಗಳು ವಿಭಿನ್ನವಾಗಲು ಕಾರಣ ಆಕೆಯು ಬದುಕುತ್ತಿದ್ದ ಪರಿಸರ ಆಕೆಯನ್ನು ಬಂಧನದಲ್ಲಿ

ಇಟ್ಟಿತ್ತು. ಇದರಿಂದಾಗಿ ಆಕೆಯು ಕೌಟುಂಬಿಕ ಮತ್ತು ಸಂಸಾರದ ವಿರುದ್ಧ ಬಂಡೆದ್ದು ಸ್ವಾತಂತ್ರ್ಯ ಸಮಾನತೆಯನ್ನು ಬಯಸುವ ಹಂತವನ್ನು ತಲುಪಿದಳು.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳನ್ನು ಕುರಿತು ಚರ್ಚಿಸುವಾಗ ನಮಗೆ ಹರಿಹರ, ರಾಘವಾಂಕ, ಕುಮಾರವ್ಯಾಸ ಮುಂತಾದವರು ಚಿತ್ರಿಸಿರುವ ಸ್ತ್ರೀಯರ ಸಂವೇದನಾ ಸ್ವರೂಪವನ್ನು ಚರ್ಚಿಸುವುದು ಅಗತ್ಯ.

ಹರಿಹರನ ರಗಳೆಗಳಲ್ಲಿ ಮತ್ತು ಗಿರಿಜಾ ಕಲ್ಯಾಣದಲ್ಲಿ ಬರುವ ಸ್ತ್ರೀ ಪಾತ್ರಗಳು ಸಂವೇದನೆಗಳು ಭಾರತೀಯರ ಮನಸ್ಸಿನಲ್ಲಿರುವ ಆದರ್ಶ ಸ್ತ್ರೀಯ ಸಂವೇದನೆಗಳೇ ಆಗಿವೆ. ಈ ಪಾತ್ರಗಳು ಯಥಾಪ್ರಕಾರ ಪುರುಷರನ್ನು ಹಿಂಬಾಲಿಸುವ ಮೂಲಕ "ಸತಿಪತಿಯೊಳೊಂದಾದ ಭಕ್ತಿ ಹಿತವಪ್ಪುದು ಶಿವನಿಗೆ" ಎಂಬ ಮನೋಭಾವನೆಯಿಂದ ಸಂವೇದಿಸುವ ಪಾತ್ರಗಳಾಗಿವೆ. ಮುಂದೆ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಪಾತ್ರವೂ ಇದೇ ಬಗೆಯದು.

ಲಕ್ಷ್ಮೀಶನಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲಿ ಪ್ರಮೀಳೆಯರ ರಾಜ್ಯದ ಸ್ತ್ರೀಯರು ಸ್ವಲ್ಪಮಟ್ಟಿಗೆ ಭಿನ್ನವಾದರೂ ಕೊನೆಗೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯು ಅವರ ಸಂವೇದನೆಗಳಿಗೆ ಅಡ್ಡಲಾಗುತ್ತದೆ. ಸೀತೆಯ ಪಾತ್ರವು ಕೂಡ ಇಲ್ಲಿ ಭಾರತೀಯ ಆದರ್ಶ ನಾರಿಯಾಗಿಯೇ ಚಿತ್ರಿತವಾಗಿದೆ.

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡು ಪಾಪಂಗೈದು ಪೆಣ್ಣಾಗಿ ಸಂಭವಿಸಿ
ವೊಡಲಂ ಪೊರೆವುದೆನ್ನೊಳಪರಾಧವುಂಟು'

ಎಂದು ತನ್ನ ಹೆಣ್ತನವನ್ನೇ ದೂಷಿಸಿಕೊಳ್ಳುತ್ತಾಳೆ. ಇದಕ್ಕೆ ವಿರುದ್ಧವಾದ ಪಾತ್ರವನ್ನು ಕುಮಾರವ್ಯಾಸನ ಭಾರತದ ದ್ರೌಪದಿ ಪಾತ್ರ ಬಿಂಬಿಸುತ್ತದೆ. ತುಂಬಿದ ಸಭೆಯಲ್ಲಿ ತನಗಾದ ಅವಮಾನವನ್ನು ಪ್ರತಿಭಟಿಸಿ ತನ್ನೈವರು ಗಂಡಂದಿರನ್ನು ಕುರಿತು

ಗಂಡರೈವರು ಮೂರುಲೋಕದ ಗಂಡರು ಒಬ್ಬಳನಾಳಲಾರಿರಿ
ಗಂಡರೋ ನೀವ್ ಭಂಡರೋ

ಎಂದು ಜರಿಯುತ್ತಾಳೆ. ದ್ರೌಪದಿಯ ಪಾತ್ರದ ಮೂಲಕ ಸ್ತ್ರೀಯು ಪುರುಷ ವರ್ತನೆಗಳನ್ನು, ಸ್ವಭಾವಗಳನ್ನು ಪುರುಷ ಸಂಸ್ಕೃತಿಯ ಸ್ವರೂಪವನ್ನು ಪ್ರಶ್ನಿಸುವ ಮಟ್ಟಕ್ಕೆ

ಹೋಗಿರುವುದನ್ನು ಕಾಣಬಹುದು. ದ್ರೌಪದಿಯ ಪಾತ್ರದಲ್ಲಿ ಸ್ತ್ರೀ ಸಂವೇದನೆ ದಟ್ಟವಾಗಿದೆ.

ಹದಿನೆಂಟನೇ ಶತಮಾನದ ಸಂಚಿಯ ಹೊನ್ನಮ್ಮಳ 'ಹದಿಬದೆಯ ಧರ್ಮ' ಸ್ತ್ರೀ ಸಂವೇದನೆಯ ಮತ್ತೊಂದು ಬಹುಮುಖ್ಯ ಕಾವ್ಯ.

'ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಎಂಬ ಮಾತಿನಲ್ಲಿ ಪರಂಪರಾಗತವಾಗಿ ಹೆಣ್ಣಿನ ಬಗೆಗಿದ್ದ ಒಂದು ಬಗೆಯಂ ಕೀಳು ಭಾವನೆಯನ್ನು ಬೆಳೆಸಿದ ಮನೋಧರ್ಮವನ್ನು ಹೊನ್ನಮ್ಮ ಖಂಡಿಸುತ್ತಾಳೆ.

ಹೀಗೆ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನಾ ನೆಲೆಗಳು ವಿಭಿನ್ನ ಸ್ವರೂಪದಿಂದ ಕೂಡಿರುವುದನ್ನು ನಾವುಗಳು ಗಮನಿಸಬಹುದಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಈ ಮೊದಲೇ ಹೇಳಿದ ಹಾಗೆ ಸಂವೇದನೆ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಕಾಣುತ್ತಾ ಸಾಗುತ್ತದೆ. ಹಾಗಾಗಿ ಪ್ರಾಚೀನ ಸಾಹಿತ್ಯದ ಸ್ತ್ರೀ ಸಂವೇದನಾ ಅಭಿವ್ಯಕ್ತಿಗೂ ಆಧುನಿಕ ಅಭಿವ್ಯಕ್ತಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಬ್ರಿಟೀಷ್ ಆಡಳಿತದ ಪ್ರಭಾವದಿಂದ ಎಲ್ಲಾ ರಂಗದಲ್ಲೂ ಬದಲಾವಣೆಗಳಾದವು. ಸಾಹಿತ್ಯಕವಾಗಿ ಅನೇಕ ಹಳೆಯ ಮೌಲ್ಯಗಳನ್ನು ಪ್ರಗತಿ ವಿರೋಧವಾದುದನ್ನು ಪ್ರಶ್ನಿಸಲು ಆರಂಭಿಸಿದರು. ಮಹಿಳೆಯರೂ ಶಿಕ್ಷಣ ಪಡೆಯಲು ಮುಂದಾದರು. ವಸಾಹತು-ಶಾಹಿಯ ಪ್ರಭಾವದಿಂದ ನಮ್ಮ ನಂಬಿಕೆ, ಆಚಾರ-ವಿಚಾರಗಳಲ್ಲಿ ಶಿಥಿಲತೆ ಉಂಟಾಗಿ ಸಾಕಷ್ಟು ಬದಲಾವಣೆಗಳಾದವು. ಇದೇ ಪ್ರಭಾವ ಸಾಹಿತ್ಯದ ಮೇಲೂ ಆಗಿದೆ. ಕಾದಂಬರಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ನಾಟಕ ಮುಂತಾದವುಗಳಲ್ಲಿ ಸುಧಾರಣಾ ಗಾಳಿ ಬೀಸಲಾರಂಭಿಸಿತು. ಮಹಿಳೆಗೆ ಸಂಬಂಧಿಸಿದ ಹಲವು ಅನಿಷ್ಟ ಆಚರಣೆಗಳು ಸಡಿಲಗೊಂಡವು.

ಕನ್ನಡದ ಆರಂಭದ ಕಾದಂಬರಿಗಳು ಲೇಖಕರಿಂದಲೇ ರಚಿತವಾಗಿದ್ದರೂ ಆ ಕಾದಂಬರಿಗಳ ಕೇಂದ್ರ ಪಾತ್ರಗಳು ಸ್ತ್ರೀಯರೇ ಆಗಿರುವುದು ಗಮನಾರ್ಹ ಅಂಶವಾಗಿವೆ.

"ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ 'ಇಂದಿರಾ ಬಾಯಿ' (೧೮೯೯)ಯ ಕರ್ತೃ, ಗುಲ್ವಾಡಿ ವೆಂಕಟರಾವ್ ಮತ್ತು 'ವಾಗ್ದೇವಿ' (೧೯೦೫)ಯ ಲೇಖಕ ಬೋಳಾರ ಬಾಬುರಾವ್ ವಿಡಂಬನೆಗಳ ಮೂಲಕ ಮಾಠಾಧಿಪತಿಗಳನ್ನು ಕೆಣಕಿದ ಸಾರಸ್ವತರು. ಕರ್ನಾಟಕದಲ್ಲಿ ಮೊದಲು ಸುಶಿಕ್ಷಿತರಾದ ಸಾರಸ್ವತರು ಬ್ರಹ್ಮ ಸಮಾಜದ ಪ್ರಭಾವಕ್ಕೆ ಒಳಗಾಗಿ ಸ್ತ್ರೀ ಶಿಕ್ಷಣ, ಬಾಲ್ಯವಿವಾಹ, ವಿಧವಾ ವಿವಾಹ, ಕೇಶಮುಂಡನ, ಬಹುಪತ್ನಿತ್ವ ಅಸ್ಪೃಶ್ಯತೆ ಇತ್ಯಾದಿ ವಿಷಯಗಳಲ್ಲಿ ಪ್ರಗತಿಶೀಲ ಧೋರಣೆ ತಾಳಿ ಮಠಗಳಲ್ಲಿ ನಡೆಯುತ್ತಿದ್ದ ಡಂಭಾಚಾರಗಳನ್ನು ತೀಕ್ಷ್ಣವಾಗಿ ಟೀಕಿಸಿದರು."[೧]

೧೯೧೫ರಲ್ಲಿ ಪ್ರಕಟವಾದ ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯು ಸಾಂಪ್ರದಾಯಿಕ ಧೋರಣೆಯಿಂದ ಕೂಡಿದ್ದು ಅಲ್ಲಿನ ಮುಖ್ಯ ಸ್ತ್ರೀ ಪಾತ್ರವಾದ ಸೀತಮ್ಮ ಹಳೆಯ ಸ್ತ್ರೀ ಮೌಲ್ಯಗಳಾದ ಪಾತಿವ್ರತ್ಯ ವಿಧೇಯತೆ, ತ್ಯಾಗ, ಸಹನೆ ಹಾಗೂ ಸೇವಾ ಮನೋಧರ್ಮಗಳ ಪ್ರತಿಮೂರ್ತಿಯಾಗಿ ಚಿತ್ರಿತವಾಗಿದ್ದಾಳೆ.

ಕನ್ನಡ ಕಾದಂಬರಿ ಪರಂಪರೆಯ ಮೊದಲಿಗರಲ್ಲೊಬ್ಬರಾದ ಶಿವರಾಮ ಕಾರಂತರು ತಮ್ಮ ಆಳವಾದ ವೈಚಾರಿಕ ನೆಲೆಯಿಂದ ಹೆಣ್ಣುಗಂಡಿನ ಸಂಬಂಧವನ್ನು ತಮ್ಮ ಕಾದಂಬರಿಗಳಲ್ಲಿ ವಿಶ್ಲೇಷಿಸಿದರು. ಗ್ರಾಮೀಣ ಮಹಿಳೆಯರ ಸಂವೇದನೆಗಳನ್ನು ಅವರು ಚಿತ್ರಿಸಿದ್ದಾರೆ.

ನವೋದಯದ ಮೇರು ಕೃತಿಗಳನ್ನು ಕೊಟ್ಟ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಕೃತಿಗಳಲ್ಲಿ ಸ್ತ್ರೀ ಸಂವೇದನೆಯು ದಟ್ಟವಾಗಿ ಕಂಡುಬರುತ್ತದೆ. ಕುಟುಂಬದೊಳಗೆ ಮತ್ತು ಹೊರಗಿನ ಆಕೆಯ ಸಂಕೀರ್ಣ ಬದುಕನ್ನು ಅನಾವರಣ ಮಾಡಿದ್ದಾರೆ.

ನವೋದಯದ ಪ್ರಮುಖರಾದ ಬಿ.ಎಂ.ಶ್ರೀ, ಬೇಂದ್ರೆ, ಗೋವಿಂದ ಪೈ, ಪಂಜೆ, ಅಡಿಗ, ಕೆ.ಎಸ್.ನ., ಜಿಎಸ್ಸೆಸ್ ಇವರುಗಳಲ್ಲದೆ ಇನ್ನು ಮುಂತಾದ ಲೇಖಕರ ಕೃತಿಗಳಲ್ಲಿ ಸ್ತ್ರೀ ಸಂವೇದನೆಯು ಹೇರಳವಾಗಿ ಕಂಡುಬರುತ್ತದೆ. ಅಲ್ಲದೆ ನವೋದಯ ಕಾಲದ ಪ್ರಮುಖ ಲೇಖಕಿಯರಾದ ನಂಜನಗೂಡಿನ ತಿರುಮಲಾಂಬ, ಆರ್.ಕಲ್ಯಾಣಮ್ಮ,

---

೧. ಬರಗೂರು ರಾಮಚಂದ್ರಪ್ಪ (ಸಂ), ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪುಟ. ೭೮.

ಕೊಡಗಿನಗೌರಮ್ಮ, ಬೆಳಕೆರೆ ಜಾನಕಮ್ಮ, ಗಿರಿಬಾಲೆ ಮುಂತಾದವರ ಸಾಹಿತ್ಯ ಕೃತಿಗಳಲ್ಲಿ ಸ್ತ್ರೀ ಪರ ಚಿಂತನೆಯನ್ನು ಮಾಡಿದ್ದು ಅವರ ಬರಹಗಳನ್ನು ವಿಶ್ಲೇಷಿಸುವುದರಿಂದ ಸ್ತ್ರೀ ಸಂಸ್ಕೃತಿಯ ವಿವಿಧ ಮಗ್ಗಲುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ನವೋದಯವನ್ನು ದಾಟಿ ಬಂದು ನೋಡಿದಾಗ ನವ್ಯರಲ್ಲಿ ಹೆಣ್ಣಿನ ಬಗೆಗೆ ಇನ್ನು ಬದಲಾದ ಧೋರಣೆಯನ್ನು ಕಾಣಬೇಕಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ನಡೆದದ್ದು ವಿಸ್ಮಯಕರ ಇಲ್ಲಿ ಕಾಲಗತಿ ಮತ್ತೆ ಹಿಂದಕ್ಕೆ ಸರಿದಂತೆ ಭಾಸವಾಗುವುದು. ನವ್ಯರು ಲೈಂಗಿಕ ಪರಿಕಲ್ಪನೆಗೆ ಹೆಚ್ಚು ಒತ್ತುಕೊಟ್ಟದ್ದರಿಂದ ಅಲ್ಲಿ ಹೆಣ್ಣು ಮತ್ತೆ ಹಿಂದಿನ ಯುಗಕ್ಕೆ ಸರಿದಳು ಇದಕ್ಕೆ ಸಂಬಂಧಿಸಿದಂತೆ ಆಲನಹಳ್ಳಿಯವರ ಒಂದು ಕವಿತೆ ಕೆಳಕಂಡಂತಿದೆ.

ನೀನು ಹೆಣ್ಣು ಸೈತಾನನ ಮಾಯೆ
ಪ್ರಲೋಭನನು ಬೀಸುವ ಕಲ್ಲಿಗೆ
ಮೊದಲ ತೊಟ್ಟು ಕಳಚುರುಳಿದ ಕಸುಗಸಯಿ
ಬೆಳಕಿನಲ್ಲೂ ತನ್ನ ಬೆತ್ತಲೆ ತನಗರಿಯದ ಗಂಡಸಿನಲ್ಲಿ
ಸಾಚಾ ಮನಕ್ಕೆ ಬಣ್ಣದ ಮುಖವಾಡ ತೊಡಿಸಿ
ಕತ್ತಲೊಳಗೆ ಬದುಕ ಮುಚ್ಚಿಟ್ಟುಕೊಂಡಳು

ಇದು ಸ್ತ್ರೀಯರ ಬಗ್ಗೆ ನವ್ಯರು ತಳೆದ ಧೋರಣೆಯಾಗಿದೆ. ಆದರೆ ಇದೇ ಕಾಲದಲ್ಲಿ ಕಾವ್ಯ ರಚಿಸಿದ ಮಹಿಳಾ ಲೇಖಕಿಯರು ತಮ್ಮ ನಿಲುವನ್ನು ಬದಲಸಿಕೊಂಡು ಸಾಹಿತ್ಯ ರಚಿಸಿದರು.

ಈ ಸಂದರ್ಭದಲ್ಲಿ ಬಂದ ವೀಣಾಶಾಂತೇಶ್ವರ, ತ್ರಿವೇಣಿ, ಅನುಪಮಾ ನಿರಂಜನ, ಆರ್ಯಾಂಭ ಪಟ್ಟಾಭಿ, ಎಂ.ಕೆ.ಇಂದಿರಾ ಮುಂತಾದವರು ಹೆಣ್ಣಿನ ಅಂತರಾಳವನ್ನು ಹೆಕ್ಕಿ ನೋಡುವ ಪ್ರಯತ್ನ ಮಾಡಿದರು.

ನವ್ಯ ಕಥೆ ಕಾದಂಬರಿಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಗಂಡು ಹೆಣ್ಣಿನ ನಡುವೆ ಸಂಘರ್ಷ ಏರ್ಪಡುವುದು ಶಾಂತಿನಾಥದೇಸಾಯಿಯವರಲ್ಲಿ ಮಾತ್ರ. ಇಲ್ಲಿನ ಸ್ತ್ರೀ ಪಾತ್ರಗಳು ಈ ಮಣ್ಣಿನ ನೆಲದಿಂದ ಒಡಮೂಡುವಂತೆ ಕಾಣದಿದ್ದರೂ ಇಲ್ಲೂ ಲೈಂಗಿಕತೆ ಎಂಬ ಮಾಪನದಿಂದ ಗಂಡು ಹೆಣ್ಣಿನ ಸಂಬಂಧದ ತೀವ್ರತೆಯನ್ನು ಅಳೆಯುವ ಯತ್ನ ನಡೆದರೂ ದೇಸಾಯಿಯವರು ಸೃಷ್ಟಿಸುವ ಮುಖಾಮುಖಿ ಕುತೂಹಲ ಹುಟ್ಟಿಸುತ್ತದೆ.

ವೀಣಾ ಶಾಂತೇಶ್ವರ ಅವರು ಗಂಡು ಹೆಣ್ಣಿನ ನಡುವೆ ನಡೆಯುವ ಸಂಘರ್ಷವನ್ನು ತಮ್ಮ ಕಾದಂಬರಿಗಳಲ್ಲಿ ವಿಶಿಷ್ಟವಾಗಿ ನಿರ್ವಹಿಸಿದ್ದಾರೆ. ಅದು ನವ್ಯ ಲೇಖಕರಿಗಿಂತ ಭಿನ್ನ ಎನಿಸುತ್ತದೆ. ಎಸ್.ರಾಜಲಕ್ಷ್ಮಿಯವರ ಕತೆಗಳಲ್ಲಿ ವಿಶಿಷ್ಟ ವ್ಯಕ್ತಿತ್ವದ ಸ್ತ್ರೀ ಪಾತ್ರಗಳನ್ನು ಕಾಣಬಹುದು. ವಸ್ತುವಿನ ನಿರ್ವಹಣೆಯಲ್ಲಿ ಇವರು ಹೊಂದಿರುವ ದೃಷ್ಟಿಕೋನ ನವ್ಯ ಲೇಖಕರಿಗಿಂತ ಭಿನ್ನವಾದುದು. ಇವರು ಸೃಷ್ಟಿಸಿರುವ ಸ್ತ್ರೀ ಪಾತ್ರಗಳು ನವೋದಯ ಸಾಹಿತ್ಯದಲ್ಲಿ ಬಂದ ಸ್ತ್ರೀ ಪಾತ್ರಗಳ ಅರ್ಥಪೂರ್ಣ ವಿಸ್ತರಣೆಯಂತೆ ಕಂಡುಬರುತ್ತವೆ.

ಹಲವಾರು ಪ್ರಮುಖ ನವ್ಯ ಲೇಖಕಿಯರು ನವ್ಯ ಸಾಹಿತ್ಯದಿಂದ ಜುಗುಪ್ಸೆ ಹೊಂದಿ ತಮ್ಮ ಸಾಹಿತ್ಯದ ಜೀವಂತಿಕೆಯನ್ನು ಉಳಿಸಿಕೊಳ್ಳಲು ನವ್ಯವನ್ನು ಮೀರಿ ಬರೆಯಲು ಆರಂಭಿಸಿದರು. ತೇಜಸ್ವಿ, ಲಂಕೇಶ್, ಯಶವಂತ ಚಿತ್ತಾಲರಂಥ ಪ್ರಮುಖ ನವ್ಯ ಲೇಖಕರು ವಾಸ್ತವ ನೆಲೆಗಟ್ಟಿನಲ್ಲಿ ಬರೆದರು ಇವರೆಲ್ಲರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ವಿಶಿಷ್ಟ ರೀತಿಯ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯನ್ನು ಕುರಿತ ಹಾಗೆ ವಿವಿಧ ಕಾಲಘಟ್ಟಗಳಲ್ಲಿ ಆದ ಅಭಿವ್ಯಕ್ತಿಯನ್ನು ಗಮನಿಸಿದ ಮೇಲೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯು ಹೇರಳವಾಗಿ ಕಂಡುಬರುತ್ತದೆ. ಆದರೆ ಅವರ ತಾತ್ವಿಕ ಚರ್ಚೆ ನಡೆಯುವುದು ಆಧುನಿಕ ಸಾಹಿತ್ಯದಲ್ಲಿ ಮಾತ್ರ. ಈ ನಿಟ್ಟಿನಲ್ಲಿ ನೋಡಿದಾಗ ತೇಜಸ್ವಿ ಅವರ ಕತೆ, ಕಾದಂಬರಿ ಮತ್ತು ಇತರೆ ಸಾಹಿತ್ಯ ಪ್ರಕಾರಗಳನ್ನು ಕುರಿತ ಹಾಗೆ ವಿವಿಧ ಮಗ್ಗುಲಿನ ಅಧ್ಯಯನಗಳು ನಡೆದಿರುತ್ತವೆ. ಅವರ ಕತೆಗಳಲ್ಲಿನ ಸ್ತ್ರೀ ಸಂವೇದನಾ ನೆಲೆಗಳು ವಿಶಿಷ್ಟವಾದವುಗಳಾಗಿದ್ದು ಅಲ್ಲಿ ಕಂಡುಬರುವ ಸ್ತ್ರೀ ಸಂವೇದನೆಯನ್ನು ಗುರುತಿಸುವ ಪ್ರಯತ್ನ ವಿಶಿಷ್ಟವಾಗಿರುತ್ತದೆ.

ಅಧ್ಯಾಯ ೪
ತೇಜಸ್ವಿ ಕಥೆಗಳ ಸ್ತ್ರೀ ಸಂವೇದನಾ ನೆಲೆಗಳು

ಯಾವುದೇ ಒಂದು ಕಾಲದ ಸಾಹಿತ್ಯದಲ್ಲಿ ಅಥವಾ ಒಬ್ಬ ಲೇಖಕನ ಸಾಹಿತ್ಯದಲ್ಲಿ ಹಲವು ಸಂವೇದನೆಗಳು ನೆಲೆಗೊಂಡಿರುತ್ತವೆ. ಅಂತಹ ಸಂವೇದನೆ ನೆಲೆಗಳನ್ನು, ಅವುಗಳ ಸ್ವರೂಪವನ್ನು ಗುರುತಿಸಬೇಕಾದರೆ ಅಂದಿನ ಸಮಕಾಲೀನ ಸಮಾಜದ ಸ್ಥಿತಿಗಳ ಅರಿವು ಅಗತ್ಯವಾಗಿ ಬೇಕೆನಿಸುತ್ತದೆ. ಅಂಥ ಸ್ಥಿತಿಗಳು ಆ ಸಾಹಿತ್ಯದ ಸಂವೇದನಾ ಸ್ವರೂಪವನ್ನು ನಿರ್ಧರಿಸುತ್ತವೆ. ತೇಜಸ್ವಿಯವರ ಸ್ತ್ರೀಸಂವೇದನಾ ನೆಲೆಗಳನ್ನು ಗುರುತಿಸುವ ಸಂದರ್ಭದಲ್ಲಿ ಈ ಮಾತು ಮುಖ್ಯವಾಗುತ್ತದೆ. ಅಂದರೆ ತೇಜಸ್ವಿ ಕಥೆಗಳಲ್ಲಿನ ಸ್ತ್ರೀ ಸಂವೇದನಾ ನೆಲೆಗಳನ್ನು ಗುರುತಿಸುವಾಗ ಅವರ ಸಮಕಾಲೀನ ಸಮಾಜದ ಅರಿವು ಅಗತ್ಯ.

ಅರವತ್ತರ ದಶಕದಲ್ಲಿ ಬರೆಯಲಾರಂಭಿಸಿದ ಪೂರ್ಣಚಂದ್ರ ತೇಜಸ್ವಿಯವರು ಮೂರು ಕಥಾಸಂಕಲನಗಳಿಂದ ಒಟ್ಟು ಹದಿನೇಳು ಕಥೆಗಳನ್ನು ರಚಿಸಿದ್ದಾರೆ. 'ಹುಲಿಯೂರಿನ ಸರಹದ್ದು' ಕಥಾಸಂಕಲನ ನವ್ಯದ ಸಂದರ್ಭದಲ್ಲಿ ರಚಿಸಿದ್ದು, ಇನ್ನು 'ಅಬಚೂರಿನ ಪೋಸ್ಟಾಫೀಸು' ಮತ್ತು 'ಕಿರಗೂರಿನ ಗಯ್ಯಾಳಿಗಳು' ನವ್ಯವನ್ನು ಬಿಡಿಸಿಕೊಂಡು ಬರೆದವುಗಳಾಗಿವೆ. ತೇಜಸ್ವಿಯವರ ಬರವಣಿಗೆಯ ಮುಖ್ಯ ಧಾರೆ ಇರುವುದೇ ಗ್ರಾಮ ಜೀವನದಲ್ಲಿ. ಗ್ರಾಮಜೀವನದ ಅಪಾರ ಅಕ್ಕರೆಯನ್ನು, ಆಧುನಿಕ ನಾಗರಿಕತೆಯ ಪರಿಣಾಮವಾಗಿ ಗ್ರಾಮಗಳಲ್ಲಿ ತಲೆದೋರುವ ಅವಾಂತರಗಳನ್ನು ಅತ್ಯಂತ ಸೂಕ್ಷ್ಮ ಸಂವೇದನಾಶೀಲತೆಯಿಂದ ಗ್ರಹಿಸಿದ್ದಾರೆ. ಅದಕ್ಕೆ ಅವರು ಕಥಾಸಂಕಲನಗಳಿಗೆ ನೀಡಿರುವ ಹೆಸರುಗಳೇ ಸಾಕ್ಷಿಯಾಗುತ್ತವೆ. ತೇಜಸ್ವಿಯವರ ಆಯಾಕಾಲದ ಧೋರಣೆಗಳನ್ನು ಈ ಮೂರು ಕಥಾಸಂಕಲನಗಳು ವ್ಯಕ್ತಪಡಿಸುವ ರಚನೆಗಳಾಗಿವೆ.

ಸ್ತ್ರೀ ಸಂವೇದನೆಯ ದೃಷ್ಟಿಯಿಂದ ತೇಜಸ್ವಿ ಅವರ ಕಥೆಗಳು ಬಹಳ ಪ್ರಮುಖವಾದವುಗಳಾಗಿವೆ. ಭಾರತೀಯ ಸಂದರ್ಭದಲ್ಲಿ ಸ್ತ್ರೀಯನ್ನು ವಿವಿಧ ನೆಲೆಗಳಲ್ಲಿ ನೋಡಿರುವುದು ಕಂಡುಬರುತ್ತದೆ. ಅದನ್ನು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ತೇಜಸ್ವಿ ಅವರು ವಾಸ್ತವ ನೆಲೆಗಟ್ಟಿನಲ್ಲಿ ಸ್ತ್ರೀಯನ್ನು ಕಾಣುತ್ತಾರೆ. ಆಧುನಿಕ ಕನ್ನಡ

ಸಾಹಿತ್ಯದ ಸಂದರ್ಭದಲ್ಲಿ ಸ್ತ್ರೀಸಂವೇದನೆಯನ್ನು ಕೇವಲ ಲೇಖಕಿಯರಲ್ಲದೆ ಹಲವು ಲೇಖಕರು ಸಹ ತಂದಿದ್ದಾರೆ. ಅವರ ಸಂವೇದನಾನೆಲೆಗಳು ದಶಕದಿಂದ ದಶಕಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಕಂಡುಬಂದಿವೆ. ತೇಜಸ್ವಿ ಅವರು ಸ್ತ್ರೀ ಬಗೆಗೆ ತಳೆದಿರುವ ನಿಲುವು ಬಹಳ ವಿಶಿಷ್ಟವಾದುದಾಗಿದೆ.

ತೇಜಸ್ವಿಯವರು ಗ್ರಾಮೀಣ ಸಂಸ್ಕೃತಿಯ ಪರವಾಗಿರುವುದರಿಂದ ಗ್ರಾಮೀಣ ಮಹಿಳೆಯರ ಬದುಕು ಬವಣೆಗಳನ್ನು ಚಿತ್ರಿಸುತ್ತಾರೆ. ಇವರ ಕಥೆಗಳಲ್ಲಿ ಬರುವ ಎಲ್ಲಾ ಸ್ತ್ರೀ ಪಾತ್ರಗಳೂ ಗ್ರಾಮೀಣ ಪರಿಸರದ ಮಹಿಳೆಯರೆ ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ಶಕ್ತ ಸ್ತ್ರೀಪಾತ್ರಗಳನ್ನು ಸೃಷ್ಟಿಸಿದ ಕೀರ್ತಿ ತೇಜಸ್ವಿ ಅವರಿಗೆ ಸಲ್ಲುತ್ತದೆ. ತೇಜಸ್ವಿ ಅವರ ಕಿರಗೂರಿನ ಗಯ್ಯಾಳಿಗಳಂಥ ಇತರೆ ಕಥೆಗಳ ಸ್ತ್ರೀಪಾತ್ರಗಳಲ್ಲಿ ದುಡಿಮೆ ಒಂದು ಮೌಲ್ಯವಾಗಿ ಕಂಡುಬರುತ್ತದೆ. ಗಂಡಂದಿರು ಸೋಮಾರಿಗಳಾದ ಸನ್ನಿವೇಶದಲ್ಲಿ ಬೇಜವಾಬ್ದಾರಿತನದಿಂದ ವರ್ತಿಸುವಲ್ಲಿ ಇಡೀ ಕುಟುಂಬದ ಹೊಣೆಯನ್ನು ಹೊರುವ ಕಷ್ಟಸಹಿಷ್ಣುಗಳು ಸಮರ್ಥರೂ ಆದ ಸ್ತ್ರೀಪಾತ್ರಗಳು ಇವರ ಕೆಲವು ಕಥೆಗಳಲ್ಲಿ ವಿಜೃಂಭಿಸುತ್ತವೆ.

ತೇಜಸ್ವಿ ಅವರು ಹೆಣ್ಣನ್ನು ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಕಂಡುಬರುವ ಸ್ತ್ರೀಯಂತೆ ನೋಡದೆ ವಾಸ್ತವವಾದಿ ದೃಷ್ಟಿಕೋನದ ಹಿನ್ನೆಲೆಯಲ್ಲಿ ನೋಡುತ್ತಾರೆ. ಅವರು ಹೆಣ್ಣನ್ನು ವರ್ತಮಾನ ಸಮಾಜದ ಸಂವೇದನೆಗೆ ತಕ್ಕಂತೆ ನೋಡಿದ್ದಾರೆ. ಹೆಣ್ಣಿನ ಬಗೆಗೆ ಅವರು ತಳೆಯುವ ನಿಲುವು ಬಹಳ ವಿಶಿಷ್ಟವಾದುದು ಎನಿಸುತ್ತದೆ. ಇವರ ಕಥೆಗಳಲ್ಲಿ ಹೆಣ್ಣು, ಪತ್ನಿ, ತಾಯಿ, ಸೊಸೆ, ಗೃಹಿಣಿ ಮುಂತಾದ ಕೌಟುಂಬಿಕ ನೆಲೆಯಲ್ಲಿ ಹೆಣ್ಣು ಕಂಡುಬರುತ್ತಳಾದರೂ ಸಾಂಪ್ರದಾಯಿಕ ಕೌಟುಂಬಿಕ ಪರಿಸರವನ್ನು ಮೀರಿ ನಿಲ್ಲುವ ಮಹಿಳೆಯರಾಗಿ ಇವರ ಕೆಲವು ಕಥೆಗಳ ಪಾತ್ರಗಳು ಕಂಡುಬರುತ್ತವೆ. ತೇಜಸ್ವಿ ತಮ್ಮ ಮೊದಲ ಕಥಾ ಸಂಕಲನ 'ಹುಲಿಯೂರಿನ ಸರಹದ್ದಿ'ನಲ್ಲಿ ಹೆಣ್ಣನ್ನು ನೋಡುವ ಕ್ರಮಕ್ಕೂ ನಂತರದ 'ಕಿರಗೂರಿನ ಗಯ್ಯಾಳಿಗಳು' ಸಂಕಲನದಲ್ಲಿ ನೋಡುವ ಕ್ರಮಕ್ಕೂ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ.

'ಹುಲಿಯೂರಿನ ಸರಹದ್ದು' ಸಂಕಲನದಲ್ಲಿ ಸ್ತ್ರೀ ಪಾತ್ರಗಳು ಗೌಣವಾಗಿದ್ದು ಕೌಟುಂಬಿಕ ವ್ಯವಸ್ಥೆಯೊಳಗೆ ಮಾತ್ರ ಅತ್ತೆ, ಸೊಸೆ, ಮಕ್ಕಳು, ಗೃಹಿಣಿಯರು ಮುಂತಾದ ಸ್ಥಾನಗಳ ಪ್ರತೀಕವಾಗಿ ಯಾವುದೇ ಸ್ವಾತಂತ್ರ್ಯವಿಲ್ಲದೆ ಪುರುಷನ ನೆರಳಿನಲ್ಲಿ

ಬದುಕುತ್ತಾಳೆ. ಅದು ಅಂದಿನ ಸಮಕಾಲೀನ ಸಮಾಜದಲ್ಲಿನ ಹೆಣ್ಣಿನ ನೆಲೆಯನ್ನು ಸೂಚಿಸುತ್ತದೆ. ಈ ಸಂಕಲನದಲ್ಲಿ ಸ್ತ್ರೀ ಪಾತ್ರಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತವೆ.

ತೇಜಸ್ವಿ ಅವರ ಕಥೆಗಳಲ್ಲಿ ಹೆಣ್ಣು ವಿವಿಧ ದೃಷ್ಟಿಕೋನಗಳಲ್ಲಿ ಕಂಡುಬರುತ್ತಾಳೆ. ಸಾಂಪ್ರದಾಯಿಕ ಸಮಾಜದ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣು ಕುಟುಂಬದ ಕೈಗೊಂಬೆಯಾಗಿ, ಗಂಡಿನ ಆಸರೆಯಲ್ಲಿ ಬದುಕುವ ಜೀವಿಯಾಗಿ, ಮಕ್ಕಳನ್ನು ಹಡೆಯುವ ಯಂತ್ರವಾಗಿ, ತನ್ನ ಮನಸ್ಸಿನ ಭಾವನೆಗಳಿಗೆ ಬೆಲೆಯಿಲ್ಲದ ರೀತಿಯಲ್ಲಿ ಬದುಕುವ ಕ್ರಮ ಕಂಡುಬರುತ್ತದೆ. ತೇಜಸ್ವಿ ತಮ್ಮ ಕತೆಗಳಲ್ಲಿ ಇಂಥ ವ್ಯವಸ್ಥೆಯನ್ನು ಮೀರುವ ದೃಷ್ಟಿಕೋನದಲ್ಲಿ ಅಭಿವ್ಯಕ್ತಿಪಡಿಸುತ್ತಾರೆ. ಹೆಣ್ಣು ಕೇವಲ ಕುಟುಂಬದ ಕೈಗೊಂಬೆಯಲ್ಲ ಗಂಡಿನ ಆಸರೆ ಇಲ್ಲದೆಯೂ ಬದುಕಬಲ್ಲಳು. ಅವಳಿಗೆ ತನ್ನದೇ ಆದ ವೈಯಕ್ತಿಕ ಸ್ವಾತಂತ್ರ್ಯವಿದೆ ಎಂಬ ನಿಲುವನ್ನು 'ಅಬಚೂರಿನ ಪೋಸ್ಟಾಫೀಸು' ಕಥೆಯ ಮಾಚಮ್ಮ ಕಾವೇರಿ ಪಾತ್ರಗಳಿಂದ ತಿಳಿಯುತ್ತದೆ. ಅಲ್ಲಿ ಹೆಣ್ಣಿಗೂ ಒಂದು ಮನಸ್ಸಿದೆ. ಕೇವಲ ಅವಳು ಬೋಗದ ವಸ್ತುವಲ್ಲ ಎಂಬ ಹೆಣ್ಣಿನ ಬಗೆಗಿನ ದೃಷ್ಟಿಕೋನ ಸ್ಪಷ್ಟವಾಗುತ್ತದೆ. ಪುರುಷನಾದವನು ಹೆಣ್ಣಿನ ಮನಸ್ಸಿನ ಭಾವನೆಗಳನ್ನು ಅರ್ಥ ಮಾಡಿಕೊಂಡು ಅವುಗಳಿಗೆ ಸ್ಪಂದಿಸದಿದ್ದರೆ ಹೆಣ್ಣಿನ ಸ್ವಾತಂತ್ರ್ಯದ ಹರಣವಾದಂತೆ ಎಂಬ ನಿಲುವು ತೇಜಸ್ವಿ ಅವರಲ್ಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಕೇವಲ ಹೆರಬಲ್ಲ ಯಂತ್ರವಾಗಿದ್ದಾಳೆ. ಒಂದು ವೇಳೆ ಹೆಣ್ಣಿಗೆ ಮಕ್ಕಳಾಗದಿದ್ದರೆ ಅಥವಾ ಜನಿಸಿದ ಮಕ್ಕಳು ಮರಣವನ್ನಪ್ಪಿದರೆ ಅದಕ್ಕೆ ಹೆಣ್ಣನ್ನೇ ಹೊಣೆಯನ್ನಾಗಿ ಅಕೆಯ ಭಾವನೆಗಳಿಗೆ ದಕ್ಕೆಯುಂಟುಮಾಡಲಾಗಿದೆ. ಅಂತ ಸಂದರ್ಭಗಳಲ್ಲಿ ಆಕೆಯಲ್ಲಿಯೇ ದೋಷ ಇದೆ ಎಂದು ಹಣೆಪಟ್ಟಿಯನ್ನು ಕಟ್ಟಿ ಶೋಷಣೆ ಮಾಡಲಾಗುತ್ತದೆ. ಅಲ್ಲದೆ ಗ್ರಾಮೀಣ ಪ್ರದೇಶದ ಅಂಥ ಆಚರಣೆಗಳಿಂದಾಗಿ ಹೆಣ್ಣಿನ ಸೌಂದರ್ಯವನ್ನು ವಿಕೃತಿಗೊಳಿಸುವ ಪ್ರಕ್ರಿಯೆ ಕಂಡುಬರುತ್ತದೆ. ವಾಸ್ತವದಲ್ಲಿ ಇಂಥ ವ್ಯವಸ್ಥೆಯಿಂದಾಗಿ ಒಂದು ಸಂಸ್ಕೃತಿಯನ್ನೇ ಅಧಃಪತನಕ್ಕೆ ಇಳಿಸಲಾಗುತ್ತಿದೆ. ಸಂಸ್ಕೃತಿಯನ್ನು ವಿಕೃತಿಗೊಳಿಸಲಾಗುತ್ತಿದೆ ಎಂಬ ನಿಲುವನ್ನು ತೇಜಸ್ವಿ ಅವರ 'ಅವನತಿ' ಕತೆಯ ಮೂಲಕ ತಿಳಿಯಬಹುದು.

ಗ್ರಾಮೀಣ ಪ್ರದೇಶದಲ್ಲಿ ಹೆಣ್ಣನ್ನು ಎರಡನೆಯ ದರ್ಜೆಯ ಪ್ರಜೆಯನ್ನಾಗಿಯೇ ನೋಡಲಾಗಿದೆ. ಹೀಗೆ ಮಾಡುವುದು ಸಮಂಜಸವಲ್ಲ ಎಂಬ ನಿಲುವು ತೇಜಸ್ವಿ ಅವರ ಕೆಲವು ಕಥೆಗಳಿಂದ ತಿಳಿಯುತ್ತದೆ. ರೈತ ವರ್ಗದ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯವಿಲ್ಲ. ಅವರು ಮನೆಯೊಳಗೆ ದುಡಿಯಬೇಕು. ಹಾಗೆಯೇ ಮನೆಯ ಹೊರಗೂ ದುಡಿಯಬೇಕು. ಮನೆಯ ಒಳಿತಿಗೆ ಅವರು ಹೊಲಗದ್ದೆಗಳಲ್ಲಿ ದುಡಿಯುತ್ತಾರೆ.

ಗಂಡು-ಹೆಣ್ಣಿನ ಸಂಬಂಧದಲ್ಲಿ ಶ್ರೇಷ್ಠ-ಕನಿಷ್ಠವೆಂಬ ವರ್ಗೀಕರಣವನ್ನು ಮಾಡಿದರೆ ಹೆಣ್ಣನ್ನು ಮಾನವೀಯ ವರ್ಗಕ್ಕೆ ಸೇರಿಸಿದಂತೆ ಆಗುವುದಿಲ್ಲ. ಗಂಡಲ್ಲಿ ಇಲ್ಲವಾದ ಲೈಂಗಿಕ ವ್ಯತ್ಯಾಸವು ಹೆಣ್ಣಿನಲ್ಲಿದೆಯೆಂದ ಮಾತ್ರಕ್ಕೆ ಹೆಣ್ಣನ್ನು ದುರ್ಬಲವೆಂದು ಕರೆದರೆ ಮಾನವೀಯ ಸಂಬಂಧಗಳ ಅರ್ಥವನ್ನು ಕಳೆದುಕೊಂಡಂತೆ. ಹೆಣ್ಣಿನ ಮೇಲೆ ಮಾನಸಿಕ ಒತ್ತಡವನ್ನು ಹೇರುವುದು ಒಂದು ದುರಂತವಿದ್ದಂತೆ. ಇದರಿಂದ ಹೆಣ್ಣು ಕೀಳರಿಮೆಯಿಂದ ನರಳಬೇಕಾಗುತ್ತದೆ. ಮತ್ತು ಹೆಣ್ಣನ್ನು ಹೆಣ್ಣಾಗಿರುವ ಕಾರಣಕ್ಕೆ ಶೋಷಣೆ ಮಾಡಲಾಗುತ್ತದೆ. ಇದರಿಂದ ಮಾನವೀಯ ಸಂಬಂಧಗಳು ಹದಗೆಡುತ್ತವೆ. ಹೀಗೆ ಗಂಡು-ಹೆಣ್ಣಿನ ನಡುವೆ ತಾರತಮ್ಯ ಇದ್ದಾಗ ಅದು ಸಮಾಜದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ ಎಂಬ ನಿಲುವು ತೇಜಸ್ವಿ ಕಥೆಗಳಲ್ಲಿದೆ.

ತೇಜಸ್ವಿ ಅವರಿಗೆ ಹೆಣ್ಣಿನ ಬಗೆಗಿರುವ ಮತ್ತೊಂದು ನಿಲುವು, ಗ್ರಾಮೀಣ ಪ್ರದೇಶದ ಹೆಣ್ಣು ತಾನು ಮನೆಯ ಒಳಗೆ ದುಡಿಯುವುದಲ್ಲದೆ ಗಂಡನ ಕೆಲಸಗಳಲ್ಲಿಯೂ ಭಾಗಿಯಾಗುತ್ತಾಳೆ. ಅನಿವಾರ್ಯವಾಗಿ ಸ್ತ್ರೀಯು ಪುರುಷನಿಗಿಂತ ಹೆಚ್ಚು ಕಾಲ ದುಡಿಯಬೇಕಾಗುತ್ತದೆ. ಪುರುಷನ ಅಗತ್ಯಕ್ಕಾಗಿ ಸ್ತ್ರೀಯ ಕೆಲಸ ಪುನರಾವರ್ತನೆಯ ಮಾದರಿಯದು. ಉದಾಹರಣೆಗೆ ಮನೆಯನ್ನು ಸ್ವಚ್ಛವಾಗಿರಿಸುವುದು, ಅಡುಗೆಯ ಕೆಲಸ ಇತ್ಯಾದಿ. · ಆದರೆ ಮಹಿಳೆಯರ ಕೆಲಸಕ್ಕೆ ಯಾವುದೇ ರೀತಿಯ ಮೌಲ್ಯವು ನಿಗದಿಯಾಗಿರುವುದಿಲ್ಲ. ಇಂತಹ ನಿಲುವಿಗೆ 'ತುಕ್ಕೋಜಿ' ಕಥೆಯಲ್ಲಿ ಸರೋಜಳ ಪಾತ್ರದಂತಹ ಇತರೆ ಪಾತ್ರಗಳು ಕಣ್ಣಿಗೆ ಗೋಚರವಾಗುತ್ತವೆ.

ತೇಜಸ್ವಿ ಅವರ ಆರಂಭದ ಎರಡು ಕಥಾ ಸಂಕಲನಗಳಲ್ಲಿನ ಸ್ತ್ರೀ ಬಗೆಗಿನ ನಿಲುವುಗಳಿಗೂ 'ಕಿರಗೂರಿನ ಗಯ್ಯಾಳಿಗಳು' ಕತೆಯಲ್ಲಿನ ನಿಲುವಿಗೂ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಕಿರಗೂರಿನ ಗಯ್ಯಾಳಿಗಳು ಬರೆಯುವ ವೇಳೆಗೆ ಹೆಣ್ಣಿನ

ಬಗೆಗಿನ ಅವರ ದೃಷ್ಟಿಕೋನವು ವಿಶಿಷ್ಟವಾಗಿದ್ದು ಅದು ಸಮಾಜದಲ್ಲಿ ಸಾಕಷ್ಟು ಬದಲಾವಣೆಗೆ ಕಾರಣವೂ ಆಯಿತು ಎನಿಸುತ್ತದೆ. ಸಾಮಾನ್ಯವಾಗಿ ಒಬ್ಬ ಲೇಖಕ ಬದುಕನ್ನು ಗ್ರಹಿಸುವ ರೀತಿಯ ಆಧಾರದ ಮೇಲೆ ಹೆಣ್ಣಿನ ಬಗೆಗಿನ ಅವನ ನಿಲುವು ಯಾವುದು ಎಂಬುದು ಸ್ಪಷ್ಟವಾಗುತ್ತದೆ. ಕಿರಗೂರಿನ ಗಯ್ಯಾಳಿಗಳು ಕಥೆಯಲ್ಲಿ ನಾವು ಕಾಣುವ ಗ್ರಾಮೀಣ ಮಹಿಳೆಯರ ಬದುಕಿನ ಸ್ವರೂಪ ಮತ್ತು ಮೌಲ್ಯಗಳಲ್ಲಿ ಹಳೆಯದರಲ್ಲಿರುವ ಒಳಿತನ್ನು ಉಳಿಸುವ ಕಾಳಜಿ ಜೊತೆಗೆ ಶೋಷಣಾ ಮುಕ್ತ ಸಮಾಜವಾಗಿಸಲು, ಅನಿವಾರ್ಯಸಂದರ್ಭಗಳಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಸಿದ್ಧಾರಾದವರು. ತೇಜಸ್ವಿ ಅವರಿಗೆ ಇಲ್ಲಿ ಹೆಣ್ಣಿನ ಬಗೆಗೆ ನಿರ್ದಿಷ್ಟವಾದ ಮೌಲಿಕ ನೆಲೆಯಿದೆ. ಈ ನೆಲೆಯಿಂದ ನಿರ್ಣಯವಾಗುವ ಒಳಿತು ಕೆಡಕುಗಳ ಬಗ್ಗೆ ಸ್ಪಷ್ಟವಾದ ಪ್ರತಿಕ್ರಿಯೆ ಇದೆ. ಗ್ರಾಮೀಣ ಮಹಿಳೆಯರ ಬದುಕಿನ ಅತ್ಯಂತ ದಾರುಣ ಮತ್ತು ಸತ್ವಯುತ ಮುಖಗಳನ್ನು ಕಾಣಿಸುತ್ತಾ ಅವರ ಬದುಕಿನ ನೆಲೆಯನ್ನು ಅನಾವರಣಗೊಳಿಸಿದವರು ತೇಜಸ್ವಿ. ಈ ಕಾರಣಕ್ಕಾಗಿ ಕಥಾ ಸಾಹಿತ್ಯದ ಇತಿಹಾಸದಲ್ಲಿ ಕಿರಗೂರಿನ ಗಯ್ಯಾಳಿಗಳಿಗೆ ವಿಶೇಷವಾದ ಸ್ಥಾನವಿದೆ. ತೇಜಸ್ವಿ ಅವರು ಚಿತ್ರಿಸಿರುವ ಇಲ್ಲಿನ ಮಹಿಳೆಯರು ಸಾಮಾನ್ಯವಾಗಿ ಔಪಚಾರಿಕವಾಗಿ ಶಿಕ್ಷಣವನ್ನು ಪಡೆಯದಿದ್ದವರು ಅಪ್ರಾಮಾಣಿಕತೆ, ಬೇಜವಾಬ್ದಾರಿತನಗಳಿಗೆ ಹೆಂಗಸು-ಗಂಡಸೆಂಬ ಭೇದವಿಲ್ಲದಿದ್ದರೂ ಅಪ್ರಾಮಾಣಿಕತೆ ಬೇಜವಾಬ್ದಾರಿಕೆಯಿಂದ ಕೂಡಿದ ಗಂಡಸರು ಇಲ್ಲಿನ ಕಥೆಯಲ್ಲಿ ಸಾಕಷ್ಟಿರುವುದರಿಂದ ಸಂಸಾರದ ಹೊರೆಯನ್ನು ಹೊರುವ ಸಹನ ಶಿಲೆಯರಾಗಿ ದಿಟ್ಟ ಮಹಿಳೆಯರಾಗಿ ಎದ್ದು ಕಾಣುತ್ತಾರೆ. ಇಲ್ಲಿನ ಅನೇಕರು ತಮ್ಮ ವೈಯಕ್ತಿಕ ಜೀವನದ ಸಂತೋಷವನ್ನು ಬಲಿಕೊಟ್ಟವರು.

ಹೆಣ್ಣನ್ನು ಆಳುವ ವರ್ಗವೆನಿಸಿರುವ ಪುರುಷ ವರ್ಗವು ಹೆಣ್ಣನ್ನು ಶೋಷಣೆ ಮಾಡುತ್ತಲೇ ಹೊರಟರೆ ತುಳಿತಕ್ಕೆ ಒಳಗಾದ ಸ್ತ್ರೀ ತನ್ನ ಕ್ರೌರ್ಯವನ್ನು ಹೊರಹಾಕಿ ತನ್ನ ಸಾಮಾಜಿಕ ಸಂಬಂಧವನ್ನು ಬೇರೊಂದು ರೀತಿಯಲ್ಲಿ ಸ್ಥಾಪಿಸಲು ಯತ್ನಿಸುತ್ತದೆ. ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಪ್ರತಿಭಟನೆಯನ್ನು ಹೊರಹಾಕುತ್ತದೆ. ಪುರುಷ ವರ್ಗವು ಕೆಲವೊಮ್ಮೆ ಅಮಾನವೀಯವಾಗಿ ನಡೆಸಿಕೊಳ್ಳುವುದರಿಂದ ಮನುಷ್ಯ ಸಂಬಂಧವು ಗೌಣವಾಗಿರುತ್ತದೆ. ಆದ್ದರಿಂದ ಹೆಣ್ಣಿನಿಂದ ಪ್ರತಿಭಟನೆ ಅನಿವಾರ್ಯ-ವಾಗುತ್ತದೆ ಎಂಬ ನಿಲುವನ್ನು ತೇಜಸ್ವಿ ತಳೆದಿದ್ದಾರೆ.

ಕುಡಿತ, ಹರಟೆ, ಸೋಮಾರಿತನ, ರಂಪಾಟ, ಜಾತಿ ರಾಜಕೀಯ, ಒಳದರ್ಪ ಇತ್ಯಾದಿಗಳಲ್ಲಿ ಮುಳುಗಿ ಹೋಗಿರುವ ಗಂಡಸರ ಉಪಟಳಗಳನ್ನು ತಡೆದುಕೊಂಡು ಬೇಸತ್ತಿರುವ ಮಹಿಳೆಯರು ಕಾಲಕ್ರಮೇಣ ಅವರ ವಿರುದ್ಧ ಪ್ರತಿಭಟನೆ ಮಾಡುತ್ತಾರೆ. ಅದು ನಿಂದನೆಯ ಮೂಲಕ ಆಗಿರಬಹುದು. ಅಥವಾ ಹೊಡೆತಗಳ ಮೂಲಕವೂ ಆಗಿರಬಹುದು ಎಂಬ ನಿಲುವು ಸ್ತ್ರೀಯರ ಹಕ್ಕುಗಳ ಪರ ಹೋರಾಟಕ್ಕೆ ಪ್ರೇರಣೆಯಾಗುತ್ತದೆ. ಹೆಣ್ಣು 'ಗಾಳಿ' ಇದ್ದ ಹಾಗೆ ಉಸಿರನ್ನು ನೀಡಿ ಬದುಕಿಸಲು ಬಹುದು ಸಮಯ ಬಂದರೆ 'ಬಿರುಗಾಳಿ'ಯಂತಾಗಿ ಅಲ್ಲೋಲಕಲ್ಲೋಲ ಮಾಡಬಹುದು ಎಂಬ ಹೆಣ್ಣಿನ ಬಗೆಗಿನ ನಿಲುವು ಪರಿಣಾಮಕಾರಿಯಾಗಿದೆ ಎನಿಸುತ್ತದೆ.

ಗಯ್ಯಾಳಿಗಳು ಕಥೆಯನ್ನು ಗಮನಿಸಿದಾಗ ಲಿಂಗತಾರತಮ್ಯದ ಗಂಡಸುತನದ ಸ್ವೀಕೃತ ನಂಬಿಕೆಗಳನ್ನು ಇಲ್ಲಿನ ಹೆಂಗಸರು ಅಲುಗಾಡಿಸುತ್ತಾರೆ. ಹೆಂಗಸರ ಬಂಡಾಯದ ಮನೋಧರ್ಮ ಗಂಡಸರಿಗೆ ಗಯ್ಯಾಳಿತನವಾಗಿ ಕಾಣುವುದು ವಿಪರ್ಯಾಸವೆನಿಸುತ್ತದೆ. ಮಹಿಳೆಯರನ್ನು ಆತ್ಮಸ್ಥೈರ್ಯ ಹಾಗೂ ದಿಟ್ಟತನವನ್ನು ತೋರಿದರೆ ಗಂಡಸರು ಹೆದರುತ್ತಾರೆ. ಹಾಗಾಗಿ ಹೆಣ್ಣಿಗೆ ಆತ್ಮಸ್ಥೈರ್ಯ ತುಂಬುವ ವಾತಾವರಣ ಬೇಕು ಎಂಬ ಧೋರಣೆಯನ್ನು ತೇಜಸ್ವಿ ಇಲ್ಲಿ ತಳೆದಿದ್ದಾರೆ.

ಹೀಗೆ ತೇಜಸ್ವಿ ಅವರು ವರ್ತಮಾನದ ವಾಸ್ತವವಾದಿ ಪ್ರಜ್ಞೆಯ ಹಿನ್ನೆಲೆಯಲ್ಲಿ ಸ್ತ್ರೀಯನ್ನು ನೋಡುತ್ತಾ ಆ ನಿಟ್ಟಿನಲ್ಲಿ ವರ್ತಮಾನದ ಸಂಗತಿಗಳೇ ಮುಖ್ಯ ಸಂವೇದನೆಗಳಾಗಿ ವಿಶೇಷತೆಯನ್ನು ಪಡೆದುಕೊಂಡಿವೆ. ಆದ್ದರಿಂದ ತೇಜಸ್ವಿಯವರ ಕತೆಗಳಲ್ಲಿ ಸ್ತ್ರೀ ಸಂವೇದನಾ ನೆಲೆಗಳು ಬಹಳ ವೈಶಿಷ್ಟ್ಯಪೂರ್ಣವಾಗಿ ಕಾಣುತ್ತವೆ.

ಅಧ್ಯಾಯ – ೫

ತೇಜಸ್ವಿ ಕಥೆಗಳಲ್ಲಿ ಸ್ತ್ರೀ ಸಂವೇದನೆ

ಕನ್ನಡ ಸಾಹಿತ್ಯದ ಆರಂಭದಿಂದ ಆಧುನಿಕ ಕನ್ನಡ ಸಾಹಿತ್ಯದವರೆಗೂ ಗಮನಿಸಿದಾಗ ಆಧುನಿಕ ಕನ್ನಡ ಸಾಹಿತ್ಯ ಹಲವು ಸಂವೇದನೆಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಬಹಳ ಪ್ರಮುಖವೆನಿಸುತ್ತದೆ. ಈ ಆಧುನಿಕ ಕಾಲಘಟ್ಟದಲ್ಲಿ ಹಲವಾರು ಲೇಖಕಿಯರು ಸಾಹಿತ್ಯವನ್ನು ರಚಿಸಿದ್ದು ಅದರಲ್ಲಿ ಹೆಣ್ಣಿನ ಅನುಭವ ಲೋಕವನ್ನು ತೆರೆದಿಟ್ಟಿದ್ದಾರೆ. ಹಾಗೆಯೇ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಮಹಿಳೆಯರ ಹೊರತಾಗಿಯೂ ಹಲವಾರು ಲೇಖಕರು ತಮ್ಮ ಸಾಹಿತ್ಯದಲ್ಲಿ ಹೆಣ್ಣಿನ ಭಾವನೆಗಳು ನೋವು ನಲಿವುಗಳು ಮನಸ್ಸಿನ ತೊಳಲಾಟಗಳು ಮುಂತಾದ ಅನುಭವಗಳನ್ನು ಚಿತ್ರಿಸಿದ್ದಾರೆ. ಅಂತಹ ಲೇಖಕರ ಸರದಿಯಲ್ಲಿ ಕನ್ನಡದ ಪ್ರಮುಖ ಬರಹಗಾರರಾದ ಕೆ.ಪಿ.ಪೂರ್ಣಚಂದ್ರತೇಜಸ್ವಿಯವರು ಬಹಳ ವಿಶಿಷ್ಟ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾರೆ ಎಂದರೆ ತಪ್ಪಾಗಲಾರದು.

ತೇಜಸ್ವಿ ತಮ್ಮ ಸಾಹಿತ್ಯದ ಮೇಲಾಗಿರುವ ಪ್ರಭಾವವನ್ನು ಕುರಿತು 'ಅಬಚೂರಿನ ಫೋಸ್ಟಾಫೀಸು' ಕಥಾ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ (ಹೊಸ ದಿಗಂತದೆಡೆಗೆ) 'ಲೋಹಿಯಾರವರ ತತ್ವ ಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆ, ಈ ಮೂರೇ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿರಲುವುವು. ಬಹುಶಃ ಮುಂಬರುವ ಕಲಾವಿದರಿಗೆ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಚೈತನ್ಯ ಶಕ್ತಿಯಾಗಬಲ್ಲಂಥವು. ಈ ಮೂರೇ ಎಂದು ಹೇಳುತ್ತಾರೆ. ಹೀಗೆ ಭಾವಿಸಿಕೊಳ್ಳುವ ತೇಜಸ್ವಿ ಅವರ ಉದ್ದತೆ ಅದರಾಚೆಗೆ ಯಾವುದೇ ಪ್ರತಿವಾದಗಳನ್ನಿಟ್ಟು ಪ್ರಶ್ನಿಸುವಂತಹುದಲ್ಲ. ಅದರಲ್ಲಿಯೇ ಅವರು ತಮ್ಮ ಸಾಹಿತ್ಯ ಸೃಷ್ಟಿಗೆ ಯಾವುದೇ ಸಿದ್ಧ ಮಾದರಿಯನ್ನು ಒಪ್ಪಿಕೊಳ್ಳದ ಅಪ್ಪಿಕೊಳ್ಳದ ಹಾಗೆಯೇ ಯಾವುದೋ ಒಂದು ಮಾದರಿಯನ್ನು ರೂಪಿಸಿದ ವಿಶಿಷ್ಟ ಲೇಖಕರಾಗಿ ಕಾಣಿಸಿಕೊಳ್ಳುತ್ತಾರೆ. ಸ್ತ್ರೀ ಸಂವೇನೆಯ ದೃಷ್ಟಿಯಿಂದ ಈ ಮಾತು ಮುಖ್ಯವೆನಿಸುತ್ತದೆ.

ತೇಜಸ್ವಿ ಅವರು ಸಾಹಿತ್ಯ ಸೃಷ್ಟಿಗೆ ಅಗತ್ಯವಾಗಿ ಶ್ರದ್ಧೆಯನ್ನು ಹೇಳುತ್ತ ಅವರು ತಮ್ಮನ್ನು ಪ್ರಭಾವಿಸಿದ ಲೋಹಿಯಾರ ತತ್ವ ಚಿಂತನೆ ಮತ್ತು ಹಳ್ಳಿ ಜೀವನ, ಹಳ್ಳಿಯ

ಮಹಿಳೆಯರ ಬದುಕು, ಅವರ ಪರಿಸ್ಥಿತಿಗಳ ಬದ್ಧತೆಯ ಹಿನ್ನೆಲೆಯಲ್ಲಿ ಕತೆಗಳನ್ನು ಬರೆಯಲು ಪ್ರಯತ್ನಿಸುತ್ತಾರೆ. ಆದ್ದರಿಂದ ಸ್ತ್ರೀ ಸಂವೇದನೆಗೊಂದು ವಿಶಿಷ್ಟ ಕೊಡುಗೆ ಅವರ ಕಥೆಗಳಿಂದ ಲಭ್ಯವಾಗುತ್ತದೆ.

ತೇಜಸ್ವಿ ಅವರು ತಮ್ಮ ಆಳವಾದ ವೈಚಾರಿಕ ನೆಲೆಯಿಂದ ಹೆಣ್ಣು-ಗಂಡಿನ ಸಂಬಂಧವನ್ನು ತಮ್ಮ ಕಥೆಗಳಲ್ಲಿ ವಿಶ್ಲೇಷಿಸುತ್ತಾರೆ. ತೇಜಸ್ವಿ ಅವರ ವೈಚಾರಿಕತೆ ಮತ್ತು ಚಿಂತನಾಶೀಲತೆ ಹೆಚ್ಚಾಗಿ ಗ್ರಾಮೀಣ ಸಂಸ್ಕೃತಿಯ ಪರವಾಗಿರುವುದರಿಂದ ಗ್ರಾಮೀಣ ಮಹಿಳೆಯರ ನೋವು ನಲಿವುಗಳು, ಅವರ ಭಾವನೆಗಳು, ಮನಸ್ಸಿನ ಹೊಯ್ದಾಟಗಳನ್ನು ಸಂವೇದನಾಪೂರ್ವಕವಾಗಿ ಚಿತ್ರಿಸುವುದರ ಜೊತೆಗೆ ಅವರ ಬದುಕಿನ ಸ್ಥಿತಿಗತಿಗಳು ಮತ್ತು ಮೌಲ್ಯಗಳನ್ನು ವೈಭವೀಕರಣ ಮಾಡುತ್ತಾರೆ. ತೇಜಸ್ವಿ ಅವರ ಕಥೆಗಳಲ್ಲಿನ ಸ್ತ್ರೀ ಸಂವೇದನೆಯು ಸಾಹಿತ್ಯಿಕ ಕಾಲ ಘಟ್ಟದ ದೃಷ್ಟಿಯಿಂದ ಮತ್ತು ಕಥೆಗಳ ದೃಷ್ಟಿಯಿಂದ ಪರಿವರ್ತನೆ ಕಂಡುಬರುತ್ತದೆ. ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಸಂಕಲನದಲ್ಲಿ ಬರುವ ಸಂವೇದನೆಗೂ, 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಬರುವ ಸಂವೇದನೆಗೂ ವ್ಯತ್ಯಾಸಗಳನ್ನು ಗುರುತಿಸಬಹುದು.

ತೇಜಸ್ವಿ ತಮ್ಮ ಕಥೆಗಳಲ್ಲಿ ಗ್ರಾಮೀಣ ಮಹಿಳೆಯರ ಬದುಕಿನ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮುಖಗಳನ್ನು ಕಾಣಿಸುತ್ತಾರೆ. ಭಾರತೀಯ ಸಾಂಪ್ರದಾಯಿಕ ಮಹಿಳೆಯರ ಪಾತ್ರ ಚಿತ್ರಣವನ್ನು ಮಾಡುವುದರ ಜೊತೆಗೆ ಬದಲಾಗುತ್ತಿರುವ ಪರಿಸ್ಥಿತಿಗಳಿಗನು-ಗುಣವಾಗಿ ಪುರುಷ ಕೇಂದ್ರಿತ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯನ್ನು ತೋರುವ ಪಾತ್ರಗಳನ್ನು ಸೃಷ್ಟಿಸುತ್ತಾರೆ. ಈ ಎರಡೂ ಪಾತ್ರಗಳನ್ನು ತಮ್ಮ ಕಥೆಗಳಲ್ಲಿ ಮುಖಾಮುಖಿಯಾಗಿಸುತ್ತಾರೆ. ಈ ಕಾರಣದಿಂದ ತೇಜಸ್ವಿ ಹೆಚ್ಚು ಇಷ್ಟವಾಗುತ್ತಾರೆ.

ತೇಜಸ್ವಿ ಅವರ ಕಥೆಗಳಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಂವೇದನೆಯನ್ನು ನಾವು ಈ ಮುಂದಿನಂತೆ ಹಂತಹಂತವಾಗಿ ನೋಡಬಹುದಾಗಿದೆ.

ಹುಲಿಯೂರಿನ ಸರಹದ್ದು

'ಹುಲಿಯೂರಿನ ಸರಹದ್ದು' ತೇಜಸ್ವಿ ಅವರು ಮೊದಲು ಪ್ರಕಟಿಸಿದ ಕಥಾ ಸಂಕಲನ. ಇದರಲ್ಲಿ ಒಟ್ಟು ಆರು ಕಥೆಗಳಿವೆ. ತೇಜಸ್ವಿ ಅವರು ನವ್ಯ ಸಾಹಿತ್ಯ ಸಂದರ್ಭದಲ್ಲಿ ಬರೆಯಲು ಆರಂಭಿಸಿದ್ದರಿಂದ ಇಲ್ಲಿನ ಕಥೆಗಳೆಲ್ಲವೂ ನವ್ಯ ಕಥೆಗಳ ಧಾಟಿಯಲ್ಲೇ ನಿರೂಪಿತವಾಗಿವೆ. ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಗಮನಿಸಿದಾಗ

ಇಲ್ಲಿನ ಕಥೆಗಳು ಅಷ್ಟೇನು ಮಹತ್ವವನ್ನು ಪಡೆದುಕೊಳ್ಳುವುದಿಲ್ಲವಾದರೂ ಕೆಲವೊಂದು ಸಂವೇದನೆಗಳನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ನವ್ಯರಲ್ಲಿ ಹಲವರು ಹೆಣ್ಣನ್ನು ಅರಿಯುವುದರಲ್ಲಿ ಹೆಣ್ಣಿನ ಮನೋಭಾವವನ್ನು ಬಿಂಬಿಸುವುದರಲ್ಲಿ ಹೆಣ್ಣು ಕೂಡಾ ಗಂಡಿನಂತೆ ಸ್ವತಂತ್ರ ವ್ಯಕ್ತಿತ್ವದ ವ್ಯಕ್ತಿ ಎಂಬುದನ್ನು ಮಂಡಿಸಲು ವಿಫಲವಾಗಿದ್ದರು. ಆದರೆ ತೇಜಸ್ವಿ, ಅನಂತಮೂರ್ತಿ, ಲಂಕೇಶ್‌ರಂಥವರು ಆ ಮಾತನ್ನು ಸುಳ್ಳಾಗಿಸಿದರು.

ಇಲ್ಲಿನ ಆರೂ ಕಥೆಗಳಲ್ಲಿ ಸ್ತ್ರೀ ಸಂವೇದನೆಗೆ ಅಷ್ಟು ಪ್ರಾಮುಖ್ಯತೆ ನೀಡಿದಂತೆ ಕಾಣುವುದಿಲ್ಲ. ಇಲ್ಲಿನ ಎಲ್ಲಾ ಕಥೆಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಸ್ತ್ರೀ ಪಾತ್ರಗಳು ಬರುತ್ತವೆ. ಅವುಗಳ ಆತ್ಮ ನಿವೇದನೆಗೆ ಎಲ್ಲೂ ಅವಕಾಶ ದೊರೆಯುವುದಿಲ್ಲ. 'ಲಿಂಗಬಂಧ' ಕಥೆಯ ಚಿನ್ನಮ್ಮ, 'ಗುಡುಗು ಹೇಳಿದ್ದೇನು' ಕಥೆಯ ಸುಬ್ಬಮ್ಮ, ಸೋಮ ಲಕ್ಕರ ಅಜ್ಜಿ, 'ಗಾಂಧೀಜಿ ದೆಸೆಯಿಂದ' ಕಥೆಯ ಲಕ್ಷ್ಮಮ್ಮ, 'ಊರ್ವಶಿ' ಕಥೆಯ ಸುಭದ್ರ, 'ಹುಲಿಯೂರಿನ ಸರಹದ್ದು' ಕಥೆಯ ನಳಿನಾಕ್ಷಿ – ಈ ಎಲ್ಲಾ ಪಾತ್ರಗಳು ಪುರುಷ ಕೇಂದ್ರಿತ ಕುಟುಂಬ ವ್ಯವಸ್ಥೆಯಲ್ಲಿ ಪುರುಷರ ಅಧೀನದಲ್ಲಿ ಇರುವವರು. ಎಲ್ಲಿಯೂ ಅವರ ಸಂವೇದನೆಗೆ ಅವಕಾಶ ದೊರೆಯುವುದಿಲ್ಲ. ಇಲ್ಲೆಲ್ಲಾ ಕಡೆಯಲ್ಲೂ ಪುರುಷ ಕೇಂದ್ರಿತ ವ್ಯವಸ್ಥೆ ಸ್ತ್ರೀಯರ ಸ್ವಾತಂತ್ರ್ಯವನ್ನು ಸೀಮಿತಗೊಳಿಸಿರುವುದನ್ನು ತೇಜಸ್ವಿ ಪರೋಕ್ಷವಾಗಿ ಹೇಳಬಯಸಿದಂತಿದೆ.

'ಗುಡುಗು ಹೇಳಿದ್ದೇನು?' ಕಥೆಯಲ್ಲಿ ಹೆಣ್ಣಿನ ಜೀವಿಸುವ ಹಕ್ಕನ್ನು ಸ್ವಾರ್ಥಕ್ಕಾಗಿ ಕಸಿದುಕೊಳ್ಳುವ ಕ್ರೂರವಾದ ಚಿತ್ರಣ ಕಂಡು ಬರುತ್ತದೆ. ಇಲ್ಲಿನ ಸೋಮಾರಿಗಳಾದ ಸೋಮ ಮತ್ತು ಲಕ್ಕರು ಜಕ್ಕನೂರು ಸುಬ್ಬೇಗೌಡರ ಒಕ್ಕಲುತನವನ್ನು ಬಿಟ್ಟು ಕಡಿದಾಳು ಶಾಮಣ್ಣಗೌಡರ ಬಳಿ ಹೋಗುವ ಸಿದ್ಧತೆಯಲ್ಲಿರುವಾಗ ಮಂಜಪ್ಪನ ಅಪ್ಪ ಬಸ್ಸಿಗೆ ಸಿಕ್ಕು ಸತ್ತದ್ದಕ್ಕೆ ಕೋರ್ಟು ಎರಡು ನೂರು ರೂಪಾಯಿಗಳ ಪರಿಹಾರ ಕೊಡಿಸಿದ ಸಂಗತಿಯಿಂದ ಪ್ರೇರಣೆ ಗೊಂಡು ತಮ್ಮನ್ನು ಸಾಕಿದ ಅಜ್ಜಿಯನ್ನು ಕಾರಿನ ಗಾಲಿಗೆ ನೂಕಿ ಎರಡು ನೂರು ರೂಪಾಯಿ ಪಡೆಯಲು ಮುಂದಾಗಿ ಪರಿಹಾರ ಸಿಗದೆ ಶಪಿಸಿ–ಕೊಳ್ಳುತ್ತಾರೆ. ಮನವೀಯ ಮೌಲ್ಯಗಳು ಸ್ವಾರ್ಥದೆದುರು ನಿಷ್ಪ್ರಯೋಜಕವಾಗುವುದನ್ನು ನಿರೂಪಿಸುವ ಈ ಕಥೆ ಮನುಷ್ಯನ ದುರಂತವನ್ನು ಪ್ರತಿಪಾದಿಸುತ್ತದೆ. ಅಜ್ಜಿಯ ಆಸರೆಯಲ್ಲಿ ಬೆಳೆದ ಮೊಮ್ಮಕ್ಕಳು ಆಕೆಗೆ ಆಸರೆಗೋಲಾಗುವ ಬದಲು ಅವಳನ್ನು

ಬಲಿಕೊಡಲು ಹೊರಡುವುದು ಸ್ವಾರ್ಥದ ನೀಚತನ, ಹೆಣ್ಣಿನ ಜೀವಿಸುವ ಹಕ್ಕನ್ನು ಕಸಿದುಕೊಳ್ಳುವ ಹೃದಯ ವಿದ್ರಾವಕ ಚಿತ್ರಣವನ್ನು ಅದು ಚಿತ್ರಿಸುತ್ತದೆ.

'ಹುಲಿಯೂರಿನ ಸರಹದ್ದು' ಕಥೆಯಲ್ಲಿ ಹೆಣ್ಣಿನ ಮದುವೆಯ ವಿಷಯದಲ್ಲಿ ಆಕೆಯ ಜಾತಿ, ಕುಲ ಅಡ್ಡ ಬಂದು ಅವಳ ಮನಸ್ಸನ್ನು ಅರ್ಥ ಮಾಡಿಕೊಳ್ಳದ ವ್ಯವಸ್ಥೆಯ ಚಿತ್ರಣವಿದೆ. ಇಲ್ಲಿ ಬರುವ ಸೋಮು 'ಅನ್ಯಜಾತಿಯ' ಹುಡುಗಿ ನಳಿನಾಕ್ಷಿಯನ್ನು ಪ್ರೀತಿಸುತ್ತಾನೆ. ಜಾತಿ ಬೇರೆಯದು ಎನ್ನುವ ಕಾರಣ ಮತ್ತು ತಾವು ನೋಡಿದ ಹುಡುಗಿಯನ್ನೆ ಮದುವೆಯಾಗಬೇಕು ಎನ್ನುವ ಕಾರಣಕ್ಕಾಗಿ ಸೋಮುವಿನ ತಂದೆ ಅದನ್ನು ನಿರಾಕರಿಸುತ್ತಾನೆ. ಇಲ್ಲಿ ಹೆಣ್ಣು ಗಂಡುಗಳು ಪರಸ್ಪರ ಇಷ್ಟಪಟ್ಟರೆ ಯಾಕೆ ಮದುವೆಯಾಗಬಾರದು ಎಂಬುದು ತೇಜಸ್ವಿ ಹಾಕುವ ಪ್ರಶ್ನೆ ಎನಿಸುತ್ತದೆ. ಸೋಮು ನಳಿನಾಕ್ಷಿ ಇಷ್ಟಪಟ್ಟರೆ ಓಡಿಹೋಗಬೇಕೆನ್ನುವ ಪ್ರಯತ್ನದಲ್ಲಿರುತ್ತಾನೆ. ನಮ್ಮ ದೇಶದ ಪರಿಸ್ಥಿತಿ ಹೇಗಿದೆಯೆಂದರೆ ಹೆಣ್ಣೊಬ್ಬಳು ಪ್ರೀತಿಸಿದ ಹುಡುಗನನ್ನು ಮದುವೆಯಾಗಲು ಜಾತಿ ಮಾತ್ರವಲ್ಲ ಕುಲ, ಗೋತ್ರ, ನಕ್ಷತ್ರ ಮತ್ತು ವರದಕ್ಷಿಣೆ ಇವೇ ಮೊದಲಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ತೇಜಸ್ವಿ ಇಲ್ಲಿ ಈ ಎಲ್ಲಾ ಸಮಸ್ಯೆ ಮತ್ತು ಒತ್ತಡಗಳನ್ನು ಮೀರಿ ಎಲ್ಲರೂ ಕೇವಲ ಹೆಣ್ಣು ಗಂಡುಗಳಾಗಿ ಮಾತ್ರ ಬದುಕಬಹುದಾದ ಒಂದು ಸಾಮಾಜಿಕ ಪರಿಸರ ಸಿದ್ಧವಾಗಬೇಕು ಎಂದು ಹೇಳಲು ಬಯಸುತ್ತಾರೆ.

'ಊರ್ವಶಿ' ಕಥೆಯಲ್ಲಿ ಬರುವ ಒಂದೇ ಒಂದು ಪ್ರಮುಖ ಸ್ತ್ರೀ ಪಾತ್ರವೆಂದರೆ 'ಸುಭದ್ರ' ಈ ಪಾತ್ರ ಕಾಣಿಸಿಕೊಳ್ಳುವುದು ಒಂದೆಡೆ ಮಾತ್ರ. ಆದರೆ ಕತೆಯ ಉದ್ದಕ್ಕೂ ಈ ಪಾತ್ರದ ಬಗ್ಗೆ ಪ್ರಸ್ತಾಪ ಬರುತ್ತದೆ. ಅಲ್ಲಿ ಬರುವ ಸೋಮು ಅವಳ ಅಂತರಾಳವನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ. "ಅದು ಸರಿ ಸೋಮು, ಬರ್ತೀನಿ, ಈಗ ಹೊತ್ತಾಯ್ತು" "ತೆಪ್ಪಗೆ ನಿಂತಿರುತ್ತಿಯೋ, ನಿನ್ನೆ ಹಾಗೆ ಹೇಳದೆ ಕೇಳದೆ ಸೈಕಲ್ಲು ಹತ್ತಿ ಓಡಲೋ!" "ನೋಡಿ ಇನ್ನು ಮೇಲೆ ಹಾಗೆ ಮಾಡೀರಿ. ಇದನ್ನು ಓದಿ" ಎಂಬುದಾಗಿ ತನ್ನ ಆತ್ಮ ನಿವೇದನೆಯ ರೂಪದ ಕಾಗದವೊಂದನ್ನು ನೀಡಿದಾಗ ಅದನ್ನು ಓದದ ಸೋಮು 'ಎಲಾ ಹಾಳದವಳೆ! ಸ್ವಲ್ಪ ಹರಟೋಣ ಎಂದರೆ ಹೊತ್ತಾಯ್ತಂತೆ ಈ ಕೆಲಸಕ್ಕೆ ಬಾರದ ಹಾಳನ್ನೆಲ್ಲಾ ಈಗ್ಯಾಕೆ ಓದಲಿ ನಾನು?' ಎಂದುಕೊಂಡು ಅದನ್ನು ತನ್ನ ಜೇಬಿನೊಳಕ್ಕೆ ಇಟ್ಟುಬಿಡುತ್ತಾನೆ.

ಇಲ್ಲಿ ಹೆಣ್ಣೊಬ್ಬಳ ಸಂವೇದನೆಗಳಿಗೆ ಸ್ಪಂದಿಸದ ಸೋಮು ಸ್ವೇಚ್ಛೆಯಾಗಿ ವರ್ತಿಸುತ್ತಾನೆ. ಅ ಕ್ಷಣದಲ್ಲಿ ಅಲ್ಲಿಂದ ಹೊರಟು ಹೋದ ಸುಭದ್ರ ಮತ್ತೆ ಅವನ ಕಣ್ಣಿಗೆ ಕಾಣಿಸಿಕೊಳ್ಳುವುದೇ ಇಲ್ಲ.

ಹೀಗೆ 'ಹುಲಿಯೂರಿನ ಸರಹದ್ದು' ಕಥಾ ಸಂಕಲನದಲ್ಲಿನ ಕತೆಗಳಲ್ಲಿ ಸ್ತ್ರೀ ಸಂವೇದನೆಯ ವಿವಿಧ ಮುಖಗಳು ಕಂಡುಬರುತ್ತವೆ. ಆದರೂ ಹೆಣ್ಣಿನ ಅನುಭವಗಳು ಸಮಾಜದಲ್ಲಿ ಬಂಧನದಲ್ಲಿವೆಯೇನೋ ಎಂಬಂತೆ ಸ್ತ್ರೀ ಪಾತ್ರಗಳು ಅಲ್ಲಲ್ಲಿ ಕೇವಲ ಮಿಂಚಿ ಮರೆಯಾಗುತ್ತವೆ. ಇದರಿಂದ ತಿಳಿಯುವುದೇನೆಂದರೆ ಅಂದಿನ ಸಮಕಾಲೀನ ಸಮಾಜ ಹೆಣ್ಣಿನ ಅನುಭವ ಲೋಕವನ್ನು ಬಚ್ಚಿಡುವುದರಲ್ಲೇ ತಲ್ಲೀನವಾಗಿತ್ತು ಎನಿಸುತ್ತದೆ.

ಅಬಚೂರಿನ ಪೋಸ್ಟಾಫೀಸು: ಹುಲಿಯೂರಿನ ಸರಹದ್ದು ಪ್ರಕಟವಾದ ಹತ್ತು ವರ್ಷಗಳ ತರುವಾಯ ಬಂದ ಕಥಾ ಸಂಕಲನ 'ಅಬಚೂರಿನ ಪೋಸ್ಟಾಫೀಸು' ಕನ್ನಡ ಸಹಿತ್ಯದ ನವ್ಯ ಸಂಪ್ರದಾಯವನ್ನು ಸಂಪೂರ್ಣ ತೊರೆದು ಬರೆದ ಕತೆಗಳು. 'ಅಬಚೂರಿನ ಪೋಸ್ಟಾಫೀಸು' ಸಂಕಲನದ ಹಿಂದಿನ ಬರವಣಿಗೆಯಲ್ಲಿ ತೇಜಸ್ವಿಯವರ ಲಕ್ಷ್ಯ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪ್ರಶ್ನೆಗಳಿಗಿಂತ ಹೆಚ್ಚಾಗಿ ವ್ಯಕ್ತಿಯ ಭಾವ ತುಮುಲಗಳತ್ತ ಇತ್ತು. ಹಾಗಾಗಿ ಅಲ್ಲಿ ಸ್ತ್ರೀ ಸಂವೇದನೆಗಳಿಗೆ ಹೆಚ್ಚು ಅವಕಾಶವೇ ಇರಲಿಲ್ಲ. 'ಹುಲಿಯೂರಿನ ಸರಹದ್ದು' ಸಂಕಲನದ ಎಲ್ಲ ಕತೆಗಳಲ್ಲಿ ಮುಖ್ಯವಾಗಿ ಕೌಟುಂಬಿಕ ಪರಿಸರವೇ ಹೆಚ್ಚಾಗಿ ಕಂಡುಬರುತ್ತದೆ. ಹಾಗೆಯೇ ಅಲ್ಲಿನ ಸಮಸ್ಯೆಗಳು ಕೂಡ ಸಾಂದರ್ಭಿಕವಾದವುಗಳಾಗಿವೆ. ತೇಜಸ್ವಿ ವರ್ತಮಾನದ ಹಿನ್ನೆಲೆಯಲ್ಲಿ ಮತ್ತು ವಾಸ್ತವತೆಯ ಹಿನ್ನೆಲೆಯಲ್ಲಿ ಸಂವೇದನೆಗಳನ್ನು ತರಲು ಪ್ರಯತ್ನಿಸುತ್ತಾರೆ.

'ಅಬಚುರಿನ ಪೋಸ್ಟಾಫಿಸು ತೇಜಸ್ವಿಯವರ ಪ್ರಮುಖವಾದ ಕಥೆಗಳಲ್ಲಿ ಒಂದು. ಇಲ್ಲಿ ಬರುವ ಸ್ತ್ರೀ ಪಾತ್ರಗಳೆಲ್ಲವೂ ದುಡಿಯುವ ವರ್ಗಕ್ಕೆ ಸೇರಿದವುಗಳು. ಬೋಬಣ್ಣನ ಹೆಂಡತಿ ಕಾವೇರಿ ಮತ್ತು ಅವನ ಅತ್ತೆ ಮಾಚಮ್ಮ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾ ಹೋಗುತ್ತಾರೆ. ಗಂಡನನ್ನು ಕಳೆದುಕೊಂಡು ವಿಧವೆಯಾದ ಮಾಚಮ್ಮ ತನ್ನ ಮಗಳಾದ ಕಾವೇರಿಯನ್ನು ಕಷ್ಟ ಪಟ್ಟು ದುಡಿದು ಸಾಕುತ್ತಾಳೆ. ಮಗಳನ್ನು ಬೇರೆಯವರಿಗೆ ಮದುವೆ ಮಾಡಿದರೆ ಮುಪ್ಪಿನಲ್ಲಿ ತನಗೆ ಆಗುವವರು ಯಾರು ಎಂದು ಕೊರಗುತ್ತಿರುತ್ತಾಳೆ. ಅಂತಹ ಸಂದರ್ಭದಲ್ಲಿ ಸಂಬಂಧಿಕನೇ ಆದ ಬೋಬಣ್ಣನಿಗೆ ತನ್ನ

ಮಗಳು ಕಾವೇರಿಯನ್ನು ಕೊಟ್ಟು ಮದುವೆ ಮಾಡಿ ತನ್ನ ಮನೆಯಲ್ಲೇ ಇರಿಸಿಕೊಳ್ಳುತ್ತಾಳೆ. ವಯಸ್ಸಾದ ಹೆಂಗಸಿನ ಮಾನಸಿಕ ತುಮುಲಗಳೆಲ್ಲವೂ ಮಾಚಮ್ಮ-ನಲ್ಲಿ ಕಂಡುಬರುತ್ತವೆ. ಪ್ರಾರಂಭದಲ್ಲಿ ತನ್ನ ಮಗಳನ್ನು ಮದುವೆ ಮಾಡಿದರೆ ಮಗಳು ಗಂಡನ ಮಾತನ್ನು ಕೇಳಿ ಅವನ್ನ ಓಲೈಸುತ್ತಾ ಬೇರೆ ಹೊದರೆ ತನ್ನ ಮುಪ್ಪಿನ ಸಮಯದಲ್ಲಿ ತಾನೇನು ಮಾಡುವುದು? ಎಂಬ ಭಯವಿದ್ದ ಕಾರಣ ಕಾವೇರಿಗೆ ಮದುವೆ ಮಾಡುವುದಕ್ಕೆ ಇಷ್ಟವಿರಲಿಲ್ಲ. ಈ ಕಾರಣದಿಂದ ಬೋಬಣ್ಣನನ್ನು ಮಗಳಿಗೆ ತಂದುಕೊಂಡು, ಸೂಕ್ಷ್ಮವಾಗಿ ಕಾವೇರಿಯ ಮೇಲಿನ ಪ್ರೀತಿ, ತನ್ನ ಮೇಲಿನ ಗೌರವ ಎರಡೂ ಜೊತೆಜೊತೆಯಾಗಿ ವೃದ್ಧಿಯಾಗುವಂತೆ ನೋಡಿಕೊಂಡಿದ್ದಳು.

"ತನ್ನ ಮನೆ ಯಾವಾಗಲೂ ಒಂದು ಬಗೆಯ ಗಾಂಭೀರ್ಯದಿಂದಿರುವಂತೆ ನೋಡುತ್ತಾ ಪೂಜೆ ಪುನಸ್ಕಾರಗಳಲ್ಲೇ ತೊಡಗಿ ಬೋಬಣ್ಣ ಹಾಸ್ಯ ಕುಚೋದ್ಯಗಳಿಲ್ಲದೆ ಗಂಭೀರನಾಗಿರುವಂತೆ ನೋಡಿಕೊಂಡಿದ್ದಳು. ಇಂತದರಲ್ಲಿ ಬೋಬಣ್ಣ ಚೇಷ್ಠೆ, ಅವನ ಕಾಮುಕತೆಗಳು ಮಾಚಮ್ಮನಿಗೆ ಭಯಂಕರ ಅಧಿಕ ಪ್ರಸಂಗಗಳಾಗಿ ಕಂಡವು. ಇದು ಹೀಗೆ ಮುಂದುವರೆದರೆ ಬೋಬಣ್ಣ ತನ್ನ ಮನೆಯಲ್ಲೇ ಉಳಿದರು ಕೂಡ ತನ್ನ ಯಜಮಾನಿಕೆಗೆ ಸಂಚಕಾರ ಬರುತ್ತದೆ. ಅಥವಾ ಬೋಬಣ್ಣ ಕಾವೇರಿಯನ್ನು ಕರೆದೊಯ್ದು ತನ್ನನ್ನು ಅನಾಥೆಯನ್ನಾಗಿ ಮಾಡುತ್ತಾನೆ. ಈ ಎರಡರಲ್ಲಿ ಒಂದು ಆಗುತ್ತದೆ ಎಂದು ಬಗೆದಳು"[೧] ಹೀಗೆ ಮಾಚಮ್ಮಳ ಮಾನಸಿಕ ಒಳತೋಟಿಯು ತನ್ನ ಮಗಳು ತನ್ನಿಂದ ದೂರಾದಲ್ಲಿ ತಾನು ಮುಪ್ಪಿನಲ್ಲಿ ಒಂಟಿಯಾಗಿ ಆಸರೆ ಇಲ್ಲದವಳಾಗುತ್ತೇನೆ ಎಂಬುದಾಗಿ ಕುದಿಯುತ್ತಿರುತ್ತದೆ.

ಬೋಬಣ್ಣ ಕಾವೇರಿಯ ಜೊತೆಯಲ್ಲಿ ಹಾಡಹಗಲೇ ಸರಸ ಸಲ್ಲಾಪದಲ್ಲಿ ತೊಡಗಿದಾಗ ಮಾಚಮ್ಮ ಒಂದು ದಿನ "ಕಾವೇರಿ ನಿನಗೆ ಬಾಳ ದಿನದಿಂದ ಹೇಳಬೇಕೆಂದಿದ್ದೆ ಬೋಬಣ್ಣ ಹಾಗೇಕೆ ಈಚೆಗೆ ಚೆಲ್ಲು ಚೆಲ್ಲಾಗಿ ಮಾಡುತ್ತಾನೆ. ಮಕ್ಕಳ ಎದುರು ದೇವರ ಎದುರು ಎಲ್ಲಾ ಒಂದೇ ತರ ಮಾಡೋದೆ ನಿನಗೆ ನಾನೇನು ಹೇಳಬೇಕಾಗಿಲ್ಲ. ನೀನು ಕಷ್ಟ ಸುಖ ನೋಡಿದವಳು ಅವರು ತೀರಿಕೊಂಡ ಮೇಲೆ ನಾನು ಏನೇನು ಕಷ್ಟಪಡುತ್ತಿದ್ದೇನೆ. ನಿನ್ನನ್ನು ಹೇಗೆ ಸಾಕಿದೆ ನೀನೆ ನೋಡಿದ್ದೀಯೆ.

೧. ಅಬಚೂರಿನ ಪೋಸ್ಟಾಫೀಸು, ಪುಟ. ೫

ಹಾಗೇ ನಿನ್ನ ಮಕ್ಕಳನ್ನೂ ನೀನೂ ಮುಂದೆ ತರಬೇಕು"[೧] ಎಂದು ಹೇಳುವಲ್ಲಿ ತನ್ನ ಮಗಳು ಅಳಿಯ ತನ್ನ ಹದ್ದುಬಸ್ತಿನಲ್ಲಿ ಇರಬೆಕು ಎನ್ನುವ ಅವಳ ಮನೋಭಿಲಾಷೆ ವ್ಯಕ್ತವಾಗುತ್ತದೆ.

ಬೇಲಾಯದನ ಮಗಳು ಪದ್ಮಿಯ ಬಗೆಗಿನ ಅಪಪ್ರಚಾರದ ಕಾಗದದ ಪ್ರಕರಣದಿಂದಾಗಿ ಘೋಸ್ಟಾಫೀಸಿನ ಮುಂದೆ ಬಂದು ಎಲ್ಲರೂ ಗಲಾಟೆ ಮಾಡುತ್ತಿರುವಾಗ ಮಾಚಮ್ಮ "ಊರಿನ ಪಂಚಾಯ್ತಿಗೆ ಯಾಕೆ ಮೂಗು ಹಾಕಬೇಕು. ನನ್ನ ಮನೆ ಘೋಸ್ಟಾಪೀಸು ಮಾಡಿ ನನ್ನ ಮರ್ಯಾದೆ ಎಲ್ಲಾ ತೆಗೆಯುತ್ತಿದ್ದಾನೆ. ಈ ಘೋಸ್ಟಾಫೀಸು ಬಂದು ಊರಿಗೇ ಅನಿಷ್ಟ ಹಿಡಿದಿದೆ"[೨] ಎಂದು ಕೂಗಾಡತೊಡಗುತ್ತಾಳೆ. ಇಲ್ಲಿ ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ತನ್ನ ಮನೆಯ ಗಂಡಸು ಕುಟುಂಬದ ಹೊರಗಿನ ವ್ಯಾಜ್ಯಗಳಿಗೆ ತಲೆಹಾಕಿ ಕಲಹ ತಂದಿಡುವುದನ್ನು ಯಾವೊಬ್ಬ ಹೆಂಗಸು ಕೂಡ ಸಹಿಸುವುದಿಲ್ಲ. ಆ ಕಾರಣದಿಂದಾಗಿ ಮಾಚಮ್ಮ ಬೊಬಣ್ಣನ ಮೇಲೆ ಸಿಟ್ಟಾಗುತ್ತಾಳೆ.

ಇನ್ನು ಈ ಕಥೆಯ ಮತ್ತೊಂದು ಬಹುಮುಖ್ಯ ಸ್ತ್ರೀ ಪಾತ್ರವಾದ ಬೋಬಣ್ಣನ ಹೆಂಡತಿ ಕಾವೇರಿ ಗುಪ್ತಗಾಮಿನಿಯಾಗಿ ಹರಿಯುವ ದುರಂತ ವ್ಯಕ್ತಿಯಂತೆ ಕಂಡುಬರುತ್ತಾಳೆ. ಕಾವೇರಿ ತನಗೆ ಅರಿವಿದ್ದೋ, ಅರಿಯದೆಯೋ ಹಲವು ಇಕ್ಕಟ್ಟುಗಳಲ್ಲಿ ಸಿಲುಕಿಕೊಂಡು ಒಂದು ರೀತಿಯ ದುರಂತ ಪಾತ್ರವಾಗಿ ಕಂಡುಬರುತ್ತಾಳೆ. ತನ್ನನ್ನು ಕಷ್ಟಪಟ್ಟು ಸಾಕಿ ಸಲುಹಿದ ತಾಯಿ ಒಂದು ಕಡೆಯಾದರೆ ಗಂಡ ಮತ್ತೊಂದು ಕಡೆ ಇವರಿಬ್ಬರ ನಡುವೆ ಸಿಲುಕಿ ಕಾವೇರಿ ತತ್ತರಿಸುತ್ತಾಳೆ. ತಾನು ಕಷ್ಟಪಟ್ಟು ಸಾಕಿದ ಮಗಳು ಗಂಡನ ಸರಸಸಲ್ಲಾಪಗಳಿಗೆ ಓಲೈಸಿಯೋ, ಗಂಡನ ಮಾತನ್ನು ಕೇಳಿಯೋ ಬೇರೆ ಹೋದರೆ ತನಗೆ ಮುಪ್ಪಿನ ಸಮಯದಲ್ಲಿ ಆಗುವವರಾರು ಎಂಬ ತುಮುಲದಿಂದ ಕಾವೇರಿಯನ್ನು ಆಗಾಗ ಎಚ್ಚರಿಸುತ್ತಾ ತನ್ನ ಮಾತನ್ನು ಕೇಳುವ ಹಾಗೆ ಮಾಡಿಕೊಳ್ಳುತ್ತಾಳೆ. ಮತ್ತೊಂದೆಡೆಯಲ್ಲಿ ಅತ್ತೆಯ ಹೆದರಿಕೆ, ಭಯ ಅಥವಾ ಅವಳ ಮೇಲಿನ ಗೌರವದ ಅತಿರೇಕರಿಂದಲೋ, ತನ್ನ ಹೆಂಡತಿಯ ನಗ್ನತೆಯ ಸ್ಪರ್ಶದ ಅರಿವಿದ್ದೂ ಯಾವತ್ತೂ ಬೆಳಕಿನಲ್ಲಿ ಕಂಡೇ ಇರದ ಅವಳ ಗಂಡ ಬೋಬಣ್ಣ ಅನಾಮಿಕ

---

೧. ಅಬಚೂರಿನ ಘೋಸ್ಟಾಫೀಸು, ಪುಟ. ೧೭

೨. ಅದೇ, ಪುಟ. ೫

ಕಾಗದವೊಂದನ್ನು ಕದ್ದು ನೋಡಿ ಹೆಣ್ಣೊಬ್ಬಳ ಅರೆನಗ್ನ ಚಿತ್ರವೊಂದನ್ನು ನೋಡಿದ್ದರ ಪರಿಣಾಮವಾಗಿ ಹಾಡಹಗಲೇ ಹೆಂಡತಿಯ ಜೊತೆ ಕಾಮಚೇಷ್ಟೆಯಲ್ಲಿ ತೊಡಗುತ್ತಾನೆ. ಆದರೆ ಎರಡು ಮಕ್ಕಳ ತಾಯಿಯಾಗಿದ್ದ ಅವಳಿಗೆ ಬೋಬಣ್ಣನ ಚೇಷ್ಟೆಗಳು ಚರ್ಯೆಗಳು ನಾಚಿಕೆಯಾಗುವಂತೆ ಮಾಡುತ್ತವೆ. ಜೊತೆಗೆ ಗಾಬರಿಯೂ ಆಗುತ್ತಾಳೆ. ಕಾರಣ ಇದು ಮಗಳು ಕೊಂಚ ದೊಡ್ಡವಳಿದ್ದ ಮಗಳ ಮೇಲೆ ಪರಿಣಾಮ ಬೀರಬಹುದು ಎಂಬ ಗಾಬರಿಯಿಂದ. ಹಾಗಾಗಿ ಗಂಡನ ಮೇಲೆ ಕೊಸರಾಡಿ ಅವನಿಂದ ಬಿಡಿಸಿಕೊಂಡು ದೂರ ಹೋಗುತ್ತಾಳೆ.

ಕಾವೇರಿಯ ತಾಯಿ ಮಾಚಮ್ಮ ಬೋಬಣ್ಣನ ಚೇಷ್ಟೆಗಳನ್ನು ಗಮನಿಸಿ ಮಗಳಿಗೆ ಬುದ್ಧಿಮಾತು ಹೇಳುತ್ತಾಳೆ. ಆಗ ಕಾವೇರಿ "ಹೌದಮ್ಮಾ ನೀನೇ ನನ್ನನ್ನು ಸಾಕಿದವಳು, ನೀನೇ ನನ್ನ ಮದುವೆ ಮಾಡಿದವಳು. ನೀನೇ ಒಂದು ಮಾತು ಹೇಳಿಬಿಡು. ನನಗೆ ಹೇಳಲಿಕ್ಕೆ ಒಂದು ತರಾಗುತ್ತೆ" ಎನ್ನುತ್ತಾಳೆ.[೧] ಇಂಥ ಸನ್ನಿವೇಶಗಳಿಂದ ಬೋಬಣ್ಣನ ಮೇಲೆ ಕೋಪಗೊಂಡ ಕಾವೇರಿ ಗಂಡಸಿನ ಜಾತಿಯೇ ಹೀಗೆ ಎಂದು ಪುರುಷ ಜಾತಿಯನ್ನು ನಿಂದಿಸುತ್ತಾಳೆ. ಇಲ್ಲಿ ತನಗೂ ಒಂದು ಮನಸ್ಸಿದೆ ಆ ಮನಸ್ಸನ್ನು ಗಂಡನಾದವನು ಅರ್ಥಮಾಡಿಕೊಳ್ಳದೆ, ಕೇವಲ ಭೋಗದ ವಸ್ತುವಾಗಿ ನೋಡುವ ಬಗ್ಗೆ ಕಾವೇರಿ ಕ್ರೋಧಗೊಳ್ಳುತ್ತಾಳೆ. ಅದಕ್ಕೆ ಕಾರಣ ಮಕ್ಕಳು ಅತ್ತರೂ ಎದ್ದು ಹೋಗಲು ಬಿಡದೆ ಶೃಂಗಾರ ಚೇಷ್ಟೆಗಳಲ್ಲಿ ತೊಡಗುವ ಗಂಡನ ಗುಣ.

ಬೋಬಣ್ಣ ಪೋಸ್ಟಾಫಿಸಿನ ವ್ಯವಹಾರಗಳ ನಡುವೆ ಗುಂಪುಗೂಡಿ ಎಲ್ಲರ ಜೊತೆಯಲ್ಲಿ ಹರಟೆ ಹೊಡೆಯಲು ತೊಡಗುತ್ತಾನೆ. ಆದರೆ ಮಾಚಮ್ಮನಿಗೆ ವಿನಾಕಾರಣ ಹರಟೆ ಹೊಡೆಯುವುದು ಇಷ್ಟವಿರದೇ ಬೋಬಣ್ಣನನ್ನು ನಿಂದಿಸ-ತೊಡಗುತ್ತಾಳೆ. ಇಂತಹ ಅಮ್ಮನಿಗೆ ಬೇಸರ ಮಾಡುವ ಗಂಡನ ಮೇಲೆ ಕಾವೇರಿಗೂ ಸಿಟ್ಟು ಅಧಿಕವಾಗುತ್ತದೆ. "ಕಾವೇರಿ, ಬೋಬಣ್ಣ ಅಮ್ಮನಿಗೆ ಬೇಜಾರು ಮಾಡುತ್ತಿದ್ದಾನಲ್ಲಾ ಎಂದು ಬೇಜಾರು ಮಾಡಿಕೊಂಡಿದ್ದಳು. ಬೋಬಣ್ಣನ ಮೇಲೆ ಒಂದು ಬಗೆಯ ಬಲಾತ್ಕಾರದ ಸೇಡನ್ನು ಬೆಳೆಸಿಕೊಳ್ಳತೊಡಗಿದಳು. ಬೋಬಣ್ಣನನ್ನು ಪ್ರೀತಿಯಿಂದ ಆಲಂಗಿಸಿವರೆ ಅವಳಿಗೆ ಅಮ್ಮನಿಗೆ ದ್ರೋಹ ಬಗೆದಂತಾಗುತ್ತಿದ್ದಿತು. ದಿನಾ ರಾತ್ರಿ ಏನಾದರೊಂದು ಜಗಳ ತೆಗೆದು ಮುಖ ತಿರುಗಿಸಿ ಮಲಗತೊಡಗಿದಳು. ...

---

೧. ಅಬಚೂರಿನ ಪೋಸ್ಟಾಫೀಸು, ಪುಟ. ೫

ಒಂದು ದಿನ ಕಾವೇರಿ ಬೋಬಣ್ಣನನ್ನು ಆಲಂಗಿಸಿಕೊಂಡಿದ್ದವಳು ಹಾಗೇ ಎಚ್ಚರವಾದಂತಾಗಿ ಬೋಬಣ್ಣನನ್ನು ದೂಡಿ ಆ ಕಡೆ ತಿರುಗಿ ಮಲಗಿದಳು"[೧]

ಇಂಥ ಇಕ್ಕಟ್ಟಿನ ಪರಿಸ್ಥಿತಿಯೊಳಗೆ ಕಾವೇರಿ ಸಿಲುಕಿಕೊಂಡು ತಾಯಿಯ ಕಡೆಗೆ ಹೆಚ್ಚು ಒಲವು ತೋರಿಸುತ್ತಾ ಗಂಡನನ್ನು ತಿರಸ್ಕರಿಸತೊಡಗುತ್ತಾಳೆ. ಕೊನೆಗೆ ಗಂಡ ಊರನ್ನೇ ಬಿಟ್ಟು ಹೋದಾಗ ತಾಯಿಯ ಜೊತೆಯಲ್ಲಿ ತೋಟದ ಕೆಲಸಕ್ಕೆ ಹೋಗುತ್ತಾಳೆ.

ಹೀಗೆ ಇಡೀ ಕಥೆಯಲ್ಲಿ ಕೌಟುಂಬಿಕ ಪರಿಸರದೊಳಗೆ ಸ್ತ್ರೀ ಸಂವೇದನೆಯ ಹೊಳಹುಗಳು ವಿಸ್ತರಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಗಂಡಿನ ಆಸರೆ ಇಲ್ಲದೆಯೂ ಹೆಣ್ಣು ಬದುಕಬಹುದು, ಬದುಕಬಲ್ಲೆವು ಎಂಬ ಧ್ವನಿಯು ಕಥೆಯಲ್ಲಿ ಮಾಚಮ್ಮ, ಕಾವೇರಿ ಪಾತ್ರಗಳ ಮೂಲಕ ಧ್ವನಿತವಾಗುತ್ತದೆ. ಇಂತಹ ಸಂವೇದನೆ–ಗಳನ್ನು ತೇಜಸ್ವಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

'ಅವನತಿ', ತೇಜಸ್ವಿಯವರ ಸೂಕ್ಷ್ಮ ಚಿಂತನೆಯನ್ನು ಸಾರುವ ಮತ್ತೊಂದು ಪ್ರಮುಖ ಕಥೆಯಾಗಿದೆ. ಗ್ರಾಮೀಣ ಪರಿಸರದಲ್ಲಿ ನಮ್ಮ ಅರಿವಿಗೆ ಬಂದೋ ಬಾರದೆಯೋ ಬದುಕಿನ ಅನೇಕ ಚಿತ್ರಣಗಳು ಅವನತಿ ಹೊಂದುತ್ತವೆ. ಅದರಲ್ಲಿ ಹೆಣ್ಣಿನ ಸೌಂದರ್ಯವೂ ಗ್ರಾಮ್ಯರ ಅಜ್ಞಾನದಿಂದಾಗಿ ಅವನತಿ ಹೊಂದುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ತೇಜಸ್ವಿ ಎಲ್ಲಿ ಹಿಡಿದಿಟ್ಟಿದ್ದಾರೆ. ಹೆಣ್ಣಿಗೆ ಮಕ್ಕಳಾಗದಿದ್ದರೆ ಜನಿಸಿದ ಮಕ್ಕಳು ಬದುಕದಿದ್ದರೆ ಅವಳಲ್ಲಿಯೇ ದೋಷವಿದೆ ಎಂದು ಅವಳ ಮೇಲೆ ಅಮಾನುಷವಾಗಿ ಆರೋಪ ಹೊರಿಸುವ ದುರಂತ ಚಿತ್ರಣಗಳು ಗ್ರಾಮ್ಯ ಪ್ರದೇಶದಲ್ಲಿ ಕಂಡುಬರುತ್ತವೆ. ಇಂಥ ಮೌಢ್ಯಗಳಿಗೆ ಹೆಣ್ಣು ಬಲಿಯಾಗುತ್ತಿರುವುದನ್ನು ತೇಜಸ್ವಿ ಕತೆಯಲ್ಲಿ ಬರೆಯದೆಯೇ ಖಂಡಿಸುತ್ತಾರೆ.

'ಅವನತಿ' ಕಥೆಯೊಳಗೆ ಬರುವ ಗ್ರಾಮೀಣ ಪ್ರದೇಶದಲ್ಲಿನ ಕುಟುಂಬವು ಭಾರತೀಯ ಸಾಂಪ್ರದಾಯಿಕ ಕುಟುಂಬದಂತೆ ಕಂಡುಬರುತ್ತದೆ. ಇಲ್ಲಿ ಹೆಣ್ಣಿನ ಭಾವನೆಗಳಿಗೆ ಬೆಲೆಯೇ ಇಲ್ಲ. ಪುರುಷ ಹೆಣ್ಣನ್ನು ತನಗೆ ಬೇಕೆಂದ ಹಾಗೆ ನಡೆಸಿಕೊಳ್ಳುವ ಪದ್ಧತಿ ಇದೆ. ಇಲ್ಲಿ ಬರುವ ಸುಬ್ಬಯ್ಯನ ಹೆಂಡತಿ ಗೌರಿ ಅಪೂರ್ವ ಸೌಂದರ್ಯವತಿ. ಅವಳ ಚಿತ್ರಣ, ಕಥೆಯಲ್ಲಿ ಹೀಗೆ ಬರುತ್ತದೆ.

---

೧. ಅಬಚೂರಿನ ಪೋಸ್ಟಾಫೀಸು, ಪುಟ. ೧೧

"ಅಲ್ಲಿ ಗೌರಿ ಒಂದು ಆಶ್ಚರ್ಯಾದ್ಭುತವಾಗಿದ್ದಳು. ಸೌಂದರ್ಯದಲ್ಲಿ ಸಕಲ ಶಿಲ್ಪಶಾಸ್ತ್ರ ಲಕ್ಷಣಗಳ ಅವತಾರದಂತೆ ಕಾಣುತ್ತಿದ್ದಳು. ಮೂಗು, ಕಣ್ಣು, ಹುಬ್ಬು, ಕೂದಲು, ತುಟಿ, ರೇಖೆಗಳು, ಕತ್ತು, ಸ್ತನಗಳು, ನಡುಕಾಯ ಎಲ್ಲ ಇನ್ನೇನು ಮಾಡಿಯೂ ಅವಳ ಸೌಂದರ್ಯವನ್ನು ಹೆಚ್ಚಿಸದಷ್ಟು ಅದ್ಭುತ ಸಾಮರಸ್ಯದಲ್ಲಿ ಮಿಳಿತವಾಗಿದ್ದವು. ಅದಕ್ಕಿಂತ ಮಿಗಿಲಾಗಿ ಆಕೆಯ ನಡೆ, ಚರ್ಯೆ, ನಿಲ್ಲುವ, ನಡೆಯುವ ಭಂಗಿ ಇವುಗಳ ವಿನ್ಯಾಸವಂತೂ ಸೌಂದರ್ಯವೇ ಛಂದೋಬದ್ಧವಾದಂತೆ ಕಾಣುತ್ತಿತ್ತು. ಕುಳಿತರೆ, ನಿಂತರೆ, ನಕ್ಕರೆ, ಒಂದೊಂದು ಸಾರಿಯೂ ಒಂದೊಂದು ಸಾಕ್ಷಾತ್ಕಾರವಾದಂತಾಗುತ್ತಿತ್ತು. ಆದರೆ ಯಾರಿಗೆ ಆಗುತ್ತಿತ್ತು ಎನ್ನುವುದು ಮಂತ್ರ ಸಂಶಯಾಸ್ಪದ ಪ್ರಶ್ನೆ. ಏಕೆಂದರೆ ಯಾರಿಗೂ ಅದರತ್ತ ಗಮನವೇ ಇರಲಿಲ್ಲ"[೧] ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಸೌಂದರ್ಯವತಿಯಾಗಿದ್ದರೂ ಕಷ್ಟ, ಕುರೂಪಿ-ಯಾಗಿದ್ದರೂ ಕಷ್ಟ. ಹಾಗಾಗಿ ಗೌರಿಯ ಸೌಂದರ್ಯವನ್ನು ಗುರುತಿಸಲಾರದ, ಆ ಅಭಿಮಾನವನ್ನು ತನ್ನದಾಗಿಸಿಕೊಳ್ಳಲಾರದ ಇಸ್ಲಾಪುರದ ದುರಂತ ಇಲ್ಲಿ ಆಗಿದೆ.

ಗೌರಿಗೆ ಹುಟ್ಟುವ ಮಕ್ಕಳು ವಾರದಲ್ಲೇ ಸಾಯುವುದಕ್ಕೆ ಊನ ತನ್ನಲ್ಲಿಲ್ಲ, ಗೌರಿಯಲ್ಲೇ ಇದೆ ಎಂದು ಸಾರ್ವಜನಿಕವಾಗಿ ಸಾಬೀತಾಗಲೆಂದು ಒಳಗೊಳಗೇ ಬಯಸುತ್ತಿರುವ ಅವಳ ಗಂಡ ಸುಬ್ಬಯ್ಯ 'ಇದು ಮೊಲೆ ದೋಸಾನೆ' ಎಂದು ಸೂರಾಚಾರಿ ಹೇಳಿಬಿಟ್ಟಮೇಲಂತೂ ಅವನ ಒಳಬಯಕೆಗೆ ಬಾಯಿ ಸಿಕ್ಕಂತಾಗುತ್ತದೆ. ಅವಳ ಮೊಲೆಯ ಮೇಲಿನ ನೀಲಿ ನರಕ್ಕೆ ಅರಿಶಿನ ಕೊಂಬಿನ ಕೆಂಡಮಾಡಿ ಸುಡಬೇಕೆಂದು ಸೂರಾಚಾರಿ ಹೇಳುವುದರೊಂದಿಗೆ ಅವಳ ಸೌಂದರ್ಯವನ್ನು ಹಾಳುಗೆಡುವುದಕ್ಕೆ ತಯಾರಿ ಆಗುತ್ತವೆ. ಹೆಣ್ಣಿನ ಮನಸ್ಸಿನ ಭಾವನೆಗಳಿಗೆ ಬೆಲೆ ನೀಡದೆ ಅವಳ ಮನಸ್ಸು ಮತ್ತು ಸೌಂಧರ್ಯವೆರಡನ್ನೂ ದುರಂತದ ಮಡುವಿಗೆ ತಳ್ಳುವ ಚಿತ್ರಣದ ಅಭಿವ್ಯಕ್ತಿ ಇಲ್ಲಿದೆ.

ಹುಟ್ಟಿದ ಮೂರು ಮಕ್ಕಳೂ ಮಲೆನಾಡಿನ ಶೀತಕ್ಕೊ, ಮಳೆಗಾಲದ ವಾತಾವರಣಕ್ಕೊ ಅವು ಶೈಶವಾವಸ್ಥೆಯಲ್ಲೇ ಹುಟ್ಟಿದ ಕೂಡಲೇ ತೀರಿಕೊಳ್ಳುತ್ತಿದ್ದವು. ಇದರ ಅರಿವಿದ್ದ ಗೌರಿ ಮುಂದಿನಸಾರಿ ಬಸುರಾದಾಗ ಬಯಲು ಸೀಮೆಗೆ ಹತ್ತಿರವಿರುವ ಮಳೆ ಕಡಿಮೆ ಇರುವ ತನ್ನ ತವರು ಮನೆಗೆ ಹೋಗಲು ನಿರ್ಧರಿಸುತ್ತಾಳೆ.

---

೧. ಅಬಚೂರಿನ ಪೋಸ್ಟಾಫೀಸು, ಪುಟ. ೨೫

ಹೆಣ್ಣಾದವಳಿಗೆ ಹೆಣ್ತನವೆಂಬುದು ಎಷ್ಟು ಸ್ವಾಭಾವಿಕವೋ ತಾಯ್ತನವೆಂಬುದೂ ಅಷ್ಟೇ ಸ್ವಾಭಾವಿಕ. ಮಕ್ಕಳು ಬದುಕದಿದ್ದಾಗ ಹೆಣ್ಣು ದುಃಖಿತಳಾಗುತ್ತಾಳೆ. ಆದರೆ ಅನೇಕ ಮೌಢ್ಯಗಳ ಪರಿಣಾಮವಾಗಿ ಎಲ್ಲದಕ್ಕೂ ತಾನೇ ಆರೋಪವನ್ನು ಹೊರುವ ಸ್ಥಿತಿ ಗ್ರಾಮೀಣ ಪ್ರದೇಶಗಳಲ್ಲಿದೆ.

ಗ್ರಾಮೀಣ ಕುಟುಂಬಗಳಲ್ಲಿನ ಮಹಿಳೆಯರು ಮನೆಯ ಹೊರಗೆ ದುಡಿಯು-ವಂತೆ ಸಂತೆಯ ವ್ಯಾಪಾರ ವಹಿವಾಟುಗಳಿಗೆ ತೆರಳುತ್ತಾರೆ. ಸಾಮಾನ್ಯವಾಗಿ ಹಾಗೆ ಹೋಗುವಾಗ ತಮ್ಮ ನೆರೆಹೊರೆಯ ಇತರೆ ಮಹಿಳೆಯರೊಡಗೂಡಿ ತೆರಳುತ್ತಾರೆ. ಹೊಲಗದ್ದೆಗಳಲ್ಲಿ ದುಡಿಯುವಾಗ ಮತ್ತು ಇಂತಹ ಸನ್ನಿವೇಶಗಳಲ್ಲಿ ಹೆಣ್ಣಿನ ವೈಯಕ್ತಿಕ ವಿಚಾರಗಳನ್ನು ಮಾತನಾಡುತ್ತಾರೆ. ಹಾಗೆಯೇ 'ಅವನತಿ' ಕಥೆಯಲ್ಲಿಯೂ ಗೌರಿ-ಯೊಡಗೂಡಿ ಸಂತೆಗೆ ತೆರಳುವ ಸೀತಮ್ಮ ಮತ್ತು ಇತರೆ ಹೆಂಗಸರು ತಮ್ಮ ವೈಯಕ್ತಿಕ ಸಂಗತಿಗಳನ್ನು ಹರಟುತ್ತಾ ಹೋಗುತ್ತಾರೆ. ಅವರಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅವಕಾಸ ದೊರೆಯುವುದು ಆಗಲೇ. ಹಲವಾರು ಸನ್ನಿವೇಶಗಳಲ್ಲಿ ಹೆಣ್ಣು ನಾಚಿಕೆಯನ್ನು ಹೊರಹಾಕುತ್ತಾಳೆ. ಸಂತೆಮಾಳದ ದಾರಿಯಲ್ಲಿ, ಈಚಲುಮರದ ಮುಳ್ಳು ಹೊಡೆದು ಗಾಯವಾಗಿರುವ ಕಣ್ಣಿಗೆ ಬಿಟ್ಟುಕೊಳ್ಳಲು ತನ್ನ ಮೊಲೆ ಹಾಲು ಕೇಳಿರುವ ಮಾವನಿಗಾಗಿ ಪುಟ್ಟ ಹುಡುಗ ವಿಶ್ವನಾಥನ ಹತ್ತಿರ ಒಳಲೆಯಲ್ಲಿ ಹಾಲು ಹಿಂಡಿಕೊಡುತ್ತಿದ್ದ ಗೌರಿಯ ಪ್ರಜ್ಞೆಯಲ್ಲಿ ತನ್ನ ಬಗ್ಗೆ ಅಭಿಮಾನ ಮೂಡುತ್ತದೆ.

ವಿಶ್ವನಾಥ ಒತ್ತಿ ಹಿಡಿದ ಸಂಯಮದಿಂದ ಈ ಕಡೆಗೆ ತಿರುಗಿ 'ದಡಪ್ಪಯ್ಯನಿಗೆ ಕಣ್ಣಿಗೆ ಬಿಡಕ್ಕೆ ಎದೆ ಹಾಲು ಬೇಕಂತೆ, ಒಳಲೆ ಕೊಟ್ಟು ಕಳಿಸಿದ್ದಾರೆ!' ಎಂದು ಹೇಳಿ ಅಷ್ಟರೊಳಗೆ ನಾಚಿ ಸರಕ್ಕನೆ ಮುಖ ತಿರುಗಿಸಿಕೊಂಡ. ಆಗ, ಅಲ್ಲಿದ್ದ ಹೆಂಗಸರು "ಅಯ್ಯಯ್ಯೋ ನಾಚಿಕೆ ನೋಡ್ರೋ ಇವನಿಗೆ" ಎಂದು ಹಲವು ಹೆಂಗಸರೂ, "ಮೊನ್ನೆ ಮೊನ್ನೆ ಮಲೆ ಕುಡಿಯೋದು ಬಿಟ್ಟಿದ್ದಾನೆ. ದೊಡ್ಡ ಗಂಡಸು ಆಡಿದಂಗೆ ಆಡ್ತಾನೆ" ಎಂದು ಕೆಲವರೂ "ಈ ಹುಡುಗರು ಹಿಂಗೇಂತ ಹೇಳಾ ಹಂಗಿಲ್ಲ ನೋಡಿದಿರಾ ಅಬ್ಬಬ್ಬಾ!" ಎಂದು ಮತ್ತೆ ಹಲವರೂ ವಿಶ್ವನಾಥನನ್ನು ಮನಸ್ವಿಯಾಗಿ ಲೇವಡಿ ಮಾಡಿ, ಅವನ ಕಣ್ಣಿನಲ್ಲಿಯೂ ಹನಿಗೂಡುವಂತೆ ನಾಚಿಸಿದರು. ಈ ನಡುವೆ ಗೌರಿಯೂ ನಾಚಿದಳು.

ಗೌರಿ ಹೇಗೋ ಚೇತರಿಸಿಕೊಂಡು, ನಾಚಿಕೆಯಿಂದ ಮುಕದಿರುಹಿ ನಿಂತಿದ್ದ ವಿಶ್ವನಾಥನಿಂದ ಒಳಲೆ ತೆಗೆದುಕೊಂಡು ಮಲೆಯಲ್ಲೇ ಕೊಂಚ ಪಕ್ಕಕ್ಕೆ ಸರಿದು ಮರೆಮಾಡಿಕೊಂಡು ಹಾಲು ಹಿಂಡಿದಳು. ಅವಳ ಸೌಂದರ್ಯಕ್ಕೆ ಅವಳ ಕುಚಗಳು ಅದ್ಭುತ ಮೆರುಗನ್ನಿತ್ತಿದ್ದವು. ವಿಶ್ವನಾಥನ ವಿಪರೀತ ನಾಚಿಕೆಯು ಅವಳಲ್ಲಿನ ಸ್ತ್ರೀತ್ವವನ್ನೂ ಸೌಂದರ್ಯವನ್ನೂ ದಿಗ್ಗನೆ ಜ್ಞಾಪಿಸಿದವು.

ಹೀಗೆ ಹೆಣ್ಣಿನ ವೈಯಕ್ತಿಕ ಬದುಕನ್ನು ಸಂವೇದನಾಪೂರ್ವಕವಾಗಿ ತೇಜಸ್ವಿ ಹಿಡಿದಿಟ್ಟಿದ್ದಾರೆ. ಹೆಣ್ಣಿನ ಇಂತಹ ಸಂವೇದನೆಗಳನ್ನು ತರುವುದು ತೇಜಸ್ವಿಯಂಥ ಸೃಜನಶೀಲ ಸೂಕ್ಷ್ಮ ಸಂವೇದನಾಶೀಲ ಲೇಖಕರಿಂದ ಮಾತ್ರ ಸಾಧ್ಯ ಎಂದು ಹೇಳಬಹುದಾಗಿದೆ. ಇಂತಹ ಚಿತ್ರಣ ಗೌರಿಗೆ ಅರಿವಿಲ್ಲದಂತೆ ಅವಳ ದುರಂತವು ಏರ್ಪಡುತ್ತಿರುವ ಹೊತ್ತಿನಲ್ಲಿ ಕಣ್ಣಿಗೆ ಕಟ್ಟುವಾಗ ಮಡುಗಟ್ಟುವ ವಿಷಾದ ತೇಜಸ್ವಿಯವರ ಕಥಾಲೋಕದಲ್ಲಿ ಉದ್ದಕ್ಕೂ ಕಂಡುಬರುವಂಥದ್ದು. ಅದನ್ನು ತೇಜಸ್ವಿ ಪ್ರತ್ಯೇಕವಾಗಿ ಬರೆಯದೆಯೂ ಕಾಣಿಸುತ್ತಾರೆ ಎಂಬುದು ಅವರ ಕಥನದ ಹೆಚ್ಚುಗಾರಿಕೆಗಳಲ್ಲೊಂದು.

ತೇಜಸ್ವಿ ಅವರ ಮತ್ತೊಂದು ಬಹುಮುಖ್ಯವಾದ ಕಥೆ 'ಕುಬಿ ಮತ್ತು ಇಯಾಲ'. ಇಡೀ ಕಥೆಯು ಪತ್ತೇದಾರಿ ಅಂಶಗಳನ್ನೊಳಗೊಂಡು ಕುಬಿಯ ವೈಚಾರಿಕ ಅಂಶಗಳನ್ನು ಬಿಂಬಿಸುತ್ತಿದ್ದರೂ, ಮುಗ್ದ ಇಯಾಲಾಳ ದುರಂತ ಸಾವಿನೊಂದಿಗೆ ಇಡೀ ಒಂದು ಕಾಲದ, ಸಾಮಾಜಿಕತೆಯ ದುರಂತವೂ ಹೇಗೆ ಅಡಗಿದೆ ಎಂಬುದನ್ನು ಚಿತ್ರಿಸುತ್ತದೆ. ಸಾಮಾಜಿಕ ಸಂದರ್ಭದಲ್ಲಿ ಅಂಧಮೌಢ್ಯಗಳ ವ್ಯವಸ್ಥೆಗೆ ಮುಗ್ಧ ಅಮಾಯಕ ಹೆಣ್ಣೊಬ್ಬಳು ತನ್ನ ಜೀವವನ್ನೇ ತೆರಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಮೌಢ್ಯ ನಂಬಿಕೆಗಳಿಗಾಗಿ ಹೆಣ್ಣಿನ ಜೀವಿಸುವ ಹಕ್ಕನ್ನೇ ಕಸಿದುಕೊಳ್ಳುವ ಸಮಾಜದ ವಿಕೃತ ಮನಸ್ಸು ಈ ಕತೆಯಲ್ಲಿ ಕಂಡುಬರುತ್ತದೆ. 'ಮೈನೆರೆಯದ ಹೆಣ್ಣನ್ನು ಸಂಭೋಗಿಸಿದರೆ ತನಗಿರುವ ಲೈಂಗಿಕ ರೋಗವಾಸಿಯಾಗುತ್ತದೆ' ಎನ್ನುವ ಲೋರಿಯಂತಹ ವಿಕೃತ ಮನಸ್ಸಿನ ವ್ಯಕ್ತಿಯ ಮೌಢ್ಯಗಳಿಗಾಗಿ ಇಯಾಲ, ತನ್ನ ಭಾವನೆಗಳು ಹಾಗೂ ಜೀವವನ್ನೇ ಬಲಿಕೊಡಬೇಕಾಗುತ್ತದೆ. ಎಂದರೆ, ಸಮಾಜದಲ್ಲಿ ಹೆಣ್ಣಿನ ಭಾವನೆಗಳಿಗೆ ಎಷ್ಟರಪ್ರಮಾಣದಲ್ಲಿ ಬೆಲೆ ದೊರಕುತ್ತಿದೆ ಎಂಬುದರ ಅರಿವಿನ ಸ್ಪಷ್ಟ ಚಿತ್ರಣ ನಮಗಾಗುತ್ತದೆ.

'ಕುಬಿ ಮತ್ತು ಇಯಾಲ' ಕತೆಯಲ್ಲಿ ಇಯಾಲ ಮತ್ತು ಬಾಯಮ್ಮ ಮುಖ್ಯವಾದ ಸ್ತ್ರೀ ಪಾತ್ರಗಳು. ಇಯಾಲ ಕತೆಯ ಆರಂಭದಲ್ಲಿ ಕಾಣಿಸಿಕೊಂಡವಳು ಅವಳ ದುರಂತ ಸಾವಿನೊಂದಿಗೆ ಮತ್ತೆ ಕಾಣಿಸಿಕೊಳ್ಳುವುದು. "ನಾನು ಎಲ್ಲ ಹೇಳಿದ್ದೇನೆ. ನೀನು ಏನೂ ಹೇಲಬೇಡ. ಸುಮ್ಮನೆ ಔಷಧಿ ಸೀಸೆಯನ್ನು ಒಂದು ಸಾರಿ ಅವರ ಕೈಗೆ ಕೊಟ್ಟು ಏನು ಹೇಳುತ್ತಾರೋ ಕೇಳಿಕೊಂಡು ಬಾ" ಎಂದು ಬಾಯಮ್ಮ ಮಗಳು ಇಯಾಲಳಿಗೆ ಹೇಳುವುದರೊಂದಿಗೆ ಕತೆ ಆರಂಭವಾಗುತ್ತದೆ. ಔಷಧಿಯನ್ನು ತೆಗೆದುಕೊಂಡು ಇಯಾಲ ಆಸ್ಪತ್ರೆಗೆ ಹೋಗಿ ವೈದ್ಯರಿಗೆ ತೋರಿಸಲು ಸಂಕೋಚಪಡುತ್ತಿರುತ್ತಾಳೆ. "ಆ ಔಷಧಿಯ ಕಾರಣ ಮಾತ್ರ ಇಯಾಲ ವಿಪರೀತ ನಾಚಿಕೆಪಡುವಂಥ ಕಾರಣವೇ ಆಗಿತ್ತು. ಮೊನ್ನೆ ತಾನೇ ಅವಳು ದೊಡ್ಡವಳಾಗಿದ್ದುದರಿಂದ ವಿಪರೀತ ಹೊಟ್ಟೆನೋವು ಸೊಂಟದ ನೋವಿನಲ್ಲಿ ಆಕೆ ಬಾಧೆಪಡುತ್ತಿದ್ದಳು. ಅವಳೇ ಹೋಗಿ ಡಾಕ್ಟರಿಗೆ ಎಲ್ಲ ವಿವರಿಸಿ ಔಷಧಿ ತರಬೇಕಿದ್ದರೆ ಅವಳು ಖಂಡಿತವಾಗಿಯೂ ಹೋಗುತ್ತಿರಲಿಲ್ಲ. ಆದ್ದರಿಂದಲೇ ಅವಳ ತಾಯಿ ನಾನು ಎಲ್ಲ ಹೇಳಿದ್ದೇನೆ. ನೀನು ಹೇಳುವ ಅಗತ್ಯ ಏನೂ ಇಲ್ಲ ಎಂದು ಅವಳಿಗೆ ಧೈರ್ಯ ಕೊಡುತ್ತಿದ್ದಳು. ಆದರೂ ಇಯಾಲಳಿಗೆ ಭೈರಾಪುರದ ದಾರಿಯುದ್ದಕ್ಕೂ ಕಾಡಿದ ಪ್ರಶ್ನೆ ಎಂದರೆ ಎಲ್ಲಾದರೂ ಡಾಕ್ಟರು ಎಲ್ಲವನ್ನು ಮರೆತುಕೊಂಡು ನಿನಗೇನಾಗಿದೆ ಎಂದು ಕೇಳಿದರೆ ಏನು ಮಾಡುವುದಪ್ಪಾ? ಎಂಬುದು"

ಹೆಣ್ಣಿಗೆ ಹೆಣ್ತನ ಎನ್ನುವುದು ಪ್ರಕೃತಿಯಷ್ಟೇ ಸಹಜವಾದುದು. ಭಾರತೀಯ ಹೆಣ್ಣು ಮೈನೆರೆದರೆ, ತನ್ನೆಲ್ಲಾ ವರ್ತನೆಗಳಲ್ಲೂ ಬದಲಾವಣೆ ಆಗಿ ನಾಚಿಕೆ ಭಯ, ಸಂಕೋಚದಂಥ ವರ್ತನೆಗಳು ಕಂಡುಬರುತ್ತವೆ. ಹಾಗಾಗಿ ಒಂದು ಹೆಣ್ಣು ತನ್ನ ವೈಯಕ್ತಿಕ ಸಮಸ್ಯೆಗಳನ್ನಾಗಲೀ, ವಿಚಾರಗಳನ್ನಾಗಲಿ ಮತ್ತೊಂದು ಹೆಣ್ಣಿನೊಂದಿಗೆ ವಿನಿಮಯ ಮಾಡಿಕೊಳ್ಳುವ ಹಾಗೆ ಗಂಡಿನೊಂದಿಗೆ ವಿನಿಮಯ ಮಾಡಿಕೊಳ್ಳುವುದಿಲ್ಲ. ಆಗ ಸಹಜವಾಗಿ ಸಂಕೋಚ ನಾಚಿಕೆಗಳು ಅದಕ್ಕೆ ಅಡ್ಡಬರುತ್ತವೆ. ಆದ್ದರಿಂದ ಕುಬಿಯ ಮುಂದೆ ಹೊಗಿ ನಿಲ್ಲುವಾಗ ಆಕೆ ಸಂಕೋಚ ಸ್ವಭಾವದಿಂದ ನಿಲ್ಲುತ್ತಾಳೆ. ಹೆಣ್ಣಿನ ಇಂಥ ಸಂವೇದನೆಗಳನ್ನು ಒಬ್ಬ ಮಹಿಳೆ ತನ್ನ ಸಾಹಿತ್ಯದಲ್ಲಿ ಹೇಗೆ ಸಹಜವಾಗಿ ಅಭಿವ್ಯಕ್ತಪಡಿಸಬಹುದೋ ಅಷ್ಟರಮಟ್ಟಿಗೆ ತೇಜಸ್ವಿಯವರು ಒಂದು ಹೆಣ್ಣಿನ ಮನಃಸ್ಥಿತಿ, ಅವಳ ತುಮುಲಗಳನ್ನು ಅರಿತು ಅಭಿವ್ಯಕ್ತಪಡಿಸಿದ್ದಾರೆ.

ತೇಜಸ್ವಿ ಅವರ ಕತೆಗಳಲ್ಲಿ ಬರುವ ಮಹಿಳೆಯರು ಸುಖಕ್ಕಿಂತ ಹೆಚ್ಚಾಗಿ ದುಃಖವನ್ನೇ ಹೆಚ್ಚು ಅನುಭವಿಸುತ್ತಾರೆ. ಅದಕ್ಕೆ ಪೂರಕವಾಗುವಂತೆ ಹೆಣ್ಣಿಗೆ ಅವಳ ದಾಂಪತ್ಯ ಜೀವನ ಆ ದುಃಖವನ್ನು ನಿರ್ಣಯಿಸುತ್ತವೆ. ಅವಳ ಇಡಿಯಾದ ಜೀವನ ದಾಂಪತ್ಯದ ಸುತ್ತ ವಿಸ್ತರಿಸಿಕೊಳ್ಳುತ್ತದೆ. ತನ್ನನ್ನು ಕೈಹಿಡಿದ ಗಂಡ ಒಳ್ಳೆಯವನಿರಲಿ ದುಷ್ಟನಿರಲಿ ಅದರ ಎಲ್ಲ ಪರಿಣಾಮವೂ ಅವಳ ಮೇಲೆಯೇ ಬೀಳುವಂಥದ್ದು. ಅಲ್ಲದೆ ಇವರ ಕೆಲವು ಕತೆಗಳಲ್ಲಿ ಗಂಡನ ಕೆಲಸಗಳಿಗೆ ಆಧಾರವಾಗಿ ತಮ್ಮನ್ನು ತೊಡಗಿಸಿ–ಕೊಳ್ಳುತ್ತಾರೆ. ಅಂಥ ಸನ್ನಿವೇಶಗಳಲ್ಲಿ ಸುಖವಿರಲಿ, ದುಃಖವಿರಲಿ ಸಮಪ್ರಮಾಣದಲ್ಲಿ ಅನುಭವಿಸಬೇಕು. ಇವು ಅವರ ಬದುಕಿನ ಸ್ವರೂಪವನ್ನು ನಿರ್ಣಯಿಸುತ್ತಿವೆ. 'ತುಕ್ಕೋಜಿ' ಕಥೆಯಲ್ಲಿನ ಸರೋಜಳ ಬದುಕು ಇದೇ ತೆರನಾದುದು. ತನ್ನ ತಂದೆಯ ಮಾತನ್ನು ಧಿಕ್ಕರಿಸಿದ ತುಕ್ಕೋಜಿ ವಿಧವೆ ಕೃಷ್ಣಾಬಾಯಿಯ ಮಗಳು ಸರೋಜಳನ್ನು ಹಠದಿಂದ ಮದುವೆಯಾಗಿರುತ್ತಾನೆ. ಹೊಲಿಗೆ ಕಾಯಕವನ್ನು ಅವನು ನಂಬಿ ಜೀವನ ಸಾಗಿಸಲು ತೊಡಗಿದನು.

ತುಕ್ಕೋಜಿಗೆ ಗಿರಾಕಿಗಳು ಹೆಚ್ಚಿದಂತೆ ಕೆಲಸದ ಒತ್ತಡ ಹೆಚ್ಚಿದ್ದರಿಂದ ಸರೋಜ ಅವನ ಕೆಲಸದಲ್ಲಿ ಕೈಜೋಡಿಸುತ್ತಾಳೆ. ಆರಂಭದಲ್ಲಿ ಬರೆ ಕಾಜ ಹೊಲಿಯುವುದು, ಗುಂಡಿಹೊಲಿಯುವುದು ಮಾಡುತ್ತಿದ್ದ ಸರೋಜ; ಕೊಂಚ ಕೆಲಸ ಪರಿಚಯವಾಗುತ್ತಾ ಬಂದಂತೆ ಬಟ್ಟೆಗಳನ್ನು ಕತ್ತರಿಸಲು ತೊಡಗಿದಳು. ತನಗಾಗಿ ತನ್ನ ಗಂಡ ತುಕ್ಕೋಜಿ ತಂದೆ ಮನೆಯಿಂದ ಹೊರಬರಬೇಕಾಯ್ತು ಎಂಬುದನ್ನು ನೆನೆದು ಕೃತಜ್ಞತೆ, ನಿಷ್ಠೆ, ಏಕಾಗ್ರತೆಯಿಂದ ಕೆಲಸ ಮಾಡುತ್ತಿದ್ದಳು. ಹೀಗೆ ಕೆಲಸದ ಒತ್ತಡ ಹೆಚ್ಚಾಗಿ ಅವುಗಳ ಮಧ್ಯೆ ಯಾವುದೇ ಸರಸ ಸಲ್ಲಾಪ, ತಮಾಷೆಗಳಿಗೆ ಆಸ್ಪದವೇ ತೋರಿಬರುತ್ತಿರಲಿಲ್ಲ. ಕೆಲಸ ಹೆಚ್ಚಾಗಲಾಗಿ ರಾತ್ರಿಯಿಡೀ ಕೆಲಸ ಮಾಡುತ್ತಿದ್ದರು.

ಇವುಗಳ ನಡುವೆ, ಸರೋಜಳಿಗೆ ತಾಯ್ತನದ ಪ್ರಶ್ನೆ ಎದುರಾಗುತ್ತದೆ. ಹೆಣ್ಣಿಗೆ ತಾಯ್ತನದ ಹಂಬಲ ಸಹಜವಾದುದು. ಅವರಿಬ್ಬರ ಕೆಲಸದ ಒತ್ತಡಗಳ ನಡುವೆ ಅದರ ಯೋಚನೆಯೇ ಬಂದಿರುವುದಿಲ್ಲ. ಸರೋಜಳ ತವರಿನವರೂ, ಮಾವನ ಮನೆಯವರೂ ಸರೋಜಳಿಗೇಕೆ ಇನ್ನೂ ಮಕ್ಕಳಾಗಲಿಲ್ಲವಲ್ಲ ಎಂದು ಮೂಗು ಮುರಿಯುತ್ತಿದ್ದುದು, ಸುತ್ತಮುತ್ತಲಿನವರು ಬಂಜೆ ಎಂದು ನಿಂದಿಸುತ್ತಿದ್ದದು ಅವಳಿಗೆ ಸಹಜವಾಗಿ ನೋವನ್ನುಂಟು ಮಾಡಿರುತ್ತವೆ. ವಯಸ್ಸಾದ ಹೆಂಗಸರು "ನೀನು ಈ

ತಿಂಗಳು ಮೈಗೆ ನೀರು ಹಾಕಿಕೊಂಡೆಯಾ?" ಎಂದು ಅವಳನ್ನು ಪೀಡಿಸುತ್ತಿರುತ್ತಾರೆ. ಹಾಗಾಗಿ ತನ್ನ ಮಾವನ ಮನೆಯ ಒತ್ತಡದಿಂದ ತುಕ್ಕೋಜಿಗೆಲ್ಲಿ ಇನ್ನೊಂದು ಮದುವೆ ಮಾಡಿಕೊಳ್ಳಬೇಕಾದ ಸಮಯ ಬರುತ್ತದೋ ಎಂಬ ಭಯ ಸರೋಜಳನ್ನು ಕಾಡತೊಡಗಿರುತ್ತದೆ. ಇದರಿಂದ ತುಕ್ಕೋಜಿ ತಾನೊಬ್ಬ ಅಪ್ಪ ಎನಿಸಿಕೊಳ್ಳುವುದರ ಕಡೆಗೆ ಗಮನಹರಿಸಬೇಕಾದ ಅನಿವಾರ್ಯತೆ ಎದುರಾಗಿ ಕಾಲಾನಂತರ ಅವರಿಬ್ಬರಿಗೂ ಒಂದು ಮಗು (ಕಿಟ್ಟು) ಜನಿಸಿ ಆ ಎಲ್ಲಾ ಪ್ರಶ್ನೆಗಳಿಗೂ ಅಂತ್ಯ ಹಾಡಿದಂತಾಗುತ್ತದೆ. ಹೀಗೆ ಹೆಣ್ಣಾದವಳು ತಾಯಿಯಾಗದಿದ್ದರೆ ಸಮಾಜದ ನಿಂದನೆಗಳನ್ನೆಲ್ಲ ಸಹಿಸ-ಬೇಕಾಗುತ್ತದೆ. ಅಂತಹ ಘಟನೆಗಳು ಗ್ರಾಮೀಣ ಪ್ರದೇಶಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ.

ತಾಯ್ತನದ ಸಮಸ್ಯೆಗೆ ಪರಿಹಾರ ಸಿಕ್ಕಮೇಲೆ ಸರೋಜ ಕುಟುಂಬದೊಳಗೆ ಸಾಕಷ್ಟು ದುಃಖವನ್ನು ಅನುಭವಿಸಬೇಕಾಗಿ ಬರುತ್ತದೆ. ಸರೋಜ ಕಿಟ್ಟು ಜನಿಸಿದ ಮೇಲೆ ಅವನ ಲಾಲನೆ ಪಾಲನೆಗಳ ನಡುವೆ ತುಕ್ಕೋಜಿ ಕೆಲಸಗಳಲ್ಲಿ ಕೈಜೋಡಿಸುವುದು ಕಡಿಮೆ ಆಗುತ್ತದೆ. ಅಲ್ಲದೆ ತುಕ್ಕೋಜಿ ತನ್ನ ಕೆಲಸಗಳಲ್ಲೇ ಸಂಪೂರ್ಣ ಮಗ್ನನಾಗಿ ಸರೋಜಳ ಯೋಗಕ್ಷೇಮವನ್ನು ವಿಚಾರಿಸುವುದಿಲ್ಲ. ತುಕ್ಕೋಜಿ ಸಣ್ಣಪುಟ್ಟ ವಿಚಾರಗಳಿಗೆಲ್ಲಾ ಸರೋಜಳ ಮೇಲೆ ಸಿಡಿಸಿಡಿಯಾಗುವುದು ಆರಂಭವಾಗುತ್ತದೆ. ಇದರಿಂದ ಸರೋಜ ಸಾಕಷ್ಟು ನಿಂದನೆಗಳನ್ನು ಸಹಿಸಬೇಕಾಗಿ ಬರುತ್ತದೆ. ತುಕ್ಕೋಜಿ ಮಗುವನ್ನು ಲಾಲಿಸದಿದ್ದಾಗ "ನೀವು ಹುಟ್ಟಿಸಿದ್ದನ್ನು ಒಂದು ನಿಮಿಷಾನು ನೋಡಿಕೊಳ್ಳೋದಕ್ಕೆ ನಿಮಗೆ ಆಗದಿದ್ದರೆ ನಮಗೆ ಮಕ್ಕಳು ಯಾಕೆ ಹೇಳಿ. ಸದಾ ದುಡಿಯೋದು! ಹೊಲಿಯೋದು! ಅಂತ ಕೆಲಸದ ಮೇಲೆ ಇದ್ದರೆ ಹೆಂಡತಿ ಯಾಕೆ? ಮಕ್ಕಳು ಯಾಕೆ? ನಿಮಗೆ. ಒಂದು ಮಾತಿಲ್ಲ, ಕತೆ ಇಲ್ಲ. ನಮ್ಮ ಬಾಯನ್ನು ಹೊಲೆದುಕೊಂಡು ಬಿಟ್ಟರೆ ಒಳ್ಳೇದಂತ ಕಾಣ್ತದೆ" ಎಂದು ರೇಗಿದಳು. ತಮ್ಮ ಮನೆಯ ಎದುರೇ ರೈಲು ರಸ್ತೆಯ ಎಂಜಿನಿಯರಿಂಗ್ ಸಿಬ್ಬಂದಿಯವರು ಬಂದಿದ್ದರು. ದಿನವೂ ಸಾಯಂಕಾಲ ಬಣ್ಣ ಬಣ್ಣದ ಬಟ್ಟೆಗಳನ್ನು ತೊಟ್ಟು ಜೋಡಿ ಜೋಡಿಯಾಗಿ ವಿರಾಮವಾಗಿ ವಾಕಿಂಗ್ ಹೋಗುವುದನ್ನು ಸರೋಜ ನೋಡಿದ್ದಳು. ಅವಳಿಗೆ ಈ ದುಡಿಯುವ ಬದುಕಿನ ಬಗ್ಗೆ ರೇಜಿಗೆಯಾಗತೊಡಗಿತು".

ಕುಟುಂಬದೊಳಗೇ ಇದ್ದು ಸದಾ ಕೆಲಸದಲ್ಲೇ ತಲ್ಲೀನರಾಗಿದ್ದಾಗ ಆಗಾಗ ಗಂಡನೊಡನೆ ಏಕಾಂತವನ್ನು ಕಳೆಯಬೇಕೆಂದು ಬಯಸುವುದು ಪ್ರತಿಯೊಬ್ಬ ಹೆಣ್ಣಿನ ಸಹಜಗುಣ. ಅಂತೆಯೇ ಸರೋಜಾಳು ಕೂಡ ಬಯಸುತ್ತಾಳೆ. ಹೀಗೆ ಹೆಣ್ಣು ತನ್ನ ಕುಟುಂಬದೊಳಗೆ ಅನುಭವಿಸುವ ಮಾನಸಿಕ ತೊಳಲಾಟಗಳು, ದುಃಖದುಃಮಾನಗಳನ್ನು ತೇಜಸ್ವಿ ಸೂಕ್ಷ್ಮ ಸಂವೇದನೆಗಳ ಮೂಲಕ ಕಟ್ಟಿಕೊಡುತ್ತಾರೆ.

'ಕಿರಗೂರಿನ ಗಯ್ಯಾಳಿಗಳು': ತೇಜಸ್ವಿ ಅವರ ಬಹುಮುಖ್ಯವಾದ ಮತ್ತು ಮೂರನೇ ಕಥಾಸಂಕಲನ 'ಕಿರಗೂರಿನ ಗಯ್ಯಾಳಿಗಳು'. ನಾಲ್ಕು ಕಥೆಗಳನ್ನೊಳಗೊಂಡಿರುವ ಇದು ತೇಜಸ್ವಿಯವರ ಸಾಮಾಜಿಕ ಚಿಕಿತ್ಸಕ ಗುಣಕ್ಕೆ ಹಿಡಿದ ಕನ್ನಡಿಯಂತಿದೆ. ತಮ್ಮ ಹಿಂದಿನ ಕತೆಗಳಲ್ಲಿ ಕಂಡುಬರುತ್ತಿದ್ದ ಸೌಂದರ್ಯ ಪ್ರಜ್ಞೆ ಮತ್ತು ಕಲಾಪ್ರಜ್ಞೆಯನ್ನು ಇಲ್ಲಿ ಬಹಳ ವಿಶಾಲವಾಗಿ ತಂದಿದ್ದಾರೆ. ಆಧುನಿಕ ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಕಿರಗೂರಿನ ಗಯ್ಯಾಳಿಗಳು ಕತೆ ಬಹಳ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಹೆಣ್ಣಿನ ಸೂಕ್ಷ್ಮ ಸಂವೇದನೆಗಳನ್ನು ಒಬ್ಬ ಪುರುಷ ಲೇಖಕರನ್ನೂ ಹಿಡಿದಿಡಬಹುದು ಎಂಬುದನ್ನು ಇಲ್ಲಿ ಸಾಧ್ಯವಾಗಿಸಿದ್ದಾರೆ. ಇದರಲ್ಲಿ ಸ್ತ್ರೀ ಬಗ್ಗೆ ಸಾಂಪ್ರದಾಯಿಕ ಸಮಾಜ ಹೊಂದಿದ್ದ ನಂಬಿಕೆಗಳನ್ನು ಸುಳ್ಳಾಗಿಸಿ, ಆಕೆಯ ಶಕ್ತಿಯನ್ನು, ಸಂವೇದನೆಯನ್ನು ಹೊಸ ಸಾಧ್ಯತೆಗಳ ಮೂಲಕ ಧ್ವನಿಸಿದ್ದಾರೆ. ಕುಡಿತದ ವಿರುದ್ಧ ಕ್ಷುದ್ರತೆಯ ವಿರುದ್ಧ ಸ್ತ್ರೀಯರು ಇಲ್ಲಿ ಪ್ರತಿಭಟನೆಯ ಧನಿ ಎತ್ತಿದ್ದಾರೆ. ಮಹಿಳೆಯರಿಂದಲೇ ಸಾಮಾಜಿಕ ಸ್ಫೋಟ–ವಾಗುವುದು ಹೆಚ್ಚು ಅರ್ಥಪೂರ್ಣವಾದುದು ಎಂಬ ಅಂಶ ಇಲ್ಲಿ ಕಂಡುಬರುತ್ತದೆ.

'ಕಿರಗೂರಿನ ಗಯ್ಯಾಳಿಗಳು' ಕತೆಯಲ್ಲಿ ಸಮಾಜದಲ್ಲಿ ಗ್ರಾಮ್ಯ ಹೆಣ್ಣಿನ ವಿವಿಧ ಅನುಭವ ಲೋಕವನ್ನು ಬಹಳ ಆಪ್ತವೆನಿಸುವ ರೀತಿಯಲ್ಲಿ ತೇಜಸ್ವಿ ಕಟ್ಟಿಕೊಡುತ್ತಾರೆ. ಅಂಥ ಅನುಭವಗಳು ಎಷ್ಟು ಆಪ್ತವಾಗಿರುತ್ತವೆಂದರೆ, ಒಬ್ಬ ಲೇಖಕಿ ಹೆಣ್ಣಿನ ಅನುಭವಗಳನ್ನು ಎಷ್ಟು ಆಪ್ತವಾಗಿ ಕಟ್ಟಿಕೊಡಲು ಸಾಧ್ಯವೋ ಅಷ್ಟರಮಟ್ಟಿಗೆ ಕಾಣಿಸುತ್ತಾರೆ. ಒಂದು ಸಾಹಿತ್ಯ ಕೃತಿಯಲ್ಲಿ ಸಂವೇದನೆ ಯಶಸ್ವಿಯಾಗಿ ಅಭಿವ್ಯಕ್ತ–ವಾಗಿದೆ ಎಂದು ತಿಳಿಯಬೇಕಾದರೆ ಓದುಗರ ಗ್ರಹಿಕೆಯಲ್ಲಿ ಅದು ತಮ್ಮದೇ ಸುತ್ತಮುತ್ತಲಿನ ಪ್ರಪಂಚದಲ್ಲಿ ವಿಹರಿಸುತ್ತಿದ್ದೇವೋ ಎನ್ನುವಂತಹ ಅನುಭವ ಅವರಿಗಾಗಬೇಕು. ಇಂಥ ಕಾರಣಗಳಿಂದಾಗಿ ತೇಜಸ್ವಿ ಹೆಚ್ಚು ಸಂವೇದನಾಶೀಲ ಲೇಖಕರಾಗಿ ನಮ್ಮ ಮುಂದೆ ಉಳಿದುಬಿಡುತ್ತಾರೆ.

'ಕಿರಗೂರಿನ ಗಯ್ಯಾಳಿಗಳು' ಎಂಬಲ್ಲಿ 'ಗಯ್ಯಾಳಿಗಳು' ಎಂಬ ಶಬ್ಧವೇ ಗಟ್ಟಿಯಾದ ಅರ್ಥಪೂರ್ಣವಾದ ಶಕ್ತಿವಂತ ವ್ಯಾಖ್ಯಾನಕ್ಕೆ ಸಂಬಂಧಿಸಿದ್ದಾಗಿದೆ. ಅದು ಇಡೀ ಕತೆಯ ಸ್ವರೂಪವನ್ನೆ ಕಣ್ಣೆದುರು ಸಾಕಾರಗೊಳಿಸುತ್ತದೆ. ಆದಕಾರಣ ವ್ಯಂಗ್ಯತೆಯ ಜೊತೆಗೆ ವರ್ತಮಾನವಾಗುತ್ತಲೇ ಭವಿಷತ್ತನ್ನು ನಿರ್ಧರಿಸುವ ಶಕ್ತಿ ಇದೆ. ಗ್ರಾಮೀಣ ಸ್ತ್ರೀಯರ ಬದುಕಿನ ಸಾರ್ಥಕ ಸಂವೇದನೆ ಇಲ್ಲಿ ಸಾಕಾರವಾಗಿದೆ. ಸ್ತ್ರೀ ಸಮಾನತೆಯ ಎಲ್ಲ ವಾದಗಳಾಚೆಗೆ ಕತೆ ಸಾಗುತ್ತದೆ.

ಕಿರಗೂರಿನ ಹೆಂಗಸರು ಕೇವಲ ಕುಟುಂಬದೊಳಗೆ ಇರದೆ, ಹೊಲಗದ್ದೆಗಳಲ್ಲಿ ಗಂಡಸರಿಗಿಂತ ಹೆಚ್ಚಾಗಿ ದುಡಿಯುವವರು, ಗಂಡಸರು ಸೋಮಾರಿ ಸ್ವಭಾವದವರು.

"ಗಂಡಸರು ಹೆಂಡ ಕುಡಿದು ಬೀಡಿ ಸೇದಿ ಹೊಗೆ ಹತ್ತಿ ಸಣಕಲಾಗಿದ್ದರೂ ಹೆಣ್ಣು ಮಕ್ಕಳು ಮಾತ್ರ ತಮ್ಮ ಉಜ್ವಲ ಸೌಂದರ್ಯದಿಂದ ನೋಡಿದವರನ್ನು ಬೆಚ್ಚಿ ಬೀಳಿಸುತ್ತಿದ್ದರು. ಇಷ್ಟಾದರೂ ಯಾರೂ ಅವರ ತಂಟೆಗೆ ಹೋಗುತ್ತಿರಲಿಲ್ಲ. ಏಕೆಂದರೆ ಗಂಡಸರು ಎಷ್ಟು ಸೌಮ್ಯರೋ ಹೆಂಗಸರು ಅಷ್ಟೇ ಬಜಾರಿಯರು. ಅವರೆಲ್ಲರಿಗೂ ತಮ್ಮ ಸೌಂದರ್ಯದ ದೆಸೆಯಿಂದ ಅಷ್ಟೊಂದು ಜಂಭ ಅಹಂಕಾರ. ಆ ಊರುಗಳ ಹರಿಜನರು ಬಿಲ್ಲವರು, ಒಕ್ಕಲಿಗರು ಎಲ್ಲರೂ ರೂಪದಲ್ಲಾಗಲೀ ನಡವಳಿಕೆಯಲ್ಲಾಗಲೀ ಒಂದೇ ತರ. ನೋಡಿದವರೆಲ್ಲಾ ಕೈಗೆ ಸಿಕ್ಕದ ದ್ರಾಕ್ಷಿ ಹುಳಿ ಎಂದು ಹೇಳುವಂತೆ "ಗಾಂಚಾಲಿ ಮುಂಡೇರು" ಎಂದು ಅವರನ್ನು ಕಂಡು ಗೊಣಗುತ್ತಿದ್ದರು.

'ತೇಜಸ್ವಿ, ಕುಡಿದು ಹಾಳಾಗಿರೋ ಗಂಡಸರು ಮತ್ತು ಸದೃಢಕಾಯದ ಹೆಂಗಸರನ್ನು ಮುಖಾಮುಖಿಯಾಗಿಸುವ ಮೂಲಕ ಲಿಂಗತಾರತಮ್ಯದ ಸ್ವೀಕೃತ ನಂಬಿಕೆಗಳನ್ನು ಅಲ್ಲಾಡಿಸುತ್ತಾರೆ. ಇಲ್ಲಿ ಅವರು ಹೆಂಗಸರ ಖಾಸಗಿಯಾದಂತಹ ಅನುಭವಗಳನ್ನು ಕಟ್ಟಿಕೊಡುವ ಮೂಲಕ ಆವರ ಸಂವೇದನೆಗಳನ್ನು ಬಿಚ್ಚಿಡುತ್ತಾರೆ.

'ಗದ್ದೆ ನೀರಿನಲ್ಲಿ ನೆನೆಯದಂತೆ ಸೀರೆ ಮೇಲೆತ್ತಿ ಕಟ್ಟಿಕೊಂಡು ತಮ್ಮ ದಂತದ ಕಂಬದಂತಿದ್ದ ಕಾಲುಗಳನ್ನು ನೀರಿನಲ್ಲಿ ಊರಿ ಕಳೆ ತೆಗೆಯುತ್ತಿದ್ದ ಹೆಂಗಸರು ಗಾಳಿ ಈಗ ನಿಲ್ಲಬಹುದು. ಆಗ ನಿಲ್ಲಬಹುದು ಎಂದು ಕೆಲಸ ಮುಂದುವರಿಸಿದರು. ಆದರೆ ಗಾಳಿ ನಿಮಿಷಕ್ಕೆ ಒಂದು ದಿಕ್ಕಿನಂತೆ ಬೀಸಿ ಮೇಲೆತ್ತಿ ಕಟ್ಟಿಕೊಂಡಿದ್ದ ಸೀರೆಯನ್ನು ಸಹ ಕೊಡೆ ಮಡಚಿದಂತೆ ಎತ್ತಲಾರಂಭಿಸಿದಾಗ ನಡುಬಗ್ಗಿ ಕೆಲಸ ಮಾಡುತ್ತಿದ್ದ ಅವರಿಗೆ ಪೀಕಲಾಟಕ್ಕೆ ಬಂತು. ಅಲ್ಲಿದ್ದವರೆಲ್ಲ ಹೆಂಗಸರಾಗಿದ್ದರಿಂದ ಮಾನಮರ್ಯಾದೆಗೇನೂ

ಅವರು ಅಷ್ಟೊಂದು ಹೆದರಬೇಕಾಗಿರಲಿಲ್ಲ. ಆದರೂ ಒಬ್ಬಳ ಸೀರೆ ಮೇಲೆದ್ದಾಗ ಹಿಂದೆ ನಿಂತಿದ್ದವಳು ಕಿಸಕ್ಕನೆ ನಕ್ಕಳು ಮುಂದೆ ನಿಂತಿದ್ದವಳಿಗೆ ಇದರಿಂದ ಕೋಪಬಂತು. ಏನು ಮಾಡುತ್ತೀರಿ! ಗಾಳಿಯ ಮಹಿಮೆ! ಹೀಗೆ ಗಾಳಿಯ ಪ್ರಭಾವದಿಂದ ಆಗುವ ಸಣ್ಣ ಸಂಗತಿಯು ಮುಂದೆ ನಾಟಕೀಯವಾದ ಸಂಭಾಷಣೆಯ ರೀತಿಯಲ್ಲಿ ನಡೆಯುತ್ತದೆ.

"ಅದೇನ್ ಕಂಡೆಯೇ ಹಲ್ಲು ಕಿಸಿಯೋದಕ್ಕೆ ಎಲ್ರಿಗೂ ಇರೋದೆ ನಮ್ಗೂ ಇರೋದು" ಎಂದು ಸೀರೆ ಸರಿಮಾಡಿಕೊಳ್ಳುತ್ತಾ ಮುಂದೆ ನಿಂತಿದ್ದವಳು ರೇಗಿದಳು.

"ಎಲ್ರೂ ಒಂದೇ ಸಾಲ್ನಾಗೆ ನಿಂತ್ಕೊಂಡು ಕೆಲಸ ಮಾಡ್ರಮ್ಮ, ಗಾಳಿಗ್ಯಾಕೋ ನಮ್ಮ ಮೇಲೆ ಸಿಟ್ಟು ಬಂದಂಗೆ ಇದೆ" ಎಂದು ಆ ಗುಂಪಿನ ಹಿರಿಯವಳೊಬ್ಬಳು ಮರ್ಯಾದೆ ಉಳಿಸಿಕೊಳ್ಳುವ ಉಪಾಯ ಯೋಚಿಸಬೇಕಾದರೆ ಮೊದಲು ನಕ್ಕವಳು ಮುಚ್ಚಿಕೊಂಡು ಇರಲಾರದೆ

"ಎಲ್ರಿಗೂ ಇದ್ದಂಗೆ ಇದ್ದಿದ್ರೆ ನಾ ಯಾಕೆ ನಕ್ತಿದ್ದೆ!" ಎಂದು ಕೆಣಕಿದಳು.

ಮುಂದೆ ನಿಂತಿದ್ದವಳಿಗೆ ಇದ್ದಕ್ಕಿದ್ದಂತೆ ಸಿಟ್ಟು ಬಂತು. ಕೈಲಿದ್ದ ಕಳೆಯ ಕಂತೆಯನ್ನು ತೆಗೆದು ಹಿಂದೆ ನಿಂತಿದ್ದವಳ ಮುಖಕ್ಕೆ ರಪ್ಪನೆ ಎಸೆದು "ತೆಗಿ ನೋಡಾನ ನಿಂದ್ಯಾತರ ಇದೇಂತ" ಎಂದು ನಕ್ಕವಳ ಸೊಂಟಕ್ಕೆ ಕೈ ಹಾಕಿ ಎಳೆಯಲಾರಂಭಿಸಿದಳು. ಒಬ್ಬರ ಬೈಗುಳ ಮತ್ತೊಬ್ಬರಿಗೆ ಕೇಳಿಸದಷ್ಟು ಬಲವಾಗಿ ಗಾಳಿಬೀಸುತ್ತಿತ್ತು. ಉಚ್ಚರಿಸಿದ ಪದಗಳು ಎದುರಿನ ಕಿವಿಯನ್ನು ತಲುಪದೆ ತರಗೆಲೆಗಳಂತೆ ಗಾಳಿಗೆ ತೂರಿಹೋಗು-ತ್ತಿದ್ದವು. ಅದರ ನಡುವೆಯೇ ಎಲ್ಲಾ ಹೆಂಗಸರೂ ನುಗ್ಗಾಡಿ ಇವರಿಬ್ಬರ ಜಗಳ ಬಿಡಿಸಿದರು. ಆದರೂ ಇಬ್ಬರೂ ಹೆಂಗಸರೂ ಒಬ್ಬೊಬ್ಬರ ಜನನೇಂದ್ರಿಯಗಳ ಬಗ್ಗೆ ಬಹಳ ಮಾರ್ಮಿಕವಾಗಿ ಬಯ್ದುಕೊಂಡದ್ದರಿಂದ ಮತ್ತೆ ಕೆಲಸ ಮಾಡುವ ಮನಸ್ಸು ಬರದೆ, ಎಲ್ಲಾ ಗದ್ದೆಯಿಂದ ಎದ್ದು ತೆವರಿ ಮೇಲೆ ನಿಂತು "ಗಾಳಿ ನಿಂತ ಮೇಲೆ ಗದ್ದೆ ಕೆಲಸ" ಎಂದು ತೀರ್ಮಾನ ತಗೊಂಡರು.[೧]

ಇಲ್ಲಿ ಹೆಂಗಸರ ನಡುವಿನ ಸಂಘರ್ಷ ಮುಂದಿನ ಬಂಡಾಯಕ್ಕೆ ನಾಂದಿ ಎಂಬಂತೆ ತಮ್ಮ ಬಲಿಷ್ಠತೆಯ ಪ್ರದರ್ಶನ ಕಂಡುಬರುತ್ತದೆ. ಇಂಥ ಹಸಿ ಹಸಿಯಾದ ಅನುಭವಗಳನ್ನು ತೇಜಸ್ವಿ ಕಟ್ಟಿಕೊಡುತ್ತಾರೆ.

---

೧. ಕಿರಗೂರಿನ ಗಯ್ಯಾಳಿಗಳು, ೨೦೧೮, ಪುಟ. ೩

ಮೂರು ರಾತ್ರಿ ಮೂರು ಹಗಲು ಇದ್ದಕ್ಕಿದ್ದಂತೆ ಬೀಸಿದ ಬಿರುಗಾಳಿ ಹೆಂಗಸರ ಮೇಲೆ ಹೆಚ್ಚು ಪ್ರಭಾವ ಬೀರಿತೆಂಬಂತೆ ಕಂಡುಬರುತ್ತದೆ. ಸೀಗೇಗೌಡರ ಮಗ ಸುಬ್ಬಯ್ಯನ ಹೆಂಡತಿ ದಾನಮ್ಮ ಸ್ವೈರಣೆ ಕಳೆದುಕೊಂಡು ಮನೆಯಿಂದ ಹೊರಬಂದು ಗಾಳಿಗೂ ಮನೆಪಕ್ಕ ಬೆಳೆದಿದ್ದ ಹೆಬ್ಬಲಸಿನ ಮರಕ್ಕೂ ಹೀನಾಮಾನ ಅನ್ನತೊಡಗಿದಳು. ದಾನಮ್ಮ ಸಾಧಾರಣವಾಗಿ ಒಳ್ಳೆಯವಳೇ. ಆದರೆ ತಿಂಗಳಿಗೆ ಒಂದಾವರ್ತಿ ಅಮಾವಾಸ್ಯೆಗೋ ಹುಣ್ಣಿಮೆಗೋ ಒಮ್ಮೊಮ್ಮೆ ಅವಳಿಗೆ ಸಿಟ್ಟು ನೆತ್ತಿಗೇರುತ್ತದೆ. ಸ್ತ್ರೀವಾದದ ದೃಷ್ಟಿಯಿಂದ ಈ ಕಥೆ ಬಹಳ ಪ್ರಮುಖವಾದುದು. ಸ್ತ್ರೀ ವಿಮೋಚನೆಯ ಪ್ರತೀಕವೆಂಬಂತೆ ಇದು ಕಂಡುಬರುತ್ತದೆ.

ದಾನಮ್ಮ ಗಾಳಿಗೆ ಹಿಡಿ ಹಿಡಿ ಶಾಪಹಾಕುತ್ತಾ 'ಶನಿಮುಂಡೇದು' ಇತ್ಯಾದಿಯಾಗಿ ಬೈಯುತ್ತಾ ಇನ್ನೂ ಬೀಳದೆ ನಿಂತಿರುವ ಮರಕ್ಕೆ ಅದನ್ನು ಕಡಿಸದೇ ಇರುವ ಗಂಡನಿಗೆ ಅದರ ಬೇರಿನ ಮೇಲೆ ಮನೆ ಕಟ್ಟಿರುವ ಮಾವನಿಗೆ, ಗಾಳಿಗೆ ಹೆದರಿ ಮುದ್ದೆಯಾಗಿ ಕುಳಿತಿರುವ ಊರ ಜನರಿಗೆ, ಹೇಗೆ ಹೇಗೋ ಎಲ್ಲರನ್ನೂ ಕಲಾತ್ಮಕವಾಗಿ ಸಂಯೋಜಿಸಿ ಭಾವಗೀತೆಯಂತೆ ಝಾಡಿಸಿ ಉಗಿದಳು. ದಾನಮ್ಮ ಇಡೀ ಸಾಂಪ್ರದಾಯಿಕ ವ್ಯವಸ್ಥೆಗೆ ಪ್ರತಿಭಟನೆಯನ್ನು ತೋರುವ ಪ್ರತಿನಿಧಿಯಂತೆ ಕಂಡುಬರುತ್ತಾಳೆ. ತೇಜಸ್ವಿ ಇಡೀ ಗ್ರಾಮೀಣ ವ್ಯವಸ್ಥೆಗೆ ದಾನಮ್ಮಳನ್ನು ಮುಖಾಮುಖಿಯಾಗಿಸಿದ್ದಾರೆ.

ದಾನಮ್ಮ ಗ್ರಾಮೀಣ ಸಮಾಜದ ಇತರೆ ಹೆಂಗಸರಿಗೆ ಮಾದರಿಯಾದವಳು. ಅವಳಿಂದ ಇತರೆ ಹೆಂಗಸರು ಪ್ರೇರಣೆಗೊಳಗಾಗುತ್ತಾರೆ. ಹರಿಜನರ ಹೆಂಗಸರು "ಅಂತೂ ಅವಳು ಗಟ್ಟಿಗಿತ್ತಿ ಬಿಡಮ್ಮ ಅಂತಂತ ಗಂಡಸರೇ ಹೆದ್ರಿ ಹಿಪ್ಪೆ ಆಗಿ ಮನೆ ಒಳಗೆ ಕೂತಿರಬೇಕಾದರೆ ಹೊರಗೆ ಬಂದು ಕೂಗಾಡಿದಳಲ್ಲ" ಎಂದು ಪ್ರಶಂಸಿಸುತ್ತಾರೆ.

"ಆ ಗಯ್ಯಾಳಿ ಬಾಯಿಗೆ ಮಳೆಗಾಳಿ ಸುತ ಹೆದರ್ತದೆ ಅಂತಾಯ್ತು" ಎಂಬಲ್ಲಿ ಅವಳ ಕ್ರಾಂತಿಕಾರಿತನಕ್ಕೆ ಇಡೀ ವ್ಯವಸ್ಥೆಯೇ ಹೆದರುತ್ತಿತ್ತು. ಯಾರೊಬ್ಬರೂ ಅವಳ ಪ್ರತಿಭಟನೆಗೆ ಪ್ರತಿಯಾಗಿ ತಿರುಗಿಬೀಳುತ್ತಿರಲಿಲ್ಲ. ಬಾಯಮ್ಮನ ದಿಟ್ಟತನದಿಂದ ಆ ಊರಿನ ಇತರೆ ಹೆಂಗಸರು ಕೂಡ ಪ್ರೇರಿತರಾಗಿದ್ದರು.

ತನ್ನ ಹೆಂಡತಿ ಎಂದು ನೋಡದ ಮಾರ ಎಲ್ಲರೆದುರು ತನ್ನನ್ನು ಬೈದಳಲ್ಲಾ ಎಂದು "ಅಲ್ಲಾ ಈ ಮೂರು ಕಾಸಿನ ಹೆಂಗಸಿಗೆ ಗರ್ವ ಎಷ್ಟು ನೋಡು!" ಎಂದು ಹೇಳಿದಾಗ ಅವನ ಹೆಂಡತಿ ರುದ್ರಿ "ನಾನು ಮುರು ಕಾಸಿಗೆ ಮತ್ತೊಬ್ರತ್ರ ಹೋಗಿದ್ದು

ನೋಡಿದ್ಯಾ? ಇಂಥ ಕೆಲಸ ಮಾಡಿಟ್ಟು ನಂಗೆ ರೇಟು ಕಟ್ತೀಯ! ತೆಕ್ಕೊಡು ಈಗ ಗರಗಸಾನ" ಎಂದು ಮಾರನಿಗೆ ಉಗಿಯುವ ಮೂಲಕ ಪ್ರತಿಭಟಿಸುತ್ತಾಳೆ.

"ಬಲೇ ಗಾಂಚಾಲಿ ಮುಂಡೇರು ಮಲೆ ಬಂದೋರಿಗೆ ನೆಲ ಕಾಣದಿಲ್ಲಂತೆ, ಸೊಕ್ಕಿನೆಣಾ ಉಕ್ತದೆ ಅವರ ಮೈಯಾಗೆ. ಒಬ್ಬೊಬ್ರೂ ಹತ್ತು ಹತ್ತು ಹಡಿಯೋ ಹಂಗೆ ಮಾಡಬೇಕು, ಪುರುಸೊತ್ತೆ ಕೊಡಬಾರ್ದು. ಹಂಗಿದ್ರೆ ನೋಡಪ್ಪಾ ಈ ಹಾಳು ಮುಂಡೇರನ್ನ ಹದ್‌ಬಸ್ತಿಗೆ ತರಬೌದು. ಇಲ್ದಿದ್ರೆ ಊರ್ನೇತೆಗಿತಾರೆ ಇವ್ರು. ಏನಂತೀಯ?" ಎಂದು ಮಾರ ಸಿದ್ದನಿಗೆ ಹೇಳುವ ಮಾತಿನಲ್ಲಿ ಸಾಂಪ್ರದಾಯಿಕ ಹಿಂದೂ ಸಮಾಜದ ಹೆಣ್ಣಿನ ಬಗೆಗಿನ ನಿಲುವುಗಳು ಸ್ಪಷ್ಟವಾಗುತ್ತವೆ. ಹೆಣ್ಣು ಸ್ವಾತಂತ್ರ್ಯಕ್ಕೆ ಅನರ್ಹಳು. ಅವಳು ಮಕ್ಕಳನ್ನು ಹೆರಬಲ್ಲ ಒಂದು ಪ್ರಾಣಿ ಮಾತ್ರ. ಅವಳು ಸದಾ ಗಂಡಿನ ಆಸರೆಯಲ್ಲಿ ಅಬಲೆಯಾಗಿ ಕುಟುಂಬದ ಚೌಕಟ್ಟಿನೊಳಗೆ ಇರಬೇಕು ಎಂಬ ನಿಲುವು ಸ್ಪಷ್ಟವಾಗುತ್ತದೆ. ಆದರೆ ಇಲ್ಲಿನ ಸ್ತ್ರೀ ಪಾತ್ರಗಳ ಮೂಲಕ ತೇಜಸ್ವಿ ಹೆಣ್ಣಿನ ಬಗೆಗೆ ಸಾಂಪ್ರದಾಯಿಕ ಸಮಾಜ ಹೊಂದಿದ್ದ ನಿಲುವುಗಳನ್ನು ಗಾಳಿಗೆ ತೂರಿ ಹೆಣ್ಣಿನ ಸಂವೇದನೆಗಳಿಗೆ ಅವಕಾಶ ಕಲ್ಪಿಸಿದ್ದಾರೆ.

ದಾನಮ್ಮ ಹಿಂದುಮುಂದು ನೋಡದೆ ಅನ್ನಿಸಿದ್ದನೆಲ್ಲಾ ಅನ್ನುತ್ತಾ, ಹೆಂಗಸರ ಮುಚ್ಚುಮರೆಯ ಅನಿಸಿಕೆಗಳಿಗೆ ಬಾಯಿ ಕೊಡಲಾರಂಭಿಸಿ ಕಿರಗೂರಿನ ಹೆಂಗಸರೆಲ್ಲಾ ಕೇವಲ ಗಂಡಸರ ಸಮಾಧಾನಕ್ಕೆ ಅವಳು ಗಯ್ಯಾಳಿ ಎಂದು ಮೇಲೆ ದೂಷಿಸಿದರೂ ಒಳಗೇ ಅವಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಳ್ಳತೊಡಗಿದರು. ಗಂಡಸರ ಇಷ್ಟಾನುಸಾರಕ್ಕೆ ತಕ್ಕಂತೆ ಕುಣಿಯಲು ಯಾರೂ ತಯಾರಿರಲಿಲ್ಲ.

ಗ್ರಾಮೀಣ ಮಹಿಳೆಯರು ಗಯ್ಯಾಳಿಯರೆನಿಸಿಕೊಂಡರೂ ಅವರಲ್ಲಿಯೂ ಮಾನವೀಯ ಗುಣಗಳಿರುತ್ತವೆ ಎಂಬುದನ್ನು ದಾನಮ್ಮಳು ವ್ಯಕ್ತಿತ್ವದಿಂದ ತಿಳಿದು-ಕೊಳ್ಳಬಹುದು. ಮಾನವೀಯತೆಯನ್ನು ಮೆರೆಯುವ ಸಂದರ್ಭದಲ್ಲಿ ಯಾವುದೇ ಜಾತಿ ಜನಾಂಗವೆಂಬ ಪ್ರಶ್ನೆಯೇ ಬರುವುದಿಲ್ಲ. ಹೆಬ್ಬಲಸಿನ ಮರದ ದಿಮ್ಮಿ ಉರುಳಿಕೊಂಡು ಹರಿಜನರ ಕೇರಿ ಪ್ರವೇಶಿಸಿ ಕರಿಯನ ತಾಯಿಯನ್ನು ಅಪ್ಪಚ್ಚಿ ಮಾಡಿಬಿಡುತ್ತದೆ ಎನ್ನುವಷ್ಟರಲ್ಲಿ ದಾನಮ್ಮ ಹೋಗಿ ಅವಳನ್ನು ರಕ್ಷಿಸುತ್ತಾಳೆ. ಅದಕ್ಕೂ ಮೊದಲು "ಆ ಮುದುಕಿ ಮೈಮುಟ್ಟಿದರೆ ನನ್ನ ತಾಳಿ ಮೇಲಾಣೆ. ನಿನ್ನ ಮುಸುಡಿಗೆ ಒರಲೆ ಹಿಡಿಯಾ. ನರಬಲಿ ತಗೊಳ್ಳೋಕೆ ಬರ್ತೀಯಾ" ಎಂದು ದಿಮ್ಮಿಯನ್ನು ಒಂದು ವ್ಯಕ್ತಿ ಎನ್ನುವಂತೆ

ಬಯ್ಯುತ್ತಾಳೆ. ಇಷ್ಟೆಲ್ಲಕ್ಕೂ ಕಾರಣರಾದ ಗಂಡಸರನ್ನು "ಹಲ್ಲಂಡೆ ಮುಂಡೆಮಕ್ಳನ್ನ ಕರಕೊಂಡು ಬಂದು ಊರು ಹಾಳ್ಮಾಡಕೆ ಮೂರು ದಿನದಿಂದ ಹುನ್ನಾರ ಮಾಡಿದ್ದೀರಾ? ಥೂ ನಿಮ್ಮ ಜಲ್ಮಕ್ಕೆ ಬೆಂಕಿ ಹಾಕ" ಎಂದು ಅಬ್ಬರಿಸುತ್ತಾಳೆ.

ಕಿರಗೂರಿನ ಗಯ್ಯಾಳಿಗಳ ಹೋರಾಟಕ್ಕೆ ಒಂದು ಸೂಕ್ತ ವೇದಿಕೆ ದೊರೆಯುವುದು ಕಾಳೇಗೌಡನ ಚಿನ್ನದಂಥ ಹೆಂಡತಿ ನಾಗಮ್ಮ ನಂಬೂದರಿ ಪಂಡಿತನ ಜೊತೆ ಓಡಿ ಹೋದ ಪ್ರಕರಣದಿಂದ. ನಾಗಮ್ಮಳಿಗೆ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ ಕಾಳೇಗೌಡ ಮತ್ತೊಂದು ಮದುವೆ ಆಗಲು ನಿರ್ಧರಿಸಿರುತ್ತಾನೆ. ಓಡಿಹೋದ ನಾಗಮ್ಮಳನ್ನು ಊರಿನ ಜನತೆ ಪುನಃ ವಾಪಸ್ಸು ಕರೆತಂದು ಪಂಚಾಯತಿ ಮಾಡಲು ನಿರ್ಧರಿಸುತ್ತಾರೆ. ಇವುಗಳ ನಡುವೆ ಕಾಳೇಗೌಡ ಸುಬ್ಬೇಗೌಡ, ಭೈರಪ್ಪ ಮೂವರೂ ಸೊಂಟ ಉಳುಕಿಸಿಕೊಂಡು ಏನೂ ಮಾಡಲಾರದ ಸ್ಥಿತಿಯಲ್ಲಿದ್ದರು.

ನಾಗಮ್ಮನ ವಿಚಾರಣೆಯ ಸಂದರ್ಭದಲ್ಲಿ ಕಿರಗೂರಿನ ಹೆಂಗಸರಲ್ಲಿದ್ದ ಸಿಟ್ಟು, ಅತೃಪ್ತಿಗಳೆಲ್ಲ ಒಮ್ಮೆಲೇ ಸ್ಫೋಟವಾಗಿಬಿಡುತ್ತದೆ. ಹೆಂಗಸರಾಗಿ ತಾವು ಅನುಭವಿಸಿದ್ದ ಬವಣೆಗಳಿಗೆಲ್ಲ ಅವರು ಪ್ರತಿಭಟನೆ, ಪ್ರತೀಕಾರಗಳ ಸಂಘಟಿತ ಪ್ರಯತ್ನಕ್ಕೆ ಒಟ್ಟಾಗಿ ಮುಂದಾಗಿಬಿಡುತ್ತಾರೆ. ಎಲ್ಲಾ ಜಾತಿಯ ಮಹಿಳೆಯರೆಲ್ಲಾ ಸೇರಿ ಊರಿನ ಗಂಡಸರಿಗೆ ಪಾಠ ಕಲಿಸುವ ಕ್ರಿಯೆಗೆ ಇಳಿದುಬಿಡುತ್ತಾರೆ. 'ಇವರ ಜಾತಿಗಳು ಇವರ ಆಚಾರಗಳು, ಇವರ ಮದುವೆಗಳು, ಇವರ ಪಂಚಾಯ್ತಿಗಳು, ಪ್ರತಿಯೊಂದು ಹೆಂಗಸರಿಗೆ ಕೊಡುವ ಗಂಡಸರ ನೀಚ ತಂತ್ರವಾಗಿ ದಾನಮ್ಮನಿಗೆ ಕಾಣಿಸಿತು. ಇವರೇ ಏನೇನೋ ಮಾಡಿಕೊಂಡು ಅನಂತರ ಎಲ್ಲವನ್ನೂ ತಂದು ಯಾವಳಾದರೂ ಹೆಂಗಸಿನ ತಲೆಗೆ ಸುತ್ತುವ ಎಲ್ಲಾ ಗಂಡಸರ ಮೇಲೂ ರೇಗಿಹೋಯ್ತು.

ನಾಗಮ್ಮನಿಗೆ ಬೆತ್ತದಲ್ಲಿ ಥಳಿಸುತ್ತಿದ್ದ ಹೆಗ್ಡೆ "ಏನು ಕಂಡು ಆ ಪಂಡಿತನ ಹಿಂದೆ ಓಡೋದ್ಲು ಹೇಳಲಿ" ಎಂದಾಗ ದಾನಮ್ಮನ ಸಿಟ್ಟು ವಿಪರೀತವಾಗುತ್ತದೆ. ಅವ್ಯಾಕೆ ಹೇಳಬೇಕು ನಿಂಗೆ ಹೆಂಗ್ಸರು ಗಂಡ್ಸರ ಜೊತೆ ಯಾಕೆ ಹೋಗ್ತಾರಂತೆ ಹೆಂಗ್ಸಿನ ಬಾಯಾಗೆ ಹೇಳಬೇಕ ನಿಂಗೆ? ಇಲ್ಯಾಕೆ ಬೆತ್ತ ಅಲ್ಲಾಡಿಸ್ತಾ ನಿಂತಿದ್ದೀಯಾ ಹೋಗಿ ನಿನ್ನ ಹೆಂಡ್ತಿ ಇದ್ರೆ ಕೇಳಿಕೊಂಡು ಬಾ" ಎಂದು ರೇಗುತ್ತಾಳೆ. ಶಂಕ್ರಪ್ಪ ಏನೇನೋ ಗೊಣಗುತ್ತಿರುತ್ತಾನೆ. ಆಗ "ಅನ್ನಿಸಿದ್ದನ್ನು ಗಟ್ಟಿಯಾಗಿ ಅನ್ನೋ ಅದ್ಯಾಕೆ ಒಳಗೊಳಗೇ ನುಂಗ್ತೀಯಾ. ಏನನ್ತೀರೋ ಅದ್ನೆಲ್ಲಾ ಕೇಳಕ್ಕೇ ಇಲ್ಲಿಗೆ ಬಂದಿದ್ದೀನಿ. ಕೈ ಹಿಡಿದ

ಗಂಡಾಂತಿಯಾ? ಮಕ್ಕಳಾಗಲಿಲ್ಲಾಂತ ಮತ್ತೊಬ್ಬಳನ್ನ ಕಟ್ಕೋಬೌದ ಈ ಗಂಡ್ಸು" ಎಂದು ಕಾಳೇಗೌಡನಿಗೆ ಉಗಿದು "ಇವತ್ತು ಬಾಯಿಬಿಟ್ಟೇ ಕೇಳ್ತೀನಿ? ಸೊಂಟಾ ಬಿದ್ದ ಗಂಡಸರತ್ರ ಸಂಸಾರ ಮಾಡೋದೇನನ್ನು? ಉತ್ತರ ಹೇಳ್ತೀಯಾ" ಎಂದು ಶಂಕರಪ್ಪನ ಕಡೆ ಸರ್ಪದಂತೆ ಭುಸುಗುಟ್ಟುತ್ತಾ ಕೇಳಿದಳು. ಇವರ ಹೆಂಡರಿಗೆ ಮಕ್ಕಳಾಗದಿರುವುದಕ್ಕೂ ಸೊಂಟದ ಉಳುಕಿಗೂ ಇರುವ ಸಂಬಂಧ ತೋರಿಸಿ ಉಳುಕಿಗೊಂದು ಹೊಸ ಆಯಾಮ ನೀಡುತ್ತಾಳೆ.

"ನಿನ್ನಂಗಡೀಲಿ ಸೇಂದಿ ಕುಡಿದು ಓತಿಕ್ಯಾತನಂಗೆ ಆಗಿದಾವೆ. ಹಿಚ್ಚಿದರೆ ಮುಕ್ಕೀಲಿ ಮೂರು ತೊಲ ಮಾಂಸ ಇಲ್ಲ. ಕುಡಿದು ರಾತ್ರೆಲ್ಲಾ ರಸ್ತೇಲೋ ಚರಂಡೀಲೋ ಬಿದ್ದು ಬಂದ್ರೆ ಮಕ್ಕಳು ಹೆಂಗೋ ಆಗ್ತವೇ? ಮಕ್ಕಳಾಗಲಿಲ್ಲಂತೆ! ಅಮಾಸೆಗೊಂದು ಸಾರಿ ಹುಣ್ಣಿಮೆಗೆ ಒಂದು ಸಾರಿ ಹೆಣ್ತಿ ನೆನಪಾದ್ರೆ ಮಕ್ಕಳಾಗ್ತವಾ? ಥೂ ಬೇವರಿಸಿ ನೀನು ನಿಜವಾಗ್ಲು ನಿಮ್ಮಪ್ಪಮಗೆ ಹುಟ್ಟಿದ್ರೆ ಹೋಗಿ ಕೇಳಿಕೊಂಡು ಬಾ ಹ್ಯಾಗೆ ಹುಟ್ಟಿಸ್ದೆ ಅಂತ" ಎಂದು ಶಂಕ್ರಪ್ಪನ ಮೇಲೆ ಸಿಡಿದೇಳುತ್ತಾಳೆ.

'ನಾಗಮ್ಮನಿಗೆ ದೆವ್ವ ಬಿಡಿಸುತ್ತೇನೆಂದು ಮಗ್ಗುಲು ಮುರಿಯುವಂತೆ ಹೊಡೆಯುವುದನ್ನು ನೋಡಬೇಕಲ್ಲಪ್ಪಾ ಎಂದು ಕಳವಳದಲ್ಲಿದ್ದ ಹೆಂಗಸರಿಗೆಲ್ಲಾ ದಾನಮ್ಮ ದೇವರೇ ಕಳಿಸಿದ ದುರ್ಗಿಯಂತೆ ಕಂಡಳು. ಅವಳು ನೆರೆದಿದ್ದ ಗಂಡಸರ ಕಡೆಗೆಲ್ಲಾ ಒಮ್ಮೆ ನೋಡಿದಳು. ಸೊಂಟ ಉಳುಕಿಸಿಕೊಂಡು ನಿಟ್ಟುಸಿರು ಬಿಡುತ್ತಿರುವವರು ಹೆಂಡ ಕುಡಿದು ಮೈಯೆಲ್ಲಾ ಲಡ್ಡಾದವರು ಜಾತಿ ಜಗಳ ತೆಕ್ಕೊಂಡು ಯೌವ್ವನ ಖರ್ಚು ಮಾಡುತ್ತಿರುವವರು! ಹೇಸಿಗೆ ಸೂಳೇಮಕ್ಕಳು! ಯಾವನಾಯ್ತೋ ಅವನ ಜೊತೆಗೆ ಎತ್ತಕಡೆಗಾಯ್ತೋ ಅತ್ತೆ ಕಡೆಗೆ ಓಡೇ ಹೋಗಬೇಕೆಂದು ಅವರಿಗೆ ಅನ್ನಿಸಿತು.

ಆ ರೇಜಿಗೆಯಲ್ಲಿ ಈ ಅರಿವಿನ ಸ್ಫೋಟವು ಮತ್ತಷ್ಟು ಹೆಚ್ಚಾಗಿ ಭೌತಿಕ ಕ್ರಿಯೆಯಲ್ಲೂ ಪ್ರಕಟಗೊಳ್ಳುತ್ತದೆ. ಇದರ ನಡುವೆ ನಾಗಮ್ಮ ಪಂಡಿತನ ಜೊತೆ ಓಡಿಹೋದದ್ದು ಅಪರಾಧವೇ ಅಲ್ಲ, ಒಂದು ಸಾಹಸ ಎಂದೆನಿಸಿತು. "ಒಳ್ಳೇ ಮಾತ್ನಲ್ಲಿ ಕರಿಯನ ಹತ್ರ ಉಳುಕು ತೆಗಿಸಿಕೊಂತಿರೋ ಇಲ್ಲಾ ನಿಮ್ಮ ಹೆಂಡ್ರು ಸಂತೇಲಿ ಸೀರೆ ಬಿಚ್ಚಿ, ಹೋಗಿ ಬರೋರಿಗೆ ಬಸುರಾಗಬೇಕೋ ಏಚ್ನೆ ಮಾಡಿ?" ಎಂದು ಕಠೋರ ನಿರ್ಧಾರದ ಧ್ವನಿಯಲ್ಲಿ ಹೇಳಿ "ಮಕ್ಕಳಾಗಬೇಕೂಂತ ನಿಮ್ಮಂಗೆ ನಮಗೂ ಇರ್ತದೆ"

ಎನ್ನುತ್ತಾಳೆ ದಾನಮ್ಮ. ಇಂತಹ ದಾನಮ್ಮನ ನಿರ್ಧಾರಕ ಮಾತುಗಳಲ್ಲಿ ಇಡೀ ಕಿರಗೂರಿನ ಸಂಸ್ಕೃತಿಯ ಅತೃಪ್ತಿಯೊಂದು ಸ್ಫೋಟಗೊಳ್ಳುತ್ತದೆ. ದಾನಮ್ಮನ ಮಹತ್ವ ಇರುವುದು ಈ ರೀತಿಯ ನಿಯಂತ್ರಕ ಶಕ್ತಿಯಾಗಿ. ಯಾವುದೇ ಒಂದು ಮಿತಿಮೀರಿದ ಸಂಸ್ಕೃತಿಗೆ ತಡೆಯೊಡ್ಡಲು ಮತ್ತೊಂದು ಸಂಸ್ಕೃತಿ ಕಾಯುತ್ತಿರುತ್ತದೆ ಎಂಬುದು ದಾನಮ್ಮನ ವ್ಯಕ್ತಿತ್ವದಿಂದ ತಿಳಿಯುತ್ತದೆ. ಇಂತಹ ದಾನಮ್ಮನ ವ್ಯಕ್ತಿತ್ವ ಪುರುಷರ ವಿಕೃತ ಸಂಸ್ಕೃತಿಗೆ ತಡೆಯೊಡ್ಡುತ್ತದೆ. ಅದು ಪುರುಷರ ಪಂಚಾಯಿತಿ ಕಟ್ಟೆಯನ್ನಷ್ಟೇ ಅಲುಗಾಡಿಸಲಿಲ್ಲ. ಬದಲಿಗೆ ಕಿರಗೂರಿನ ಸಂಸ್ಕೃತಿಯೊಳಗೆ ಹುದುಗಿಕೊಂಡಿರುವ ಪ್ರಜ್ಞೆ, ಎಚ್ಚರ ಮತ್ತು ಪ್ರತಿರೋಧಕ ಗುಣಗಳನ್ನು ಬಯಲಿಗೆ ತಂದಿದೆ. ಗಯ್ಯಾಳಿತನದ ಒಳಗೇ ತುಡಿವ ಸ್ತ್ರೀ ಸಹಜ ಬಯಕೆಯೊಂದು ಸ್ಫೋಟಗೊಳ್ಳುತ್ತದೆ.

'ಈ ನಡುವೆ ಕರಿಯನ ಹೆಂಡತಿ ಕಾಳಿ "ಉಳುಕು ತೆಗಿಯೋಕೆ ಕೆಲಸಬಿಟ್ಟು ಒಪ್ಪತ್ತು ನಡಕೊಂಡು ಹೋಗಿ ಬರ್ತೀಯ. ಇಲ್ಲಿ ಮನೆ ಪಕ್ಕ ಮೂರು ಜನ ಸೊಂಟ ಹಿಡ್ಕೊಂಡು ನರಳಾಡ್ತ ಇದ್ರೆ ನಿನ್ನ ಕಣ್ಣಿಗೆ ಕಾಣಕಿಲ್ವ? ಇಷ್ಟೆಲ್ಲಾ ಆಗಿದ್ದು ನಿನ್ನಿಂದ್ಲೇಯ. ಒಳ್ಳೆ ಮಾತ್ನಾಗೆ ಅವರಿಗೆ ಉಳುಕು ತೆಗಿತೀಯಾ ಇಲ್ಲಾ....? ಎಂದು ಕರಿಯನ ಮೇಲೆ ರೌದ್ರಾವತಾರ ತಾಳಿ ಎಗರಿಬಿದ್ದಳು'.

ದಾನಮ್ಮನ ನೇತೃತ್ವದಲ್ಲಿ ಇಡೀ ಕಿರಗೂರಿನ ಹೆಂಗಸರೆಲ್ಲ ಗಂಡಸರ ಮೇಲೆ ನುಗ್ಗಿ ಹೊಡೆಯಲು ಮುಂದಾದರು. ಶಂಕ್ರಪ್ಪನ ಮೇಲೆ ಆಕ್ರಮಣ ಮಾಡುತ್ತಾ, "ಸರ್ಕಾರಿ ಸೇಂದಿ ಕುಡಿಸಿ ಎಷ್ಟು ಜನರ ಮನೆತೆಗೆದಿದಿಯೋ? ನಾಗಮ್ಮನ ಬಂಜೆ ಅನ್ತೀಯ ಮನೆಮುರುಕ. ನಿನ್ನ ರಕ್ತಾ ಕುಡಿತೀನಿ ಇವತ್ತು. ಪಂಚಾಯ್ತಿ ಮಾಡಕ್ಕೆ ಬರ್ತೀಯ" ಎಂದೆನ್ನುತ್ತಾ ದಾನಮ್ಮ ದಬ್ಬೆಯಿಂದ ಬೆನ್ನಿಗೆ ಇಕ್ಕಡಿಸಿದಳು.

'ಹೆಂಗಸರೆಲ್ಲಾ ಯರ್‍ರಾಬಿರ್‍ರಿ ದೊಣ್ಣೆ ಬೀಸುತ್ತಾ ಪಂಚಾಯ್ತಿ ಗುಂಪಿನತ್ತ ನುಗ್ಗಿದರು. ಅವರಿಗೆ ತಮ್ಮ ಶಕ್ತಿ ಬಗ್ಗೆಯಾಗಲೀ, ತಮ್ಮ ಕೈಲಿದ್ದ ಬಯನೆ ದಬ್ಬೆಯ ಅಪಾಯಕಾರಿ ಸಾಧ್ಯತೆಯ ಬಗ್ಗೆಯಾಗಲೀ ಸರಿಯಾದ ಅಂದಾಜು ಇರಲಿಲ್ಲ. ಅಡ್ಡಬಂದ ಹಲವರು ಕುಡುಕರಿಗೆ ದಬ್ಬೆ ತಾಕಿದ್ದೇ ತಡ ಪ್ರಾಣ ಹೋದಂತಾಗಿ ಅವರು ಒರಲಿದ ಹೊಡೆತಕ್ಕೆ ಹೆಣಗಳೇ ಬೀಳುತ್ತಿವೆ ಎಂದು ತಿಳಿದು ಎಲ್ಲ ಚದುರಿಹೋದರು.

'ಗಂಡಸರು ಎದುರಾದರೆ ಸಾಕು ಬಾಗಿಲ ಮರೆಯಲ್ಲಿ ನಿಲ್ಲುತ್ತಿದ್ದ ಹೆಂಗಸರಿಗೆ ಅಲ್ಲಿದ್ದ ಗಂಡಸೆರೆಲ್ಲಾ ದಿಕ್ಕಾಪಾಲಾಗಿ ಓಡಿದ್ದನ್ನು ನೋಡಿ, ಇಷ್ಟು ದಿನ ಯಾಕೆ ಇವರಿಗೆ

ಹೆದರಿ, ಇವರು ಕೊಟ್ಟ ಹಿಂಸೆ ಅನುಭವಿಸುತ್ತಾ ಕಾಲ ಹಾಕಿದೆವೆಂದು ಅಚ್ಚರಿಯಾಯ್ತು'. ಶಂಕ್ರಪ್ಪ ತಪ್ಪಸಿಕೊಂಡು ಹೋದ ಮೇಲೆ 'ಹೆಂಗಸರು ಅವನು ಸಿಕ್ಕುವುದಿಲ್ಲೆಂದು ಖಚಿತವಾದ ಮೇಲೆ ಕೈಮರದ ಹತ್ತಿರ ಬಯಲಿನಲ್ಲಿ ಅವನು ಇಟ್ಟಿದ್ದ ಶೇಂದಿ ಅಂಗಡಿಗೆ ನುಗ್ಗಿದರು. ಗುಡಿಸಿಲಿನಲ್ಲಿ ಕ್ರೇಟಲಿನ ಒಳಗೆ ಇಟ್ಟಿದ್ದ ಶೇಂದಿ ಷರಾಬಿನ ಬಾಟ್ಲಿಗಳನ್ನೆಲ್ಲಾ ಒಡೆದು ಪುಡಿಪುಡಿಮಾಡಿ ಅವನ ಗುಡಿಸಿಲಿನ ಗಳುವನ್ನು ಎಳೆದು ಗುಡಿಸಲನ್ನು ನೆಲಸಮ ಮಾಡಿ ಶಂಕ್ರಪ್ಪನ ಮೇಲಿನ ಸಿಟ್ಟನ್ನೆಲ್ಲಾ ಅಂಗಡಿಮೇಲೆ ತೀರಿಸಿದರು.

ಪೆಟ್ಟುಬಿದ್ದು ರೋಧಿಸುತ್ತಿದ್ದ ಗಂಡಸರಿಗೆ "ನಿಮ್ಮ ಉಪದ್ರ ಸೈಸಿ ಸೈಸಿ ಸಾಕಾಗಿ ಹೋಗಿದೆ ನಮಗೆ. ನಿವಿದ್ದರೆಷ್ಟು ಸತ್ತರೆಷ್ಟು" ಎಂದೂ ಈಗೇನು ನಿಮ್ಮ ಪ್ರಾಣ ಹೋಯ್ತ? ಇಷ್ಟು ದಿನ ನಿಮ್ಮ ಹೊಡ್ತ ತಿಂದಿದ್ವಲ್ಲಾ ನಾವು ಹೊಡೆದರೆ ಹೆಂಗಿರ್ತದೆ ನೋಡಿ" ಎಂದು ಸಿಡುಕಿದರು.

ತೇಜಸ್ವಿ ಇಂಥ ಸಂವೇದನೆಗಳನ್ನೆಲ್ಲಾ ವರ್ತಮಾನದ ವಾಸ್ತವತೆಯ ಹಿನ್ನೆಲೆಯಲ್ಲಿ ಅಭಿವ್ಯಕ್ತಿಯ ಚಿತ್ರಣವನ್ನು ನೀಡುತ್ತಾರೆ. "ನಂಬೂದರಿಯೊಂದಿಗೆ ಓಡಿಹೋಗಿ ಬಂದ ಕಾಳೇಗೌಡನ ಪತ್ನಿ ನಾಗಮ್ಮನ 'ಶೀಲ'ವನ್ನು ಚರ್ಚೆಯಾಗಿಟ್ಟು-ಕೊಂಡು ಕೂತ ಗಂಡಸರ ಪಂಚಾಯ್ತಿ ಕಟ್ಟೆಯನ್ನೇ ಅಲ್ಲಾಡಿಸಿದ್ದು ದಾನಮ್ಮಳ ಬೈಗುಳಗಳು ಸೌಮ್ಯತೆಯ ಮುಸುಕು ತೊಟ್ಟ 'ಹೇಡಿ' ಗಂಡಸರೂ 'ಗಾಂಚಾಲಿ ಮುಂಡೆಯರು' ಎಂಬ ಬಿರುದು ತೊಟ್ಟ 'ದುಡಿವ' ಹೆಂಗಸರ ಮಧ್ಯದ ಕೇವಲ ವ್ಯಕ್ತಿಯಲ್ಲ. ಅದು ನೈತಿಕ ಶಕ್ತಿ ಕುಡಿತ ಸೋಮಾರಿತನ, ಕಾಡುಹರಟೆ, ಪೆದ್ದು ಕಳೆ, ರಂಪಾಟ, ಜಾತಿ, ರಾಜಕೀಯ ಒಳದರ್ಪ ಇತ್ಯಾದಿಗಳಲ್ಲಿ ಮುಳುಗಿ ಹೋಗಿರುವ ಗಂಡಸರ ವಿರುದ್ಧ ಕಿಡಿಕಾರುವ ದಾನಮ್ಮನ ಝಳಪಿಸುವ ಕತ್ತಿಯೇ ಬೈಯ್ಗಳ. ಬಾಯಿಲ್ಲದ ಹೆಣ್ಣುಗಳಿಗೆ ಬಾಯಿ ಮುಡಿಸಿದ್ದ ದಾನಮ್ಮನ ಈ ಪ್ರವೃತ್ತಿ ಕೇವಲ ಸಿಟ್ಟಿನದಲ್ಲ ಅದು ಒಂದು ತರ್ಕ; ತಿಳಿವಳಿಕೆ, ಯೋಚನೆಯ ಹಿನ್ನೆಲೆಯನ್ನು ಹೊಂದಿದೆ ಎಂಬ ನಿರೂಪಣೆಯಲ್ಲಿ ವಾಸ್ತವವಿದೆ"[೧] ಕನ್ನಡ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿರುವ ಬೈಯ್ಗಳವನ್ನು ಪರಿಣಾಮಕಾರಿ ಮಾಧ್ಯಮವಾಗಿಸಿ ಪ್ರತಿಭಟನೆಯ ಅಸ್ತ್ರವನ್ನಾಗಿ ಚೆನ್ನಾಗಿ ಬಳಸಿಕೊಳ್ಳಬಹುದೆಂಬ ಅರಿವು ತೇಜಸ್ವಿ ಅವರಲ್ಲಿದೆ.

---

೧. ತೇಜಸ್ವಿಲೋಕ, ಸಂ. ಡಿ.ವಿ. ಪ್ರಹ್ಲಾದ್, ೨೦೦೭, ಪುಟ. ೨೬

ತೇಜಸ್ವಿಯವರಂಥ ಸಂವೇದನಾಶೀಲ ಸಾಹಿತ್ಯಕ ಮನಸ್ಸೊಂದು ಮನುಷ್ಯನ ಎಲ್ಲ ಕ್ರಿಯಾವಳಿಗಳ ಬಗ್ಗೆ ಇಟ್ಟುಕೊಂಡಿರುವ ಆಸಕ್ತಿ, ಕಾಳಜಿ ಮತ್ತು ಪ್ರೀತಿಗಳೇ ಇಂಥ ಅತ್ಯುತ್ತಮ ಕತೆಯಾಗಿ ನಿಂತಿದೆ. ಅಲ್ಲದೆ ಈ ಕಥೆಯು ಸ್ತ್ರೀವಾದದ ಹಿನ್ನೆಲೆಯಲ್ಲಿ ಸಮಾನತೆಯ ಎಲ್ಲವಾದಗಳಾಚೆಗೆ ಸಾಗುತ್ತಾ ಗ್ರಾಮೀಣ ಪರಿಸರದ ಮುಗ್ಧವಾದ ಹಾಗೇ ಹಕ್ಕುಗಳ ಜಾಗೃತಿಯ ಹಿನ್ನೆಲೆಯಲ್ಲಿ ಹೋರಾಡುವ ವಿಡಂಬನಾತ್ಮಕ ಕಥೆಯಾಗಿ ಹೊರಹೊಮ್ಮಿದೆ ಎಂದು ಹೇಳಬಹುದು.

ಸ್ತ್ರೀ ಸಂವೇದನೆಯ ದೃಷ್ಟಿಯಿಂದ ತೇಜಸ್ವಿ ಅವರ 'ಅಬಚೂರಿನ ಪೋಸ್ಟಾಫೀಸು' ಮುಖ್ಯವಾದ ಕಥೆಯೆನಿಸುತ್ತವೆ. ಸ್ವಾತಂತ್ರ್ಯಾನಂತರದ ಭಾರತದ ಹೆಣ್ಣು ತನ್ನ ಸುತ್ತಮುತ್ತಲಿನ ಸಮಾಜಕ್ಕೆ ಪ್ರತಿಕ್ರಿಯಿಸುವ ರೀತಿಯನ್ನು ನಾವು ಇಲ್ಲಿ ಕಾಣಬಹುದು. ಸಮಾಜದಲ್ಲಿ ತನಗೆ ಎದುರಾಗುವ ವಿವಿಧ ಸಂದಿಗ್ಧಗಳಿಗೆ ಹೆಣ್ಣು ಯಾವ ರೀತಿಯಲ್ಲಿ ಪ್ರತಿಸ್ಪಂದಿಸುವಳು, ಅವುಗಳನ್ನು ಹೇಗೆ ನಿಭಾಯಿಸುವಳು ಎಂಬ ಅಂಶವನ್ನು ಕಾವೇರಿ ಪಾತ್ರದ ಮೂಲಕ ತಿಳಿಯಬಹುದು. ಕಾವೇರಿ ತನ್ನ ಕುಟುಂಬದೊಳಗೆ ಹಲವು ಸಂದಿಗ್ಧತೆಗಳನ್ನು ಎದುರಿಸಬೇಕಾಗುತ್ತದೆ. ಒಂದು ಕಡೆ ತನ್ನನ್ನು ಸಾಕಿ ಸಲುಹಿ ಬೆಳೆಸಿದ ತಾಯಿಯಾದರೆ ಮತ್ತೊಂದು ಕಡೆ ಕೈ ಹಿಡಿದ ಗಂಡ. ತನ್ನ ಮಗಳು ಎಲ್ಲಿ ಗಂಡನ ಮಾತನ್ನು ಕೇಳಿ ಬೇರೆ ಹೋದರೆ ತನಗೆ ಆಸರೆಯಾಗುವವರು ಯಾರು ಎಂಬ ಕಾರಣಕ್ಕಾಗಿ ಕಾವೇರಿಯನ್ನು ಸಾಕಷ್ಟು ಪ್ರಮಾಣದಲ್ಲಿ ಹತೋಟಿಯಲ್ಲಿಡಲು ಪ್ರಯತ್ನಿಸುತ್ತಾಳೆ. ಮತ್ತೊಂದೆಡೆಯಲ್ಲಿ ಕೈಹಿಡಿದ ಗಂಡ ತನ್ನ ಕಾಮಾಭಿಲಾಷೆಗಳು ಹೆಚ್ಚಾದಾಗ ದೈಹಿಕ ಸುಖಕ್ಕೆ ಹಾತೊರೆಯುತ್ತಿರುತ್ತಾನೆ. ಹೆಣ್ಣಾದವಳಿಗೆ ತನ್ನ ಗಂಡನಿಂದ ಬೇಕೆನಿಸಿದಾಗ ದೈಹಿಕ ಸುಖವನ್ನು ಪಡೆದು ಆತನನ್ನು ದೈಹಿಕವಾಗಿ ತೃಪ್ತಿಪಡಿಸಬೇಕಾಗುವುದು ಸಹಜ. ಗಂಡನ ಜೊತೆಯಲ್ಲಿ ಸರಸ ಸಲ್ಲಾಪದಲ್ಲಿ ತೊಡಗಿದರೆ ತನ್ನ ತಾಯಿಗೆ ಹಿಡಿಸುವುದಿಲ್ಲ. ಗಂಡನೊಂದಿಗೆ ಸಹಕರಿಸದಿದ್ದಲ್ಲಿ ಗಂಡ ಎಲ್ಲಿ ಅನ್ಯ ಸ್ತ್ರೀಯ ಸಂಘ ಬೆಳೆಸುವನೋ ಎನ್ನುವ ಭಯ ಆತಂಕ. ಇಂಥ ಮಾನಸಿಕ ಸಂದಿಗ್ಧತೆಗಳು ಕಾವೇರಿಯಲ್ಲಿ ಉಂಟಾಗುತ್ತವೆ. ಇವುಗಳನ್ನು ನಿಭಾಯಿಸಲು ಕಾವೇರಿ ಮರುಗುತ್ತಾಳೆ. ಆದರೆ ಇವಳ ಮನಸ್ಸು ವಾಲುವುದು ತನ್ನ ತಾಯಿಯ ಕಡೆಗೆ. ಗಂಡನೊಂದಿಗೆ ದೈಹಿಕ ಸುಖವನ್ನು ಪಡೆಯುವ ಆಸೆ ಆಕಾಂಕ್ಷೆಗಳಿದ್ದರೂ ಅವುಗಳನ್ನು ನಿಗ್ರಹಿಸಿ ತನ್ನ ತಾಯಿಯ ಕಡೆಗೆ ಮನಸ್ಸನ್ನು ಹೆಚ್ಚು ಕೇಂದ್ರೀಕರಿಸುತ್ತಾಳೆ.

ಹೀಗೆ ಹೊರಗಿನ ಕ್ರಿಯೆಗಳಿಗೆ, ಸಂಗತಿಗಳಿಗೆ ಕಾವೇರಿ ತನ್ನ ಆಸೆ ಆಕಾಂಕ್ಷೆಗಳನ್ನು ನಿಗ್ರಹಿಸುವ ಮೂಲಕ ತನಗೆ ಸರಿತೋರುವ ಮಾರ್ಗದಲ್ಲಿ ಸಮಾಜದಲ್ಲಿ ಸ್ಪಂದಿಸುತ್ತಾ ಹೋಗುತ್ತಾಳೆ. ಇದಕ್ಕೆ ವಿರುದ್ಧವಾದ ಸಂವೇದನೆಯು ತೇಜಸ್ವಿ ಅವರ ಮತ್ತೊಂದು ಮುಖ್ಯ ಕಥೆಯಾದ 'ಅವನತಿ'ಯಲ್ಲಿ ಕಂಡು ಬರುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹೆಣ್ಣು ಹಲವು ಗೊಂದಲಗಳಿಗೆ ಸಿಲುಕಿ ಅವುಗಳನ್ನು ನಿಭಾಯಿಸುವಂತೆಯೇ ಸಮಾಜದಲ್ಲಿನ ತನ್ನ ಮೇಲಿನ ಶೋಷಣೆಗಳಿಗೆ ಯಾವುದೇ ಪ್ರತಿಭಟನೆಯನ್ನು ತೋರದೆ ತಟಸ್ಥವಾಗಿರುವುದನ್ನು ಇಲ್ಲಿನ ಗೌರಿ ಪಾತ್ರದಲ್ಲಿ ಕಾಣಬಹುದು. ಮಕ್ಕಳು ಹುಟ್ಟಿದ ಕೂಡಲೇ ಸಾವನ್ನಪ್ಪುವುದಕ್ಕೆ ಕಾರಣ ಗೊತ್ತಿದ್ದರೂ ಮಕ್ಕಳು ಸಾಯುವುದಕ್ಕೆ ಗೌರಿಯಲ್ಲೇ ಏನೋ ದೋಷವಿದೆ ಎಂದು ಆಕೆಯ ಸೌಂದರ್ಯವನ್ನು ನಾಶ ಮಾಡುವ ಸ್ಥಿತಿಗೆ ಹೋದರೂ ಗೌರಿ ಆ ಶೋಷಣೆಯನ್ನು ಪ್ರತಿಭಟಿಸುವುದೇ ಇಲ್ಲ. ಸಮಾಜದಲ್ಲಿ ತನ್ನೆದುರಿಗೇ ತನ್ನ ಶೋಷಣೆ ನಡೆಯುತ್ತಿದ್ದರೂ, ಅದನ್ನು ಪ್ರತಿಭಟಿಸಲಾರದ ಸ್ಥಿತಿಯಲ್ಲಿರುವ ಸ್ತ್ರೀಯರು ಇದ್ದಾರೆ ಎನ್ನುವುದನ್ನು ಗೌರಿ ಪ್ರತಿಮಿಸುತ್ತಾಳೆ. ಹಾಗೆಯೇ ಒಂದು ಹೆಣ್ಣಿನ ಮೇಲೆ ಈ ತರಹದ ಶೋಷಣೆಗಳು. ಅವಳ ಸೌಂದರ್ಯವನ್ನು ಕುರೂಪಗೊಳಿಸುವ ಕೃತ್ಯಗಳನ್ನು ಅದೇ ಸಮಾಜದ ಯಾವೊಬ್ಬ ಸ್ತ್ರೀಯೂ ಖಂಡಿಸುವುದೇ ಇಲ್ಲ. ಇಂಥ ಅಂಶಗಳು ಅಂದಿನ ಸಮಾಜದ ಯಥಾ ಸ್ಥಿತಿಗತಿಗಳನ್ನು ಪ್ರತಿಫಲಿಸುತ್ತವೆ.

ತೇಜಸ್ವಿ ಕೆಲವೊಂದು ಕಡೆಗಳಲ್ಲಿ ಹೆಣ್ಣು ಕೋಮಲ, ಮೃದು, ಭಯದ ಸ್ವಭಾವದವಳು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಸಮಾಜದಲ್ಲಿ ಹೆಣ್ಣಾದವಳು ತನ್ನ ಹೆಣ್ತನದ ವಿಷಯವನ್ನು ಅವಳ ಹೆಣ್ತನದ ವೈಯಕ್ತಿಕ ಸಮಸ್ಯೆಗಳನ್ನು ಪುರುಷನ ಮುಂದೆ ನಿವೇದನೆ ಮಾಡಿಕೊಳ್ಳಲು ಸಹಜವಾಗಿ ಭಯಪಡುತ್ತಾಳೆ. ಹಾಗೇ ನಿವೇದನೆ ಮಾಡಿಕೊಳ್ಳಬೇಕಾದ ಸನ್ನಿವೇಶದಲ್ಲಿ ಅವಳು ವಿಪರೀತವಾಗಿ ನಾಚಿಕೆಪಟ್ಟುಕೊಳ್ಳುತ್ತಾಳೆ. ತನ್ನ ವೈಯಕ್ತಿಕವಾದ ದೈಹಿಕ ಸಮಸ್ಯೆಗಳ ಬಗ್ಗೆ ಪುರುಷನ ಮುಂದೆ ಮುಕ್ತವಾಗಿ ತೋಡಿಕೊಳ್ಳುವಲ್ಲಿ ವಿಫಲಳಾಗುತ್ತಾಳೆ. ಇಂಥ ಸಂವೇದನೆಯು 'ಕುಬಿ ಮತ್ತು ಇಯಾಲ' ಕಥೆಯ ಇಯಾಲಾಳ ಸ್ವಭಾವದಿಂದ ತಿಳಿಯುತ್ತದೆ. ಇಯಾಲ ತಾನು ದೊಡ್ಡವಳಾಗಿದ್ದ ಕಾರಣದಿಂದ ವಿಪರೀತ ಹೊಟ್ಟೆನೋವು, ಸೊಂಟದ ನೋವಿನಿಂದ ನರಳುತ್ತಿರುವಾಗ ಅದನ್ನು ವೈದ್ಯರ ಬಳಿಯಲ್ಲಿ ನಿವೇದನೆ ಮಾಡಿಕೊಳ್ಳಲು ಸಹಜವಾಗಿ ನಾಚಿಕೆ ಪಡುತ್ತಾಳೆ ಭಯ, ಆತಂಕಕ್ಕೊಳಗಾಗುತ್ತಾಳೆ.

ನಮ್ಮ ಭಾರತೀಯ ಸಮಾಜದಲ್ಲಿ ಮನುಷ್ಯನ ಜೈವಿಕ ಸ್ವರೂಪವನ್ನು ಆಧಾರವಾಗಿಟ್ಟುಕೊಂಡು, ಆಕ್ರಮಣಶೀಲತೆ, ಸಾಹಸ, ಬಿರುಸು, ಗಟ್ಟಿತನ ಮೊದಲಾದವು ಗಂಡು ಗುಣಗಳೆಂದು, ಕೋಮಲತೆ, ಮಾರ್ದವತೆ, ದುರ್ಬಲತೆ ಇವು ಹೆಣ್ಣುಗುಣಗಳೆಂದು ನಿರ್ಧರಿಸಿ, ಹೆಣ್ಣನ್ನು ದೈಹಿಕವಾಗಿ ಅವಳು ಪುರುಷರಿಗಿಂತ ದುರ್ಬಲಳು ಅವಳು ಯಾವುದೇ ಒರಟಾದ ಕೆಲಸಕಾರ್ಯಗಳನ್ನು ಮಾಡಲು ಆಗುವುದಿಲ್ಲ. ಆದ್ದರಿಂದ ಹೆಣ್ಣು ಪುರುಷನ ರಕ್ಷಣೆ/ವಶದಲ್ಲಿರ ಬೇಕೆಂದು ನಿರ್ಧರಿಸಲಾಗಿದೆ. ಆದರೆ ತೇಜಸ್ವಿ ಅವರ ಕಥೆಗಳನ್ನು ಗಮನಿಸಿದಾಗ ಅದಕ್ಕೆ ವಿರುದ್ಧವಾದ ಪ್ರಕ್ರಿಯೆ ಕಂಡು ಬರುತ್ತದೆ. ತೇಜಸ್ವಿ ಪ್ರಕಾರ ಹೆಣ್ಣು ಅಬಲೆಯಲ್ಲ ಸಬಲೆ. ಅವಳು ಯಾವುದೇ ರೀತಿಯಿಂದಲೂ ದುರ್ಬಲಳಲ್ಲ. ಗ್ರಾಮೀಣ ಪ್ರದೇಶದ ಸ್ತ್ರೀಯರನ್ನು ಗಮನದಲ್ಲಿಟ್ಟು ಕೊಂಡು ತೇಜಸ್ವಿ ಈ ನಿಲುವಿಗೆ ಬರುತ್ತಾರೆ. ಅವರ 'ಕಿರಗೂರಿನ ಗಯ್ಯಾಳಿಗಳು' ಕಥೆಯನ್ನು ಗಮನಿಸಿದಾಗ ಹೆಣ್ಣಿನ ಇಂಥ ಸಂವೇದನೆ ಕಂಡು ಬರುತ್ತದೆ.

ಸ್ವಾತಂತ್ರ್ಯೋತ್ತರ ಭಾರತದ ಗ್ರಾಮೀಣ ಮಹಿಳೆಯರು ತಮ್ಮನ್ನು ದುರ್ಬಲರು ಎಂದು ಜರಿವ ಸಮಾಜಕ್ಕೆ ತಮ್ಮ ಕೆಲಸ ನೈಪುಣ್ಯದ ಮೂಲಕ ಉತ್ತರ ನೀಡಿದ್ದಾರೆ, ನೀಡುತ್ತಿದ್ದಾರೆ. ಸಮಾನ್ಯವಾಗಿ ಕೃಷಿ ಚಟುವಟಿಕೆಗಳಲ್ಲಿ, ಕುಟುಂಬವನ್ನು ನಿರ್ವಹಿಸು-ವುದರಲ್ಲಿ ಗ್ರಾಮೀಣ ಪ್ರದೇಶಗಳ ಸ್ತ್ರೀಯರೇ ಒಂದು ಪಾಲು ಮುಂದಿದ್ದಾರೆ. ಸ್ತ್ರೀಯರು ತಮ್ಮ ಕುಟುಂಬವನ್ನು ನಿರ್ವಹಿಸುವುದರ ಜೊತೆಗೆ ತಮ್ಮ ಹೊಲಗದ್ದೆಗಳ ಕೃಷಿ ಚಟುವಟಿಕೆಗಳಲ್ಲಿ ಶ್ರಮವಹಿಸಿ ದುಡಿಯುತ್ತಾರೆ. ಹಾಗೆಯೇ ಬೇರೆಯವರ ಹೊಲ ಗದ್ದೆಗಳಲ್ಲಿ ಹೋಗಿ ದುಡಿಯುತ್ತಾರೆ. ಇದು ಇಂದಿಗೂ ವಾಸ್ತವವೂ ಹೌದು. ಹಾಗಾಗಿ ದೇಶದ ಆರ್ಥಿಕ ಪ್ರಗತಿಯಲ್ಲಿ, ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಗ್ರಾಮೀಣ ಮಹಿಳೆಯರ ಪಾಲು ಪುರುಷರಿಗಿಂತಲೂ ಹೆಚ್ಚಿದೆ ಎಂಬುದನ್ನು ತೇಜಸ್ವಿ ತಮ್ಮ ಕಥೆಗಳಲ್ಲಿ ಸಂವೇದನಾ ಪೂರ್ವಕವಾಗಿ ಅಭಿವ್ಯಕ್ತಪಡಿಸಿದ್ದಾರೆ. ಹೀಗೆ ದುಡಿಮೆಯ ಕ್ಷೇತ್ರದಲ್ಲಿ ಗ್ರಾಮೀಣ ಹೆಣ್ಣು ದಕ್ಷತೆಯಿಂದ ದುಡಿದು ತನ್ನ ಕುಟುಂಬವನ್ನು ನಿರ್ವಹಿಸುತ್ತಾಳೆ.

ತೇಜಸ್ವಿಯವರ ಕಥೆಗಳಲ್ಲೇ ಭಿನ್ನವಾದ ಕಥೆ ಎಂದರೆ 'ಕಿರಗೂರಿನ ಗಯ್ಯಾಳಿಗಳು'. ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಬಹಳ ಪ್ರಮುಖವಾದುದು. ಸ್ತ್ರೀ

ಸಂವೇದನೆಯ ಪ್ರತಿಭಟನಾತ್ಮಕ ನೆಲೆ ಕಂಡುಬುರುವುದು ಇಲ್ಲಿಯೇ. ಒಂದು ಸಮಾಜದಲ್ಲಿ ಶೋಷಣೆ ಇರುತ್ತದೆ. ಅಲ್ಲಿ ಸಹಿಸಿಕೊಳ್ಳುವ ಪ್ರಕ್ರಿಯೆಯಿಂದಲೇ ಶೋಷಣೆ ಮಿತಿ ಮೀರಿ ಬೆಳೆಯುತ್ತದೆ. ಶೋಷಣೆಯು ಅತಿಯಾದಾಗ ಕೆಲವೊಮ್ಮೆ ಸಹಿಸಿಕೊಳ್ಳುವಿಕೆ ಪ್ರಕ್ರಿಯೆಯ ಕಟ್ಟೆಯೊಡೆದು ಅದು ಪ್ರತಿಭಟನಾತ್ಮಕ ರೂಪವನ್ನು ಪಡೆಯುತ್ತದೆ. ಇಂಥ ಸಂವೇದನೆಯು 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಮಡುಗಟ್ಟಿದೆ. ಇಲ್ಲಿನ ಸ್ತ್ರೀಯರು ಗಂಡಸರ ಉಪಟಳ ತಮ್ಮ ಮೇಲೆ ವಿಪರೀತವಾದಾಗ ಅದಕ್ಕೆ ಪ್ರತಿಭಟನೆಯ ಮೂಲಕ ಪ್ರತಿಕ್ರಿಯಿಸುತ್ತಾರೆ. ಇಲ್ಲಿನ 'ಗಯ್ಯಾಳಿಗಳು' ಎಂಬ ಪದವೇ ವಿಶಿಷ್ಟವಾಗಿದ್ದು ಅದು ಗಟ್ಟಿತನವನ್ನು ಸೂಚಿಸುತ್ತದೆ. 'ಗಯ್ಯಾಳಿತನ' ಎನ್ನುವುದು ಅನ್ಯಾಯದ ವಿರುದ್ಧವಾಗಿದೆ. ಗಾಳಿಯ ಪ್ರಭಾವ ತನ್ನ ಮನೆಯ ಮೇಲೆ ಆದಾಗ ದಾನಮ್ಮ ತನ್ನ ಬೈಯ್ಗುಳದ ಮೂಲಕ ಗಾಳಿಯ ಮೇಲೆ ಆಕ್ರಮಣ ಮಾಡುತ್ತಾಳೆ. ತನ್ನ ಸ್ವಾತಂತ್ರ್ಯವನ್ನು ಹರಣ ಮಾಡುವ ಯಾವುದೇ ಶಕ್ತಿಯ ವಿರುದ್ಧ ತಾನು ತಿರುಗಿಬೀಳಬಲ್ಲೆ ಎನ್ನುವಂತೆ ದಾನಮ್ಮನ ಬೈಯ್ಗಳ ಧ್ವನಿಸುತ್ತದೆ.

ಕಥೆಯಲ್ಲಿ ಪ್ರತಿಭಟನಾ ಸಂವೇದನೆ ಪ್ರಕಟಗೊಳ್ಳುವುದು ದಾನಮ್ಮನ ರೂಪದಲ್ಲಿ. ಅಂದರೆ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಿಕ್ಕಾಗಿ ವೈಯಕ್ತಿಕ ಹಂತದಲ್ಲಿ ದಾನಮ್ಮ ತನ್ನ ಎಚ್ಚರವನ್ನು ಪ್ರಕಟಿಸುತ್ತಾ ಪ್ರತಿಭಟಿಸುತ್ತಾಳೆ. ನಂತರ ದಾನಮ್ಮನ ಮೂಲಕವಾಗಿ ಸಾಮೂಹಿಕ ಎಚ್ಚರ ಪ್ರಕಟಗೊಳ್ಳುತ್ತದೆ. ಇಲ್ಲಿ ಪ್ರತಿಭಟನೆ ವ್ಯಕ್ತಿ ಹಂತದಲ್ಲಿ ಆರಂಭವಾಗಿ, ಕಡೆಯಲ್ಲಿ ಇಡೀ ಹಳ್ಳಿಯ ಹೆಂಗಸರೆಲ್ಲ ಸ್ಫೋಟಗೊಳ್ಳುತ್ತಾರೆ. ಹಲವಾರು ವರ್ಷಗಳಿಂದ ಗಂಡಸರ ಉಪಟಳವನ್ನು ಸಹಿಸಿಕೊಂಡಿದ್ದ ಹೆಂಗಸರೆಲ್ಲಾ ದಾನಮ್ಮನ ಸ್ಫೂರ್ತಿಯಿಂದಾಗಿ ಸ್ಫೋಟಗೊಳ್ಳುವ ಪ್ರಕ್ರಿಯೆ ಕಂಡುಬರುತ್ತದೆ. ಸ್ತ್ರೀ ಸಮುದಾಯದ ಸ್ಫೋಟಕ್ಕೆ ಮೂಲ ಕಾರಣ, ಹೆಗ್ಡೆ ಪಂಚಾಯ್ತಿಯಲ್ಲಿ ನಾಗಮ್ಮನಿಗೆ ಬೆತ್ತದಿಂದ ಬಾರಿಸಿದ್ದರಿಂದಾಗಿ, ಅದನ್ನು ಸಹಿಸದ ಸ್ತ್ರೀ ಸಮೂಹ ಸಾಮೂಹಿಕವಾಗಿ ಗಂಡಸರ ಮೇಲೆ ಆಕ್ರಮಣ ಮಾಡುತ್ತಾರೆ. ಪ್ರತಿಭಟನೆ ಆರಂಭದಲ್ಲಿ ಬೈಯ್ಗುಳದ ಮೂಲಕವಾಗಿ ಇದ್ದದ್ದು ನಂತರದಲ್ಲಿ ಹೊಡೆತಗಳನ್ನು ನೀಡುವ ಮಟ್ಟಕ್ಕೆ ಹೋಗಿ ಸೇಂದಿಯ ಅಂಗಡಿಯನ್ನು ಧ್ವಂಸ ಮಾಡುವ ಹಂತಕ್ಕೆ ಹೋಗಿ ನಿಲ್ಲುತ್ತದೆ.

ಶತಶತಮಾನಗಳಿಂದ ಶೋಷಣೆಗೆ ಒಳಗಾಗಿ ಗಂಡಸಿನ ಅಧೀನದಲ್ಲಿ ಬದುಕಿದ್ದ ಮಹಿಳೆಯರು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಶೋಷಣೆಯ ವಿರುದ್ಧ ತಿರುಗಿ ಬಿದ್ದು

ಪ್ರತಿಭಟನೆಯ ಮೂಲಕ ಸ್ತ್ರೀ ಚಳವಳಿ ಉಗಮವಾಗಿ, ಸ್ತ್ರೀ ಎಚ್ಚೆತ್ತುಕೊಂಡಿದ್ದಾಳೆ. ಅಂದರೆ ತನ್ನ ಮೇಲಿನ ಧ್ವಂಸಕ ಕೃತ್ಯಗಳನ್ನು ಆಕೆ ಪ್ರತಿಭಟಿಸುತ್ತಿದ್ದಾಳೆ. ತೇಜಸ್ವಿ ಅವರ ಕಥೆಯ ಕೊನೆಯಲ್ಲಿ ಹೇಳುವ ಹಾಗೆ ಕಿರಗೂರಿನ ಗಯ್ಯಾಳಿಗಳು ಸೇಂದಿ ಅಂಗಡಿ ನಾಶ ಮಾಡಿದ ಸುದ್ದಿ ಅದು ಹೇಗೋ ರೈತ ಚಳವಳಿಗೆ ಸ್ಫೂರ್ತಿ ಕೊಟ್ಟಿತು.....". ಹೀಗೆ 'ಕಿರಗೂರಿನ ಗಯ್ಯಾಳಿಗಳು' ಸ್ತ್ರೀ ಸಮೂಹದ ಧನಿಯನ್ನು, ಸಂವೇದನೆಯನ್ನು ಪ್ರಕಟಪಡಿಸುವ ಬಗೆ ಅನನ್ಯವಾದುದಾಗಿದೆ.

ಹೀಗೆ ತೇಜಸ್ವಿ ಅವರು ಹೆಣ್ಣಿನ ವಿವಿಧ ರೀತಿಯ ಸಂವೇದನೆಗಳನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಒಬ್ಬ ಲೇಖಕಿ ತನ್ನ ಸಂವೇದನೆ-ಗಳನ್ನು ಎಷ್ಟು ಸಹಜವಾಗಿ ಅಭಿವ್ಯಕ್ತಪಡಿಸಬಹುದೋ ಅಷ್ಟೇ ಆಪ್ತವಾಗಿ ತೇಜಸ್ವಿ ಸ್ತ್ರೀ ಬದುಕನ್ನು ಸಂವೇದನಾ ಪೂರ್ವಕವಾಗಿ ಕಟ್ಟಿಕೊಟ್ಟಿದ್ದಾರೆ. ಕೆಲವು ಕಥೆಗಳಲ್ಲಿ ಸಾಂಪ್ರದಾಯಿಕ ಸಮಾಜದ ಸ್ತ್ರೀಯರ ಸಂವೇದನೆಗಳು ಕಂಡುಬಂದರೆ ಕೆಲವು ಕಥೆಗಳಲ್ಲಿ ಅದಕ್ಕೆ ವಿರುದ್ಧವಾದ ಆಧುನಿಕ, ಪ್ರತಿಭಟನಾಶೀಲ ಸ್ತ್ರೀಯರ ಸಂವೇದನೆಗಳು ಕಂಡುಬರುತ್ತವೆ. ತೇಜಸ್ವಿಯವರ ಸ್ತ್ರೀ ಸಂವೇದನೆಯೆಲ್ಲವೂ ಗ್ರಾಮೀಣ ಸ್ತ್ರೀಯರವೇ ಆಗಿವೆ. ಗ್ರಾಮೀಣ ಮಹಿಳೆಯರ ಬದುಕು ಇವರ ಕಥೆಗಳಲ್ಲಿ ಅಭಿವ್ಯಕ್ತವಾಗಿವೆ. ತೇಜಸ್ವಿ ವರ್ತಮಾನದ ಹಿನ್ನೆಲೆಯಲ್ಲಿ ವಾಸ್ತವತೆಯ ಆಧಾರದ ಮೇಲೆ ಸ್ತ್ರೀ ಬದುಕನ್ನು ನೋಡಿದ್ದಾರೆ.

ಒಟ್ಟಾರೆಯಾಗಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಒಬ್ಬ ಸೃಜನಶೀಲ ಚಿಂತಕರಾಗಿದ್ದು ಅವರ ಕತೆಗಳಲ್ಲಿ ವರ್ತಮಾನ ಸಮಾಜದ ಸಂವೇದನೆಗಳು ಹಾಸುಹೊಕ್ಕಾಗಿವೆ. ಅದರಲ್ಲೂ ಅವರ ಕತೆಗಳಲ್ಲಿ ಸ್ತ್ರೀ ಸಂವೇದನೆಯು ವಾಸ್ತವವಾದಿ ಹಿನ್ನೆಲೆಯಲ್ಲಿ ಮುಡಿಬಂದಿದೆ. ಅವರ ಬರವಣಿಗೆಯ ಕೇಂದ್ರದಲ್ಲಿಯೇ ವರ್ತಮಾನದ ತಳಮಳಗಳು, ಬದುಕಿನ ಪ್ರಶ್ನೆಗಳು, ಕಳೆದುಹೋಗುತ್ತಿರುವ ನಮ್ಮ ವ್ಯಕ್ತಿತ್ವದ ವಿಶಿಷ್ಟತೆಗಳು ಪರಸ್ಪರ ಒಂದಕ್ಕೊಂದು ಸೆಣಸಾಡುತ್ತಿರುವ ಚಿತ್ರಣ ಗೋಚರವಾಗುತ್ತದೆ. ತೇಜಸ್ವಿ ವರ್ತಮಾನದ ಮೇಲೆ ನಿಂತು ಬದುಕನ್ನು ತಾವು ಗ್ರಹಿಸಿದಂತೆ ಬಿಚ್ಚಿಡಲು ಪ್ರಯತ್ನಿಸಿದ್ದರಿಂದ ಸ್ತ್ರೀ ಸಂವೇದನೆಯು ಅವರ ಕತೆಗಳಲ್ಲಿ ಒಂದು ಪ್ರಬಲ ಆಶಯವಾಗಿ ಮೂಡಿ ಬರಲು ಸಾಧ್ಯವಾಯಿತು. ಅವರ ಮೂರು ಕಥಾ ಸಂಕಲನ-ಗಳನ್ನು ಗಮನಿಸಿದಾಗ ಹಂತಹಂತವಾಗಿ ಒಂದಕ್ಕಿಂತ ಒಂದು ವಿಶಿಷ್ಟವಾಗಿ ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಪಡಿಸಿವೆ.

ಉಪಸಂಹಾರ

ತೇಜಸ್ವಿ ಕನ್ನಡ ಸಾಹಿತ್ಯಲೋಕ ಕಂಡಂಥ ವಿಶೇಷ ಬರಹಗಾರ. ಜಾತಿ ಧರ್ಮಕ್ಕೆ ಅತೀತರಾಗಿ ಬದುಕಿನ ವಾಸ್ತವತೆಗಳನ್ನು ತಮ್ಮ ಬರಹಗಳಲ್ಲಿ ಮಾತ್ರವಲ್ಲದೆ ಸಾಮಾಜಿಕ ಜೀವನದಲ್ಲಿಯೂ ಬದಲಾವಣೆಯ ದೃಷ್ಟಿಯಿಂದ ನೋಡಿದ ವಿಶಿಷ್ಟ ಮನಸ್ಥಿತಿ ಉಳ್ಳವರು. ನವ್ಯ–ನವ್ಯೋತ್ತರ ಕಾಲಘಟ್ಟಗಳ ನಡುವೆ ತಮ್ಮದೇ ವಿಶಿಷ್ಟ ಅಭಿವ್ಯಕ್ತಿ ಮಾರ್ಗಗಳನ್ನು ರೂಪಿಸಿಕೊಂಡವರು. ಇವರು ಕನ್ನಡದ ಮಹತ್ವದ ಕಥೆಗಾರರಲ್ಲಿ ಒಬ್ಬರು.

ತೇಜಸ್ವಿ ಕಥೆಗಾರರಾಗಿ ಬಹಳ ಪ್ರಮುಖರೆನಿಸುತ್ತಾರೆ. ಕಾರಣ, ಅವರ ಕಥೆಗಳಲ್ಲಿ ಮನುಷ್ಯನ ಜೀವನದ ವಿವಿಧ ಸಂವೇದನೆಗಳನ್ನು ವಾಸ್ತವ ಪ್ರಪಂಚದ ಹಿನ್ನೆಲೆಯಲ್ಲಿ ಅನಾವರಣ ಮಾಡುತ್ತಾ ಹೋಗುವುದು. ತೇಜಸ್ವಿ ತಮ್ಮ ಕಥೆಗಳಲ್ಲಿ ಆಧುನಿಕತೆ ಸಾಮಾಜಿಕ ಬದುಕಿನಲ್ಲಿ ತಂದೊಡ್ಡುವ ಸಮಸ್ಯೆಗಳು, ಅವರಿಂದ ಬಿಡುಗಡೆ ಹೊಂದಲು ಹೆಣಗುವ ರೀತಿ, ನಂತರ ಆ ಸಮಾಜ ಆಧುನಿಕತೆಯಿಂದ ಹೇಗೆ ಅವನತಿ ಹೊಂದುವುದು ಎಂಬ ಕಠೋರ ವಾಸ್ತವಗಳನ್ನು ಗುರುತಿಸುತ್ತಾರೆ. ಇವರ ಕಥೆಗಳಲ್ಲಿ ಸ್ಥಳೀಯ ಸಂಸ್ಕೃತಿ, ಕೃಷಿ ಭಾಷೆಗೆ ಹೆಚ್ಚು ಒತ್ತು ನೀಡಿದ್ದಾರೆ. ಅವರು ದಿನನಿತ್ಯ ಗ್ರಾಮ್ಯ ವ್ಯಕ್ತಿಗಳು ವ್ಯವಹರಿಸುವ ಭಾಷೆಯನ್ನೇ ಕಥೆಗಳಲ್ಲಿ ತಂದಿದ್ದಾರೆ.

ತೇಜಸ್ವಿ ಅವರ ಸಾಹಿತ್ಯದಲ್ಲಿ ಹಲವಾರು ಸಂವೇದನೆಗಳು ಕಂಡುಬರುತ್ತವೆ. ಅದರಲ್ಲೂ ಸ್ತ್ರೀ ಸಂವೇದನೆಯು ಅವರ ಕಥೆಗಳಲ್ಲಿ ಬಹಳ ವಿಶಿಷ್ಟವಾಗಿ ಅಭಿವ್ಯಕ್ತವಾಗಿದೆ. ಗ್ರಾಮೀಣ ಪ್ರದೇಶದ ಸ್ತ್ರೀಯರ ಬದುಕಿನ ವಿವಿಧ ರೀತಿಯ ಅನುಭವಗಳು, ಆ ಅನುಭವಗಳಿಗೆ ಅವರ ಪ್ರತಿಕ್ರಿಯೆಗಳು ಇವುಗಳನ್ನೆಲ್ಲಾ ತೇಜಸ್ವಿ ತಮ್ಮ ಕಥೆಗಳಲ್ಲಿ ಹಿಡಿದಿಟ್ಟಿದ್ದಾರೆ. ತೇಜಸ್ವಿ ಅವರ ಕಥೆಗಳಲ್ಲೆಲ್ಲೂ ಪಟ್ಟಣ ಪ್ರದೇಶದ ಸ್ತ್ರೀಯರ ಸಂವೇದನೆಗಳು ಅನಾವರಣಗೊಳ್ಳುವುದಿಲ್ಲ. ಇದಕ್ಕೆ ಬದಲು ಗ್ರಾಮೀಣ ಮಹಿಳೆಯರ ಸಂವೇದನೆಗಳೇ ಹೆಚ್ಚು ಮಡುಗಟ್ಟಿ ನಿಂತಿವೆ. ಅದಕ್ಕೆ ಕಾರಣ ತೇಜಸ್ವಿ ಅವರು ಗ್ರಾಮೀಣ ಸಂಸ್ಕೃತಿಯ ಕಡೆಗೆ ಹೆಚ್ಚು ಒಲವನ್ನು ತೋರಿರುವುದು.

ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಎಂದೋ ಅನುಭವಿಸಿದ್ದ ಪ್ರಸಂಗಗಳೇ ತೇಜಸ್ವಿಯವರ ಕೈಗೆ ಸಿಕ್ಕಿ ಅಪರೂಪದ ಕಥೆಗಳಾಗಿವೆ. ಅವು ನಮ್ಮವೇ ಆದ

ಅನುಭವಗಳು ಎಂಬಂತೆ ಅವರ ಕಥೆಗಳನ್ನು ಓದಿದವರಿಗೆ ಅನ್ನಿಸದಿರುವುದಿಲ್ಲ. ಅಷ್ಟರಮಟ್ಟಿಗೆ ಅವರು ತಮ್ಮ ಕಥೆಗಳಲ್ಲಿ ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಪಡಿಸಿದ್ದಾರೆ.

ತೇಜಸ್ವಿ ಅವರ ಸ್ತ್ರೀ ಬಗೆಗಿನ ನಿಲುವು ಬಹಳ ವಿಶಿಷ್ಟವಾದುದು, ಸಮಕಾಲೀನ ಸಮಾಜದಲ್ಲಿನ ಹೆಣ್ಣಿನ ವಿವಿಧ ಸಂವೇದನೆಗಳು ಅವರ ಕಥೆಗಳಲ್ಲಿ ಮಡುಗಟ್ಟಿ ನಿಂತಿದೆ. ತೇಜಸ್ವಿ ಹೆಣ್ಣನ್ನು ತಾಯಿ, ಹೆಂಡತಿ, ಸೊಸೆ, ಗೃಹಿಣಿ ಮುಂತಾದ ಕೌಟುಂಬಿಕ ನೆಲೆಯಲ್ಲಿ ಗುರುತಿಸುತ್ತಾರಾದರೂ, ವಾಸ್ತವವಾದಿ ಹಿನ್ನೆಲೆಯಲ್ಲಿ ಅವರು ನೋಡುತ್ತಾರೆ. ಇವರ ಕಥೆಗಳಲ್ಲಿ ಕೆಲವೆಡೆ ಹೆಣ್ಣು ತನ್ನ ಮೇಲೆ ನಡೆಯುವ ಶೋಷಣೆಯನ್ನು ಪ್ರತಿಭಟಿಸಲಾರದೆ, ಅದಕ್ಕೆ ತನ್ನ ಪ್ರತಿಕ್ರಿಯೆಯನ್ನು ಹೊರಹಾಕದೆ ತನ್ನಲ್ಲಿಯೇ ನೋವನ್ನು ಅಡಗಿಸಿಟ್ಟುಕೊಂಡು ವ್ಯವಸ್ಥೆಗೆ ಹೊಂದಿಕೊಂಡಿದ್ದಾಳೆ. ಅದು ಅಂದಂದಿನ ಸಮಕಾಲೀನ ಸಮಾಜದ ಸ್ಥಿತಿಗತಿಯ ಪರಿಣಾಮ. ಆದರೆ ಮತ್ತೆ ಕೆಲವೆಡೆಯಲ್ಲಿ ತನ್ನ ಮೇಲಿನ ಶೋಷಣೆಯನ್ನು ಸಹಿಸಿ ಸಹಿಸಿ ತಾಳಲಾರದೆ ಪುರುಷ ವ್ಯವಸ್ಥೆಯ ವಿರುದ್ಧ ಸಿಡಿದೇಳುವ, ಪ್ರತಿಕ್ರಿಯಿಸುವ ಪ್ರಕ್ರಿಯೆ ಕಂಡುಬಂದಿದೆ. ಅಂದರೆ, ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಇವರ ಕಥೆಗಳನ್ನು ಗಮನಿಸಿದ ಮೇಲೆ ತಿಳಿದು ಬರುವುದೇನೆಂದರೆ ಹೆಣ್ಣು ಕಾಣಲಾದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು, ತನ್ನ ಅಸ್ತಿತ್ವವನ್ನು ಸ್ಥಾಪಿಸಲು, ತನ್ನ ಮೆಲಿನ ಶೋಷಣೆಯ ವಿರುದ್ಧವಾಗಿ ಹೋರಾಡತೊಡಗಿದ್ದಾಳೆ ಎಂಬುದು.

ತೇಜಸ್ವಿ ಅವರ 'ಕಿರಗೂರಿನ ಗಯ್ಯಾಳಿಗಳು' ಕಥೆ ಅವರ ಇತರೆ ಕಥೆಗಳಿಗಿಂತಲೂ ವಿಸೀಷ್ಟವಾದುದು. ಸ್ತ್ರೀ ಚಳವಳಿಯ ಹಿನ್ನಲೆಯಲ್ಲಿ ಇದು ಬಹಳ ಪ್ರಮುಖವೆನಿಸುತ್ತದೆ. ಹೆಣ್ಣಿನ ಹೋರಾಟಕ್ಕೊಂದು ಸ್ಪಷ್ಟ ರೂಪವೊಂದು ಇಲ್ಲಿ ಸಿಗುತ್ತದೆ. ಗ್ರಾಮೀಣ ಹೆಣ್ಣಿನ ಎಲ್ಲಾ ರೀತಿಯ ಸಂವೇದನೆಗಳು ಇಲ್ಲಿ ಸಂಮಿಳಿತವಾಗಿವೆ.

ತೇಜಸ್ವಿ ಅವರು ಪಾಶ್ಚಿಮಾತ್ಯ ಸ್ತ್ರೀವಾದದಿಂದ ಪ್ರಭಾವಿತರಾಗಿದ್ದಾರೆ ಎನಿಸುತ್ತದೆ. ಸ್ತ್ರೀವಾದಿ ಹಿನ್ನೆಲೆಯಲ್ಲಿ ಇವರ ಕಥೆಗಳ ಅಧ್ಯಯನ ಮುಖ್ಯ ಎನಿಸುವುದು. ಆ ಕಾರಣಕ್ಕಾಗಿ ಇಲ್ಲಿ ಪಾಶ್ಚಿಮಾತ್ಯ ಸ್ತ್ರೀವಾದವನ್ನು ಪ್ರತ್ಯೇಕ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹತ್ತೊಂಬತ್ತು, ಇಪ್ಪತ್ತನೇ ಶತಮಾನಗಲ್ಲಿ ಮೇರಿ ವುಲ್ಫ್‌ಸ್ಟನ್ ಕ್ರಾಫ್ಟ್, ವರ್ಜೀನಿಯಾ ವುಲ್ಫ್, ಸಿಮೋನ್‌ದಬೋವಾ, ಬೆಟಿ ಫ್ರೀಡನ್, ಕೇಟ್‌ಮಿಲೆಟ್ ಮುಂತಾದ ಸ್ತ್ರೀವಾದಿ

ಚಿಂತಕಿಯರ ಚಿಂತನೆಗಳ ಫಲವಾಗಿ ಸ್ತ್ರೀವಾದ ಹೇಗೆ ಅಸ್ತಿತ್ವಕ್ಕೆ ಬಂದಿತು ಎಂಬುದರ ಚರ್ಚೆಯನ್ನು ಮಾಡಲಾಗಿದೆ.

ಸ್ತ್ರೀಸಂವೇದನೆ ಮತ್ತು ಅದರ ಸ್ವರೂಪ ಹೇಗೆ ಕಾಲದಿಂದ ಕಾಲಕ್ಕೆ ಹೇಗೆ ವಿಭಿನ್ನ ರೀತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ವ್ಯಕ್ತವಾಗಿದೆ ಎಂಬುದನ್ನು ಸಂಕ್ಷೇಪ್ತವಾಗಿ ಪ್ರತ್ಯೇಕ ಅಧ್ಯಾಯವೊಂದರಲ್ಲಿ ವಿವೇಚಿಸಿರುವುದು ಈ ನಿಬಂಧದ ಹಿನ್ನೆಲೆಯಲ್ಲಿ ಪ್ರಮುಖವೆನಿಸಿದೆ. ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಸ್ತ್ರೀ ಹೇಗೆ ಪ್ರತಿಕ್ರಿಯಿಸಿದ್ದಾಳೆ ಎಂಬ ಅಂಶ ಇಲ್ಲಿ ತಿಳಿದುಬರುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯನ್ನು ಕುರಿತ ಹಾಗೆ ಹಲವಾರು ಲೇಖಕರು, ಲೇಖಕಿಯರು ತಮ್ಮ ಕಥೆ ಕಾದಂಬರಿ, ಕಾವ್ಯ, ನಾಟಕಗಳಲ್ಲಿ ತಂದಿದ್ದಾರೆ. ತೇಜಸ್ವಿ ಅವರ ಕಥೆಗಳನ್ನು 'ಸ್ತ್ರೀ ಸಂವೇದನಾ' ದೃಷ್ಟಿಯಿಂದ ಅಧ್ಯಯನ ಕ್ಕೊಳಪಡಿಸಿದ ಮೇಲೆ ಹೆಣ್ಣಿನ ಬಗೆಗಿನ ತೇಜಸ್ವಿ ಅವರ ನಿಲುವು ಇತರೆ ಎಲ್ಲಾ ಲೇಖಕರು ತರುವ ಸಂವೇದನೆಗಿಂತಲೂ ಭಿನ್ನವಾಗಿ, ವಿಶಿಷ್ಟವಾಗಿ ಕಂಡುಬರುತ್ತದೆ.

ಒಟ್ಟಾರೆಯಾಗಿ ತೇಜಸ್ವಿ ಅವರ ಸಾಹಿತ್ಯದ ಮೇಲೆ ವಿವಿಧ ಆಯಾಮದ ಅಧ್ಯಯನಗಳು ನಡೆದಿದ್ದು, ಸ್ತ್ರೀ ಸಂವೇದನಾ ನಿಟ್ಟಿನ ಅಧ್ಯಯನ ನಡೆದಿರುವುದಿಲ್ಲ, ಹಾಗಾಗಿ ಈ ನಿಂಬಂಧ ಆ ದೃಷ್ಟಿಯಿಂದ ಬಹಳ ಮಹತ್ವವಾದುದು ಎನಿಸುತ್ತದೆ. ಜೀವನವನ್ನು ತಮ್ಮ ಸುತ್ತಲಿನ ಬದುಕನ್ನು ಬಹಳ ಆಳವಾಗಿ ಸೂಕ್ಷ್ಮವಾಗಿ ನೋಡುತ್ತಿದ್ದ ತೇಜಸ್ವಿ ಹೆಣ್ಣಿನ ಬಗೆಗೆ, ಅವಳ ಸಂವೇದನೆಯ ಬಗೆಗೆ ವಿಶೇಷವಾದ ಗಮನವನ್ನು ಹರಿಸಿದ್ದರು ಎಂಬುದು ತಿಳಿಯುತ್ತದೆ. ಅಲ್ಲದೆ, ಒಬ್ಬ ಸೃಜನಶೀಲ ಹೆಣ್ಣು ಮನಸ್ಸು ತನ್ನ ಅನುಭವವನ್ನು ಸಾಹಿತ್ಯದ ಮುಖೇನ ತೆರೆದಿಟ್ಟಿದ್ದರೆ ಎಷ್ಟು ಪರಿಣಾಮಕಾರಿಯಾಗಿ ಮೂಡಿಬರುತ್ತಿತ್ತೋ ಅಷ್ಟು ಪರಿಣಾಮಕಾರಿಯಾಗಿ ಆಪ್ತವಾಗಿ ತೇಜಸ್ವಿ ಹೆಣ್ಣಿನ ಬದುಕನ್ನು ಅವಳ ಸಂವೇದನೆಯನ್ನು· ಅನಾವರಣಗೊಳಿಸಿದ್ದಾರೆ ಎಂಬುದು ಈ ನಿಬಂಧದ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಆಕರ ಗ್ರಂಥಗಳು

೧. ಪೂರ್ಣಚಂದ್ರ ತೇಜಸ್ವಿ ಕೆ.ಪಿ. ೨೦೧೧ ಹುಲಿಯೂರಿನ ಸರಹದ್ದು, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು.

೨. ಪೂರ್ಣಚಂದ್ರ ತೇಜಸ್ವಿಕೆ.ಪಿ. ೨೦೧೦ ಅಬಚೂರಿನ ಪೋಸ್ಟಾಫೀಸು, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು.

೩. ಪೂರ್ಣಚಂದ್ರ ತೇಜಸ್ವಿಕೆ.ಪಿ. ೨೦೧೧ ಕಿರಗೂರಿನ ಗಯ್ಯಾಳಿಗಳು, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು

ಪರಾಮರ್ಶನ ಗ್ರಂಥಗಳು

೧ ಅಶೋಕ.ಟಿ.ಪಿ ೨೦೦೪ ತೇಜಸ್ವಿ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨ ಡಾ.ಕೇಶವಶರ್ಮ.ಕೆ ೨೦೦೮ ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩ ಪ್ರಹ್ಲಾದ್ ಡಿ.ವಿ. (ಸಂ) ೨೦೦೭ ತೇಜಸ್ವಿ ಲೋಕ, ಸಂಚಯ, ಬೆಂಗಳೂರು

೪ ಪ್ರೊ.ಜಿ.ಟಿ.ವೀರಪ್ಪ ಡಾ.ಎಂ.ಭೈರೇಗೌಡ (ಸಂ) ೨೦೦೪ ತೇಜಸ್ವಿ ಸಾಹಿತ್ಯ ಕೃಷಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೫ ಪ್ರೇಮಾ ಆರ್.ಜಿ. ಅಪಚಂದ ಸರೋಜಾ ಎಸ್.ಸಂತಿ ಭಾಗ್ಯಶ್ರೀ ಹ. ದೊಡ್ಡಮನಿ, ಡಾ. ಈ. ಯರ್‍ರಿಸ್ವಾಮಿ ೨೦೧೦ ಲಿಂಗ ವ್ಯವಸ್ಥೆ ಸಂಕಥನ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.

೬ ಬರಗೂರು ರಾಮಚಂದ್ರಪ್ಪ (ಸಂ) ೨೦೦೬ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭ ಬರಗೂರು ರಾಮಚಂದ್ರಪ್ಪ (ಸಂ) ೨೦೦೬ ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮	ರಾಮಚಂದ್ರನ್ ಸಿ.ಎನ್.	೨೦೦೭	ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೯	ವಿಜಯಾದಬ್ಬೆ	೧೯೯೭	ನಾರಿ; ದಾರಿ–ದಿಗಂತ, ರಚನಾ ಪ್ರಕಾಶನ ಮೈಸೂರು.
೧೦	ವಿಜಯಾದಬ್ಬೆ	೧೯೮೯	ಮಹಿಳೆ ಸಾಹಿತ್ಯ ಸಮಾಜ, ರಚನಾ ಪ್ರಕಾಶನ, ಮೈಸೂರು.
೧೧	ಡಾ.ವಿಠಲರಾವ್ ಗಾಯಕ್ವಾಡ್ (ಅನುವಾದ)	೨೦೦೧	ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೨	ಡಾ. ಸಬಿಹಾ ಭೂಮಿಗೌಡ(ಸಂ)	೨೦೦೬	ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೧೩	ಡಾ.ಸಬೀಹಾ ಭೂಮಿಗೌಡ ಡಾ.ಮಲ್ಲಿಕಾ ಘಂಟಿ(ಸಂ)	೨೦೦೬	ಕನ್ನಡ ಸಾಹಿತ್ಯ ಮತ್ತು ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೧೪	ಸಾ.ರಾ.ಅಬೂಬಕರ್	೨೦೦೭	ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೫	ಸಿದ್ಧಲಿಂಗಯ್ಯ ಜಿ.ಎಸ್. ಕೃಷ್ಣಯ್ಯ ಎಂ.ಎಚ್. (ಸಂ)		ಸಾಲು ದೀಪಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೧೬	ಡಾ.ಸುಮಿತ್ರಾಬಾಯಿ ಬಿ.ಎನ್.	೨೦೦೬	ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೧೭	ಡಾ.ಹಳ್ಳಿಕೇರಿ ಎಫ್.ಟಿ ಡಾ.ರವೀಂದ್ರನಾಥ.ಕೆ.(ಸಂ)	೨೦೦೨	ದಶಕದ ಕನ್ನಡ ಸಾಹಿತ್ಯ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೮	ಡಾ.ಹೇಮಲತಾ ಎಚ್.ಎಂ..		ಮಹಿಳಾ ಅಧ್ಯಯನ–೪, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

*****